ಗುರುವಾರ, ಮೇ 14, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 133 | ಪುಟ 14
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಪುರುಷರ ತಂಡಕ್ಕೆ ಮೊದಲ ಮಹಿಳಾ ಕೋಚ್
ಇಂಗ್ಲೆಂಡ್‌ನ ಮಾಜಿ ಆಟಗಾರ್ತಿ ಸಾರಾ ಟೇಲರ್ ಅವರು ತಮ್ಮ ತವರು ದೇಶದ ಪುರುಷರ ಟೆಸ್ಟ್ ಕ್ರಿಕೆಟ್ ತಂಡಕ್ಕೆ ಫೀಲ್ಡಿಂಗ್ ಕೋಚ್ ಆಗಿ ನೇಮಕವಾಗಿದ್ದಾರೆ

ಸೆನ್ಸೆಕ್ಸ್ 74,608 | ನಿಫ್ಟಿ 23,412 | $/₹ 95.80 | ಚಿನ್ನ (Std. 10g) ₹1,72,920 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,04,880 (ಬೆಂಗಳೂರು)

ಏರಿದ ಸುಂಕ: ಚಿನ್ನ ತುಟ್ಟಿ

ಮಿತವ್ಯಯಕ್ಕೆ ಪ್ರಧಾನಿ ಕರೆ ನೀಡಿದ ಕೆಲವೇ ದಿನಗಳಲ್ಲಿ ಕೇಂದ್ರದಿಂದ ತೀರ್ಮಾನ

ನವದೆಹಲಿ (ಪಿಟಿಐ): ಅತ್ಯವಶ್ಯ ಅಲ್ಲದ ವಸ್ತುಗಳ ಆಮದನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಚಿನ್ನ ಮತ್ತು ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಶೇ 15ಕ್ಕೆ ಹೆಚ್ಚಳ ಮಾಡಿದೆ.

ಚಿನ್ನ ಹಾಗೂ ಬೆಳ್ಳಿಯ ಮೇಲಿನ ಆಮದು ಸುಂಕವು ಶೇ 6ರಷ್ಟು ಇದ್ದಿದ್ದು, ಬುಧವಾರದಿಂದ (ಮೇ 13) ಅನ್ವಯ ಆಗುವಂತೆ ಶೇ 15ಕ್ಕೆ ಹೆಚ್ಚಳವಾಗಿದೆ. ಪ್ಲಾಟಿನಂ ಲೋಹದ ಮೇಲಿನ ಆಮದು ಸುಂಕ ಶೇ 6.4ರಷ್ಟು ಇದ್ದಿದ್ದನ್ನು ಶೇ 15.4ಕ್ಕೆ ಹೆಚ್ಚು ಮಾಡಲಾಗಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ 2025–26ನೆಯ ಹಣಕಾಸು ವರ್ಷದಲ್ಲಿ ಚಿನ್ನ ಹಾಗೂ ಬೆಳ್ಳಿಯ ಆಮದು ಬೆಲೆಯ ಲೆಕ್ಕದಲ್ಲಿ ಶೇ 26.7ರಷ್ಟು ಹೆಚ್ಚಳ ಕಂಡಿದೆ. ತೂಕದ ಲೆಕ್ಕದಲ್ಲಿ ಆಮದು ಶೇ 4.76ರಷ್ಟು ಕಡಿಮೆ ಆಗಿದೆ.

2024–25ರಲ್ಲಿ ದೇಶದ ಒಟ್ಟು ಆಮದಿನಲ್ಲಿ ಚಿನ್ನ ಮತ್ತು ಬೆಳ್ಳಿಯ ಆಮದು ಶೇ 11.8ರಷ್ಟು ಪಾಲನ್ನು ಹೊಂದಿತ್ತು. ಆದರೆ ಅದು 2025–26ನೆಯ ಹಣಕಾಸು ವರ್ಷದಲ್ಲಿ ಶೇ 14ಕ್ಕೆ ಹೆಚ್ಚಳ ಕಂಡಿದೆ.

ಚಿನ್ನದ ಖರೀದಿಯನ್ನು ವರ್ಷದ ಅವಧಿಗೆ ಮುಂದೂಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ಕರೆ ನೀಡಿದ ನಂತರದಲ್ಲಿ ಸುಂಕ ಹೆಚ್ಚಳದ ತೀರ್ಮಾನ ಪ್ರಕಟವಾಗಿದೆ.

ಬೆಂಗಳೂರಿನಲ್ಲಿ ಚಿನ್ನದ ದರ ಏರಿಕೆ (ಪ್ರತಿ 10 ಗ್ರಾಮ್‌ಗೆ)



10 ಗ್ರಾಂಗೆ ₹27 ಸಾವಿರ ಏರಿಕೆ

ಆಮದು ಸುಂಕವನ್ನು ಹೆಚ್ಚಿಸಿರುವ ಪರಿಣಾಮವಾಗಿ ಚಿನ್ನದ ಬೆಲೆಯು 10 ಗ್ರಾಂಗಳಿಗೆ ಅಂದಾಜು ₹27 ಸಾವಿರದಷ್ಟು ಜಾಸ್ತಿ ಆಗಲಿದೆ ಎಂದು ಅಖಿಲ ಭಾರತ ರತ್ನ ಮತ್ತು ಆಭರಣ ಮಂಡಳಿ (ಜಿಜೆಸಿ) ಅಧ್ಯಕ್ಷ ರಾಜೇಶ್ ರೋಕ್ಡೆ ತಿಳಿಸಿದ್ದಾರೆ. 'ಇದರಿಂದಾಗಿ ಕಾಳಸಂತೆಗೆ ಇಂಬು ಕೊಟ್ಟಂತೆ ಆಗಬಹುದು ಎಂಬುದು ಉದ್ಯಮದಲ್ಲಿನ ಆತಂಕ. ಚಿನ್ನ, ಬೆಳ್ಳಿಯ ಕಳ್ಳಸಾಗಣೆ ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಶಮನ ಆಗುವವರೆಗೂ ಆಮದು ಸುಂಕವು ಹೆಚ್ಚಿನ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ ಎಂದು ಸೆನ್ಕೊ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯ ಸಿಇಒ ಸುವಾಂಕರ್ ಸೇನ್ ತಿಳಿಸಿದ್ದಾರೆ.

'ಅಂದಾಜು ಒಂದು ವರ್ಷ ಸುಂಕವು ಇದೇ ಮಟ್ಟದಲ್ಲಿ ಉಳಿಯಬಹುದು. ಚಿನ್ನ, ಬೆಳ್ಳಿಯ ಖರೀದಿ ಪ್ರಮಾಣವು ತೂಕದ ಲೆಕ್ಕದಲ್ಲಿ ಶೇ 10ರಿಂದ ಶೇ 15ರವರೆಗೆ ಕಡಿಮೆ ಆಗಬಹುದು. ಆದರೆ ಮೌಲ್ಯದ ಲೆಕ್ಕದಲ್ಲಿ ಅದು ಕಡಿಮೆ ಆಗಲಿಕ್ಕಿಲ್ಲ. ಗ್ರಾಹಕರು ಕಡಿಮೆ ತೂಕದ ಆಭರಣ ಗಳನ್ನು ಖರೀದಿಸುತ್ತಾರೆ' ಎಂದು ಅವರು ಅಂದಾಜು ಮಾಡಿದ್ದಾರೆ.

ಜಾಗತಿಕವಾಗಿ ಚೀನಾ ಹೊರತು ಪಡಿಸಿದರೆ ಚಿನ್ನವನ್ನು ಅತಿಹೆಚ್ಚು ಆಮದು ಮಾಡಿಕೊಳ್ಳುವ ದೇಶ ಭಾರತ. ಇಲ್ಲಿನ ಚಿನ್ನಾಭರಣ ಉದ್ಯಮದ ಬೇಡಿಕೆಗೆ ಅನುಗುಣವಾಗಿ ಚಿನ್ನದ ಆಮದು ಆಗುತ್ತದೆ. ಚಿನ್ನದ ಆಮದು ವಿದೇಶಿ ವಿನಿಮಯದ ಹೊರ ಹರಿವಿಗೆ ಕಾರಣವಾಗುತ್ತದೆ.

▶10

ಜಿಗಿದ ಬೆಲೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಅಮೂಲ್ಯ ಲೋಹಗಳ ಆಮದು ಮೇಲಿನ ಸುಂಕವನ್ನು ಹೆಚ್ಚಿಸಿದ ನಂತರದಲ್ಲಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಭಾರಿ ಏರಿಕೆಯಾಗಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹8,550 ಹೆಚ್ಚಳವಾಗಿ, ₹1,65,350ರಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿ ಗೆ ₹20,500 ಜಿಗಿತವಾಗಿದ್ದು, ₹2,97,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಹೆಚ್ಚಿನ ಸುಂಕದ ನಿಜವಾದ ಪರಿಣಾಮವು, ಖರೀದಿ ಬಿಲ್‌ನಲ್ಲಿ ನಮೂದಾದ ನಂತರದಲ್ಲಿ ಗೊತ್ತಾಗಲಿದೆ ಎಂದು ವರ್ತಕರು ಹೇಳಿದ್ದಾರೆ.

ಭೀತಿಗೆ ಕಾರಣ ಇಲ್ಲ

ಸುಂಕದ ಹೆಚ್ಚಳದ ಪರಿಣಾಮವಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಜಾಸ್ತಿ ಆಗುವ ಅಂದಾಜು ಇದೆ. ತಾತ್ಕಾಲಿಕವಾಗಿ ಚಿನ್ನದ ಬೇಡಿಕೆ ಇಳಿಯಬಹುದು. ಆದರೆ ಹೂಡಿಕೆದಾರರ ಪಾಲಿಗೆ ಇದು ಭೀತಿಗೆ ಕಾರಣ ಆಗಬಾರದು. ಚಿನ್ನವು ಸುರಕ್ಷಿತ ಹೂಡಿಕೆ ಆಸ್ತಿಯಾಗಿ ಮುಂದುವರಿಯಲಿದೆ. ಅದರಲ್ಲೂ ಮುಖ್ಯವಾಗಿ, ಜಾಗತಿಕ ಮಟ್ಟದಲ್ಲಿ ಅನಿಶ್ಚಿತ ಸ್ಥಿತಿ ಇದ್ದಾಗ, ದೇಶಿ ಕರೆನ್ಸಿಯ ಮೇಲೆ ಒತ್ತಡ ಇದ್ದಾಗ ಚಿನ್ನ ಸುರಕ್ಷಿತ ಹೂಡಿಕೆಯಾಗಿ ಇರುತ್ತದೆ

ಹರೀಶ್ ವಿ., ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸರಕು ವಿಭಾಗದ ಸಂಶೋಧನಾ ಮುಖ್ಯಸ್ಥ

ಐವರ ಬಂಧನ, ದೇಶದ ವಿವಿಧೆಡೆ ಶೋಧ, ಶಂಕಿತರ ವಿಚಾರಣೆ ತೀವ್ರ

ನೀಟ್: ಸಿಬಿಐ ತನಿಖೆ ಚುರುಕು

ನವದೆಹಲಿ (ಪಿಟಿಐ): ನೀಟ್-ಯುಜಿ 2026ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸಿಬಿಐ ಬುಧವಾರ ಐವರನ್ನು ಬಂಧಿಸಿದ್ದು, ದೇಶದಾದ್ಯಂತ ವಿವಿಧೆಡೆ ಶೋಧ ನಡೆಸಿದೆ.

ಮಂಗಿಲಾಲ್ ಬಿವಾಲ್, ವಿಕಾಸ್ ಬಿವಾಲ್ ಮತ್ತು ದಿನೇಶ್ ಬಿವಾಲ್ ಸೇರಿ ಜೈಪುರದಿಂದ ಮೂವರು, ಗುರುಗ್ರಾಮದಿಂದ ಯಶ್ ಯಾದವ್ ಮತ್ತು ನಾಸಿಕ್‌ನಿಂದ ಶುಭಂ ಖೈರ್‌ನಾರ್ ಸೇರಿ ಒಟ್ಟು ಐವರು ಆರೋಪಿಗಳನ್ನು ಸಿಬಿಐ ಬಂಧಿಸಿದೆ. ಇನ್ನೂ ಹಲವು ಶಂಕಿತರ ವಿಚಾರಣೆ ನಡೆಯುತ್ತಿದ್ದು, ಅವರನ್ನು ನಂತರ ಬಂಧಿಸಲಾಗುವುದು ಎಂದು ಮೂಲಗಳು ಹೇಳಿವೆ.

ನಾಸಿಕ್‌ನಲ್ಲಿ ಬಂಧಿತನಾಗಿರುವ ಬಿಎಎಂಎಸ್ ವಿದ್ಯಾರ್ಥಿ ಶುಭಂ ಖೈರ್‌ನಾರ್ (30) ಎಂಬಾತನನ್ನು ಹೆಚ್ಚಿನ ವಿಚಾರಣೆಗಾಗಿ, ಸ್ಥಳೀಯ ನ್ಯಾಯಾಲಯ ದಿಂದ ಎರಡು ದಿನಗಳ ಸಂಚಾರ ಅನುಮತಿ (ಟ್ರಾನ್ಸಿಟ್ ರಿಮ್ಯಾಂಡ್) ಪಡೆದು ಸಿಬಿಐ ದೆಹಲಿಗೆ ಕರೆದುಕೊಂಡು ಬಂದಿದೆ. ರಾಜಸ್ಥಾನ ಪೊಲೀಸರ ಮನವಿಯ ಮೇರೆಗೆ ನಾಸಿಕ್ ಪೊಲೀಸರು ಖೈರ್‌ನಾರ್‌ನನ್ನು ಮಂಗಳವಾರ ಬಂಧಿಸಿದ್ದರು. ಶಂಕಿತರಿಂದ ಮೊಬೈಲ್, ಲ್ಯಾಪ್‌ಟಾಪ್ ಸೇರಿ ಡಿಜಿಟಲ್ ಉಪಕರಣಗಳನ್ನು ವಶಕ್ಕೆ ಪಡೆದಿರುವ ಸಿಬಿಐ, ಪ್ರಶ್ನೆಪತ್ರಿಕೆ ವಿತರಿಸಲು ಬಳಸಲಾದ ಅಪ್ಲಿಕೇಶನ್‌ಗಳ ಪತ್ತೆಗೆ ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿದೆ ಎಂದು ಮೂಲಗಳು ತಿಳಿಸಿವೆ.

ಇನ್ನಷ್ಟು ಸುದ್ದಿಗಳು 4

ನೀಟ್ ಅಕ್ರಮದ ಬಗ್ಗೆ ಯುವಜನರು ಹೊಣೆಗಾರಿಕೆ ಕೇಳಬೇಕು. ಬಾಂಗ್ಲಾದೇಶ, ನೇಪಾಳ ಮಾದರಿಯಲ್ಲಿ ಭಾರತದಲ್ಲಿ ಜೆನ್ ಝೀ ತಲೆಮಾರಿನವರು ಬೀದಿಗಿಳಿಯಬೇಕು

ಅರವಿಂದ ಕೇಜ್ರಿವಾಲ್, ಎಎಪಿ ರಾಷ್ಟ್ರೀಯ ಸಂಚಾಲಕ

ಪ್ರಶ್ನೆಪತ್ರಿಕೆಯಲ್ಲಿ ಏನಿತ್ತು?

ಸೋರಿಕೆಯಾದ ಪ್ರಶ್ನೆಪತ್ರಿಕೆಯಲ್ಲಿ (ಪಿಡಿಎಫ್ ಫೈಲ್) ರಸಾಯನ ವಿಜ್ಞಾನದ 45 ಹಾಗೂ ಜೀವ ವಿಜ್ಞಾನದ 90 ಪ್ರಶ್ನೆ ಮತ್ತು ಉತ್ತರಗಳಿದ್ದವು. ಇವು ನೀಟ್-ಯುಜಿ 2026ರ ಪ್ರಶ್ನೆ–ಉತ್ತರಗಳಿಗೆ ಹೊಂದಿಕೆಯಾಗಿವೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. 'ಪ್ರೈವೆಟ್ ಮಾಫಿಯಾ' ಎಂಬ ಗುಂಪಿನಲ್ಲಿ ಪಾಸ್‌ವರ್ಡ್ ರಕ್ಷಣೆಯೊಂದಿಗೆ ಪಿಡಿಎಫ್ ಸ್ವರೂಪದಲ್ಲಿ ಪ್ರಶ್ನೆಪತ್ರಿಕೆ ಹಂಚಿಕೊಳ್ಳಲಾಗಿತ್ತು. ರಾಜಸ್ಥಾನದ ನೀಟ್ ಕೋಚಿಂಗ್ ಸೆಂಟರ್‌ಗಳಿಗೂ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೂ ನೇರ ಸಂಬಂಧ ಇಲ್ಲ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

ತಮಿಳುನಾಡು ವಿಶ್ವಾಸ ಗೆದ್ದ 'ವಿಜಯ'

ವಿಜಯ್

ಚೆನ್ನೈ/ನವದೆಹಲಿ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ವಿಧಾನ ಸಭೆಯಲ್ಲಿ ಬುಧವಾರ ವಿಶ್ವಾಸಮತವನ್ನು ಸಾಬೀತುಪಡಿಸಿದರು.

ವಿವರ ಪುಟ 11

ಹಿಜಾಬ್, ಜನಿವಾರ ಧರಿಸಲು ಅವಕಾಶ

ಬೆಂಗಳೂರು: ಶಾಲಾ–ಕಾಲೇಜುಗಳಲ್ಲಿ ವಸ್ತ್ರಸಂಹಿತೆ ನಿಗದಿಪಡಿಸಿ 2022ರಲ್ಲಿ ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದ್ದು, ಹಿಜಾಬ್ ಹಾಗೂ ಜನಿವಾರ ಸೇರಿದಂತೆ ಆಚರಣೆಗೆ ಸಂಬಂಧಿಸಿದ ಸಂಕೇತಗಳನ್ನು ಧರಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ತಿಳಿಸಿದರು.

ವಿವರ ಪುಟ 4

ಚಿನಕುರುಳಿ ಪ್ರಕಾಶ್ ಶೆಟ್ಟಿ





ಮುಷ್ಕರ: ಜೀವರಕ್ಷಕ ಔಷಧ ದಾಸ್ತಾನಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಔಷಧ ಮಾರಾಟ ವಿರೋಧಿಸಿ ಔಷಧ ವ್ಯಾಪಾರಿಗಳು ಇದೇ 20ರಂದು ದೇಶದಾದ್ಯಂತ ಮುಷ್ಕರ ನಡೆಸುತ್ತಿರುವ ಕಾರಣ, ಜೀವರಕ್ಷಕ ಔಷಧಗಳು ಕೊರತೆ ಆಗದಂತೆ ಕ್ರಮ ವಹಿಸಲು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದೆ.

ಇ-ಫಾರ್ಮಸಿ ವೇದಿಕೆಗಳು ಒದಗಿಸುವ ಭಾರಿ ರಿಯಾಯಿತಿಯನ್ನು ವಿರೋಧಿಸಿರುವ ಆಲ್ ಇಂಡಿಯಾ ಆರ್ಗನೈಸೇಷನ್ ಆಫ್ ಕೆಮಿಸ್ಟ್ ಆ್ಯಂಡ್ ಡ್ರಗ್ಗಿಸ್ಟ್, ದೇಶದಾದ್ಯಂತ ಮುಷ್ಕರಕ್ಕೆ ಕರೆ ನೀಡಿದೆ.

'ಔಷಧ ವ್ಯಾಪಾರಿಗಳ ಸಂಘದ ರಾಜ್ಯ ಪದಾಧಿಕಾರಿಗಳೊಂದಿಗೆ ಆನ್‌ಲೈನ್ ವೇದಿಕೆ ಮೂಲಕ ಸಭೆ ನಡೆಸಿ, ಅವರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಜೀವರಕ್ಷಕ ಔಷಧಗಳು ಜನರಿಗೆ ಲಭ್ಯವಾಗುವಂತಾಗಲು ಆಸ್ಪತ್ರೆ ಹಾಗೂ ನರ್ಸಿಂಗ್ ಹೋಮ್ ಆವರಣದಲ್ಲಿ ಇರುವ ಔಷಧ ಮಳಿಗೆಗಳನ್ನು ಮುಚ್ಚದಿರಲು ಮನವಿ ಮಾಡಲಾಗಿದೆ' ಎಂದು ಇಲಾಖೆ ಆಯುಕ್ತ ಕೆ.ಶ್ರೀನಿವಾಸ ತಿಳಿಸಿದ್ದಾರೆ.

'ರಾಜ್ಯದ ಎಲ್ಲ ಜಿಲ್ಲಾ ಆರೋಗ್ಯಾಧಿಕಾರಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವರಕ್ಷಕ ಔಷಧ ಕೊರತೆಯಾಗದಂತೆ ಕ್ರಮವಹಿಸಲಿದ್ದಾರೆ. ಜಿಲ್ಲಾಮಟ್ಟದಲ್ಲಿ ಸಹಾಯಕ ಔಷಧ ನಿಯಂತ್ರಕರನ್ನು ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಬಸ್ ಆದ್ಯತಾ ಪಥ'ಕ್ಕೆ ಹೊಸ ರೂಪ

ಹೊರ ವರ್ತುಲ ರಸ್ತೆಯಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರ ವರ್ತುಲ ರಸ್ತೆಯಲ್ಲಿ(ಒಆರ್‌ಆರ್) ವಾಹನ ದಟ್ಟಣೆ ನಿಯಂತ್ರಿಸಿ, ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬಿಎಂಆರ್‌ಸಿಎಲ್, ಪೊಲೀಸ್ ಇಲಾಖೆ, ಬಿಎಂಟಿಸಿ ಅಧಿಕಾರಿಗಳು, ಹೊರ ವರ್ತುಲ ರಸ್ತೆಯಲ್ಲಿರುವ ವಿವಿಧ ಕಂಪನಿಗಳ ಅಸೋಸಿಯೇಷನ್ ಪ್ರತಿನಿಧಿಗಳೊಂದಿಗೆ ಬುಧವಾರ ಸಭೆ ನಡೆಸಿದರು.

ಕಂಪನಿಗಳಿಗೆ ಕೆಲಸಕ್ಕೆ ಬರುವವರು ದ್ವಿಚಕ್ರ ವಾಹನ ಬಳಕೆಯನ್ನು ಕಡಿಮೆ ಮಾಡಿ ಸಾರ್ವಜನಿಕ ಸಾರಿಗೆ ಬಳಸುವಂತೆ ಉತ್ತೇಜಿಸಲು ಕ್ರಮ ಕೈಗೊಳ್ಳಲು ಸಭೆ ನಿರ್ಧರಿಸಿತು. ಅಲ್ಲದೇ, ಹೊರ ವರ್ತುಲ ರಸ್ತೆಯಲ್ಲಿ ಹೊಸ ರೂಪದಲ್ಲಿ ಬಸ್ ಆದ್ಯತಾ ಪಥ ನಿರ್ಮಾಣ ಮಾಡುವುದರ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ನೇತೃತ್ವದಲ್ಲಿ ಈ ಸಭೆ ನಡೆಯಿತು.

ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಮಾತನಾಡಿ, 'ಬಸ್ ಆದ್ಯತಾ ಪಥವನ್ನು ಹೈ ಆಕ್ಯುಪೆನ್ಸಿ ವಾಹನ(ಎಚ್‌ಒವಿ) ಮಾರ್ಗಗಳಾಗಿ ಬದಲಾವಣೆ ಮಾಡಬಹುದು. ಆಗ, ಮೂರು ಮಂದಿಗಿಂತ ಹೆಚ್ಚು ಪ್ರಯಾಣಿಕರಿರುವ ವಾಹನಗಳೂ ಈ ಮಾರ್ಗವನ್ನು ಬಳಸಬಹುದಾಗಿದೆ' ಎಂದು ಸಲಹೆ ನೀಡಿದರು.

'ಹೊರವರ್ತುಲ ರಸ್ತೆಯಲ್ಲಿ ಬಸ್ ಆದ್ಯತಾ ಪಥವು ಯಶಸ್ವಿ ಆಗಿತ್ತು. ಅದೇ ಆಧಾರದಲ್ಲಿ ಎಚ್‌ಒವಿ ಮಾರ್ಗಗಳನ್ನು ಈ ಪ್ರದೇಶಕ್ಕೆ ಪರಿಹಾರ ನೀಡಬಹುದು' ಎಂದು ಸಂಚಾರ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದರು.

ಕೋವಿಡ್ ಲಾಕ್‌ಡೌನ್‌ಗೂ ಮೊದಲು ಬಸ್ ಆದ್ಯತಾ ಪಥಗಳು ಕಾರ್ಯ ನಿರ್ವಹಿಸುತ್ತಿದ್ದವು. ಆಗ ಬಸ್‌ಗಳು 15 ನಿಮಿಷ ಬೇಗ ತಲುಪುತ್ತಿದ್ದವು. ಇಂಧನವೂ ಉಳಿತಾಯವಾಗುತ್ತಿತ್ತು. ಪ್ರಯಾಣಿಕರ ಸಂಖ್ಯೆಯಲ್ಲೂ ಶೇ 4ರಷ್ಟು ಏರಿಕೆ ಆಗಿತ್ತು ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ.ಪ್ರಭಾಕರ್ ರೆಡ್ಡಿ ಮಾಹಿತಿ ಹಂಚಿಕೊಂಡರು. ಪ್ರಸ್ತುತ ಹೊರ ವರ್ತುಲ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳ ನಾಲ್ಕು ಸಾವಿರ ಟ್ರಿಪ್ ಸಂಚರಿಸುತ್ತಿವೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಕೆ.ಬಿ.ಶಿವಕುಮಾರ್ ಮಾತನಾಡಿ, ಹೊರ ವರ್ತುಲ ರಸ್ತೆಯಲ್ಲಿ ಇರುವ ಕಂಪನಿಗಳಿಗೆ ವಿಶೇಷ ಬಸ್ ಸೇವೆ ಕಲ್ಪಿಸಲು ಬಿಎಂಟಿಸಿ ಸಂಸಿದ್ಧವಾಗಿದೆ ಎಂದು ಹೇಳಿದರು.

ಕೋವಿಡ್‌ಗೂ ಮುನ್ನ ಐಟಿ ಪಾರ್ಕ್‌ಗಳಿಗೆ ಮೀಸಲಿಟ್ಟ ಬಸ್ ವ್ಯವಸ್ಥೆಯನ್ನು ಮತ್ತೆ ಆರಂಭಿಸುವಂತೆಯೂ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಜಿಬಿಎ ಆಯುಕ್ತ ಮಹೇಶ್ವರ ರಾವ್ ಮಾತನಾಡಿ, ಹೊರ ವರ್ತುಲ ರಸ್ತೆಯಲ್ಲಿ ಸುಧಾರಣೆ ತರಲು ಮತ್ತಷ್ಟು ಯೋಜನೆ ಜಾರಿಗೆ ತರಲಾಗುವುದು. ಮೂಲ ಸೌಕರ್ಯಗಳನ್ನೂ ಕಲ್ಪಿಸಲಾಗುವುದು ಎಂದು ಹೇಳಿದರು.

'ಇಬ್ಲೂರ್ ಜಂಕ್ಷನ್ ಸಂಪೂರ್ಣ ಮರು ವಿನ್ಯಾಸ ಮಾಡಲು ಚಿಂತಿಸಲಾಗಿದೆ. ಅಲ್ಲದೇ ಇಬ್ಲೂರ್ ಜಂಕ್ಷನ್‌ನಲ್ಲಿ ಹೆಬ್ಬಾಳ ಮೇಲ್ಸೇತುವೆ ಹಾಗೂ ಮಾರತ್‌ಹಳ್ಳಿಯ ಆಸ್ಪತ್ರೆ ಬಳಿ ಮತ್ತೊಂದು ಮೇಲ್ಸೇತುವೆ ನಿರ್ಮಾಣಕ್ಕೂ ಚಿಂತಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು. ವಿವಿಧ ಐಟಿ ಕಂಪನಿಗಳ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ಇದೇ ವೇಳೆ ಹೇಳಿಕೊಂಡರು.

ನಗರಸಭಾ ಕಾರ್ಯಾಲಯ
ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.
ಸಂಖ್ಯೆ: ನ.ಸ.ಗೌ/ತಾ.ಶಾ/ಸಿ.ಆರ್/28/2026-27 ದಿನಾಂಕ:11.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಗೌರಿಬಿದನೂರು ಚಿಕ್ಕಬಳ್ಳಾಪುರ ಜಿಲ್ಲೆ. ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2026-27ನೇ ಸಾಲಿನ ನಗರಸಭಾ ನಿಧಿ ಅನುದಾನದ ಯೋಜನೆಯಡಿಯಲ್ಲಿ ಐಟಂವಾರು ಟೆಂಡರ್‌ಗಳನ್ನು standard bidding documents KW-1 ಟೆಂಡರ್ ದಸ್ತಾವೇಜಿನಲ್ಲಿ DMA/2026-27/RD/WORK_INDENT58268, DMA/2026-27/OW/WORK_INDENT57201, DMA/2026-27/RD/WORK_INDENT57187 ಇ-ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 26.05.2026 ರ ಸಂಜೆ 5.00 ಘಂಟೆ.** (2) ಟೆಂಡರ್ ತೆರೆಯುವ **ದಿನಾಂಕ: 27.05.2026 ರ ಸಂಜೆ 5.30 ಘಂಟೆ.** (3) ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಸಮಯದಲ್ಲಿ ನಗರಸಭೆಯ ಪೌರಾಯುಕ್ತರು/ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಪೌರಾಯುಕ್ತರು, ನಗರಸಭೆ, ಗೌರಿಬಿದನೂರು
ಸಹಿ/- ಆಡಳಿತಾಧಿಕಾರಿಗಳು/ಜಿಲ್ಲಾಧಿಕಾರಿಗಳು, ನಗರಸಭೆಗೌರಿಬಿದನೂರು
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:58/ಕೆ.ಎಸ್.ಎಂ.ಸಿ.ಎ/2026-27

ಬೆಂಗಳೂರು ಉತ್ತರ ನಗರ ಪಾಲಿಕೆ
ಮುಖ್ಯ ಪಶುವೈದ್ಯಾಧಿಕಾರಿ ಮತ್ತು ಮುಖ್ಯಸ್ಥರ ಕಚೇರಿ (ಎಹೆಚ್), ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು-560092.
ಟೆಂಡರ್ ನಂ.: ಬೆಂಉನಪಾ/ಸಿವಿಓ&ಹೆಚ್(ಎಹೆಚ್)/ಟೆಂಡರ್/01/26-27 ದಿನಾಂಕ : 13.05.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಮುಖ್ಯ ಪಶುವೈದ್ಯಾಧಿಕಾರಿ ಮತ್ತು ಮುಖ್ಯಸ್ಥರು (ಪಶುಪಾಲನೆ), ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ರವರು ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ವ್ಯಾಪ್ತಿಯಲ್ಲಿ ಸಾಂಸ್ಥಿಕ ನಾಯಿಗಳನ್ನು ಹಿಡಿಯುವುದು ಮತ್ತು ಆಶ್ರಯ ನೀಡುವ ಕಾಮಗಾರಿಯನ್ನು ಮಾಡಿರುವ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಆಹ್ವಾನಿಸಿರುತ್ತಾರೆ. ಜೊತೆಗೆ ಮುಖ್ಯ ಪಶುವೈದ್ಯಾಧಿಕಾರಿ ಮತ್ತು ಮುಖ್ಯಸ್ಥರು (ಪಶುಪಾಲನೆ), ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ಇವರಿಂದ ಕೆಪಿಪಿ ಪೋರ್ಟಲ್ ಮೂಲಕ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣವನ್ನು ಮಾಡಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂಉನಪಾ) ವ್ಯಾಪ್ತಿಗಳಲ್ಲಿ ಸಾಂಸ್ಥಿಕ ನಾಯಿಗಳನ್ನು ಹಿಡಿಯುವುದು ಮತ್ತು ಆಶ್ರಯ ನೀಡುವ ಸಲಹಾ ಸೇವೆಗಳು. **ಟೆಂಡರ್‌ಗಿಟ್ಟ ಮೊತ್ತ: ರೂ. 183.60 ಲಕ್ಷಗಳು, ಇಎಂಡಿ : ರೂ. 2,75,400/-.**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **19.05.2026 @ 11.30 ಗಂಟೆಗೆ,** ಮುಖ್ಯ ಪಶುವೈದ್ಯಾಧಿಕಾರಿ ಮತ್ತು ಮುಖ್ಯಸ್ಥರ ಕಚೇರಿ (ಎಹೆಚ್) ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು-560092 (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **28.05.2026 ರಂದು ಸಂಜೆ 4:00 ರವರೆಗೆ** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **29.05.2026 ರಂದು ಸಂಜೆ 4:30 ಗಂಟೆಗೆ.**

ಸಹಿ/- ಮುಖ್ಯ ಪಶುವೈದ್ಯಾಧಿಕಾರಿ ಮತ್ತು ಮುಖ್ಯಸ್ಥರು (ಎಹೆಚ್), ಬೆಂಉನಪಾ

PM SHRI JAWAHAR NAVODAYA VIDYALAYA, DODDABALLAPUR, BANGALORE RURAL
WALK IN INTERVIEW
Date: 13.05.2026

Walk-in-Interview for the post of Matron will be conducted in the Office of the PM Shri Jawahar Navodaya Vidyalaya, Doddaballapur, Bangalore Rural District against the vacancy for the session 2026-27 to appoint Matrons on contract basis on **25.05.2026 at 11.00 am**.

The interested candidates may appear for the interview physically with original documents with 1 set of Xerox copies (II PUC) and Experience Certificate.

For further details, Contact numbers 9480193995 (Office Superintendent) /7981061072(SSA)

Sd/-
PRINCIPAL

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್
ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. **CIN : L23209KA1977PLC043357**
E-mail : info@gpl.in, secretarial@gujaratpetrosynthese.com Website: www.gpl.in

ಮಾರ್ಚ್ 31, 2026ರ ತ್ರೈಮಾಸಿಕ ಹಾಗೂ ವರ್ಷದ ಅವಧಿಗೆ ಅಂತ್ಯಗೊಂಡ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್
(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಮಾರ್ಚ್ 2026 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2026 ವರ್ಷಕ್ಕೆ ಅಂತ್ಯಗೊಂಡ	ಮಾರ್ಚ್ 2025 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2025 ವರ್ಷಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	67,785	2,57,119	54,615	2,01,372
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	4,704	29,038	6,006	22,100
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	4,704	29,038	6,006	22,100
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	4,271	23,574	4,975	14,603
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	4,271	23,574	4,975	14,603
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969	5,969
7	ಮೀಸಲು(ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ				4,39,528
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.72	3.95	0.83	2.45

ಸೂಚನೆಗಳು:
A) ಈ ಮೇಲಿನವು 31ನೇ ಮಾರ್ಚ್ 2026ರ ತ್ರೈಮಾಸಿಕ ಹಾಗೂ ವರ್ಷದ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಮೇ 13, 2026 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಮೇಲಿನ ಫಲಿತಾಂಶಗಳ ಸೀಮಿತ ಪರಿಶೀಲನೆಯನ್ನು ನಡೆಸಿದ್ದಾರೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಕೆಳಗೆ ನೀಡಲಾದ ಕ್ಯೂಆರ್ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವನ್ನು ಪಡೆಯಬಹುದು. B) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತದೆ. C) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ / ಮರು ಜೋಡಿಸಲಾಗಿದೆ. D) ಜನವರಿ 30, 2026 ದಿನಾಂಕದ ಸುತ್ತೋಲೆ ಸಂಖ್ಯೆ HO/38/13/11(2)2026-MIRSD-POD/ I/3750/2026 ರ ಅನ್ವಯ, ಏಪ್ರಿಲ್ 2019 ಕ್ಕಿಂತ ಮೊದಲು ಸಲ್ಲಿಕೆಯಾಗಿ ದಾಖಲೆಗಳ ಕೊರತೆ/ಪ್ರಕ್ರಿಯೆ ಅಥವಾ ಇತರ ಕಾರಣಗಳಿಂದಾಗಿ ವಾಪಸ್ ಬಂದಿರುವ/ತಿರಸ್ಕರಿಸಲ್ಪಟ್ಟಿರುವ ಭೌತಿಕ ಶೇರು ವರ್ಗಾವಣೆ ಪತ್ರಗಳನ್ನು ಮರು-ಸಲ್ಲಿಸಲು ಸೆಕ್ಯೂರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ ಫೆಬ್ರವರಿ 05, 2026 ರಿಂದ ಫೆಬ್ರವರಿ 04, 2027 ರವರೆಗೆ ವಿಶೇಷ ಅವಕಾಶವನ್ನು ಪ್ರಾರಂಭಿಸಿದೆ ಎಂದು ಈ ಮೂಲಕ ತಿಳಿಸಲಾಗಿದೆ. E) ಈ ಅವಧಿಯಲ್ಲಿ, ವರ್ಗಾವಣೆಗಾಗಿ ಮರು-ಸಲ್ಲಿಸಲಾದ ಸೆಕ್ಯೂರಿಟಿಗಳನ್ನು ಡಿಮ್ಯಾಟ್ ರೂಪದಲ್ಲಿ ಮಾತ್ರ ನೀಡಲಾಗುವುದು ಮತ್ತು ವರ್ಗಾವಣೆ ನೋಂದಣಿಯಾದ ದಿನಾಂಕದಿಂದ ಒಂದು ವರ್ಷದವರೆಗೆ ಅವುಗಳು ಲಾಕ್-ಇನ್ ಅವಧಿಯಲ್ಲಿರುತ್ತವೆ. ಅಂತಹ ಸೆಕ್ಯೂರಿಟಿಗಳನ್ನು ಸದರಿ ಲಾಕ್-ಇನ್ ಅವಧಿಯಲ್ಲಿ ವರ್ಗಾವಣೆ ಮಾಡಲು/ಲೀನ್-ಮಾರ್ಕ್ ಮಾಡಲು ಅಥವಾ ಅಡವಿಡಲು ಅವಕಾಶವಿರುವುದಿಲ್ಲ. F) ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಕಂಪನಿಯ ನಿಗದಿತ ಇ-ಮೇಲ್ secretarial@gujaratpetrosynthese.com ಅಥವಾ ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್ ಆದ ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನ investor@bigshareonline.com ಗೆ ಕಾರ್ಯವಿಧಾನ ಮತ್ತು ದಾಖಲಾತಿಗಳ ಕುರಿತಾದ ಪ್ರಶ್ನೆಗಳಿಗಾಗಿ ಬರೆಯಬಹುದು.

ಸ್ಥಳ : ಬೆಂಗಳೂರು
ದಿನಾಂಕ : 13/05/2026

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಉರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ
ಡಿ.ಐ.ಎನ್ : 00319482

ಕೆಎಸ್‌ಆರ್ ರೈಲು ನಿಲ್ದಾಣ ವಿಡಿಯೊ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ಬೆಂಗಳೂರು ನಗರ ರೈಲು ನಿಲ್ದಾಣದಲ್ಲಿ ಅತ್ಯಾಧುನಿಕ ವಿಡಿಯೊ ಕಣ್ಗಾವಲು ವ್ಯವಸ್ಥೆ (ವಿಎಸ್‌ಎಸ್) ಬುಧವಾರ ಆರಂಭಗೊಂಡಿದೆ.

ಸುಧಾರಿತ ಕಣ್ಗಾವಲು ತಂತ್ರಜ್ಞಾನಗಳ ಮೂಲಕ ರೈಲ್ವೆ ಭದ್ರತಾ ಮೂಲಸೌಕರ್ಯ ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ಬಲಪಡಿಸುವಲ್ಲಿ ಪ್ರಮುಖ ಮೈಲಿಗಲ್ಲು ಇದಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನಿಲ್ದಾಣದ ಪ್ರವೇಶದ್ವಾರ ಮತ್ತು ನಿರ್ಗಮನಗಳು, ಪರಿಚಲನೆ ಪ್ರದೇಶಗಳು, ಬುಕಿಂಗ್ ಕಚೇರಿಗಳು, ಮೀಸಲಾತಿ ಸಭಾಂಗಣಗಳು, ಕಾನ್ಕೋರ್ಸ್‌ಗಳು, ಪ್ಲಾಟ್‌ಫಾರ್ಮ್‌ಗಳು, ಸಬ್‌ವೇಗಳು, ಎಫ್‌ಒಬಿಗಳು, ಕಾಯುವ ಸಭಾಂಗಣ ಮತ್ತು ಇತರ ಸೂಕ್ಷ್ಮ ಸ್ಥಳಗಳು ಸೇರಿದಂತೆ ಇಡೀ ನಿಲ್ದಾಣದ ಆವರಣದಾದ್ಯಂತ ಸಮಗ್ರ ಕಣ್ಗಾವಲು ವ್ಯಾಪ್ತಿಯನ್ನು ಒದಗಿಸಲು ವಿಎಸ್‌ಎಸ್ ಅನ್ನು ಅಳವಡಿಸಲಾಗಿದೆ. ಈ ವ್ಯವಸ್ಥೆಯು ಪ್ರಯಾಣಿಕರ ಚಲನವಲನ ಮತ್ತು ನಿಲ್ದಾಣದ ಚಟುವಟಿಕೆಗಳ ನಿರಂತರ ಮೇಲ್ವಿಚಾರಣೆಯನ್ನು ದಿನದ 24 ಗಂಟೆ ಮಾಡಲಿದೆ ಎಂದು ಮಾಹಿತಿ ನೀಡಿದ್ದಾರೆ.

ನಿಲ್ದಾಣದ ವಿವಿಧೆಡೆ 168 ಐಪಿ-ಆಧಾರಿತ ಹೈ-ಡೆಫಿನಿಷನ್ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸುಧಾರಿತ ವಿಡಿಯೊ ನಿರ್ವಹಣಾ ವ್ಯವಸ್ಥೆ (ವಿಎಂಎಸ್) ಮತ್ತು ವಿಡಿಯೊ ಅನಾಲಿಟಿಕ್ಸ್ (ವಿಎ) ವೈಶಿಷ್ಟ್ಯಗಳೊಂದಿಗೆ ಸಂಯೋಜಿಸಲಾಗಿದೆ. ಭದ್ರತಾ ಸಂಸ್ಥೆಗಳಿಗೆ ಪೂರಕವಾಗಿ ಎಫ್‌ಆರ್‌ಎಸ್ ಪ್ಲ್ಯಾಟ್‌ಫಾರ್ಮ್‌ನಲ್ಲಿ 1,086 ಕ್ರಿಮಿನಲ್ ದಾಖಲೆಗಳನ್ನು ಹೊಂದಿರುವ ಡೇಟಾಬೇಸ್ ನವೀಕರಿಸಲಾಗಿದೆ ಎಂದು ವಿವರಿಸಿದ್ದಾರೆ.

ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣದಲ್ಲಿ ವಿಡಿಯೊ ಕಣ್ಗಾವಲು ವ್ಯವಸ್ಥೆ ಅಳವಡಿಸಲಾಗಿದೆ

'ಜ್ಞಾನಪರ್ವ' ನಾಟಕದ ದೃಶ್ಯ

18ರಿಂದ ನಾಟಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗ ತಂಡಗಳ ಸಹಯೋಗದಲ್ಲಿ ಇದೇ 18 ರಿಂದ 21ರವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ 'ರಂಗ ವೈವಿಧ್ಯ' ವಿಭಿನ್ನ ನಾಟಕಗಳ ಉತ್ಸವ ಹಮ್ಮಿಕೊಂಡಿದೆ.

ನಾಲ್ಕು ದಿನಗಳ ಉತ್ಸವದಲ್ಲಿ ಪ್ರತಿ ದಿನ ಸಂಜೆ 6.30ಕ್ಕೆ ನಾಟಕಗಳ ಪ್ರದರ್ಶನ ನಡೆಯಲಿದೆ. 18ರಂದು ಸಂಜೆ 6 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕಲಾವಿದ 'ಮುಖ್ಯಮಂತ್ರಿ' ಚಂದ್ರು ಅವರು ಉದ್ಘಾಟಿಸುತ್ತಾರೆ. ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಅವರಿಗೆ 'ರಂಗ ಗೌರವ' ಸಲ್ಲಿಸಲಾಗುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥಸ್ವಾಮಿ ಅವರು ಭಾಗವಹಿಸಲಿದ್ದು, ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಬಳಿಕ, ಬಿ.ವಿ. ರಾಜಾರಾಮ್ ಅವರ ನಿರ್ದೇಶನದಲ್ಲಿ ಕಲಾಗಂಗೋತ್ರಿ ತಂಡವು 'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶಿಸಲಿದೆ. ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯ ಆಧರಿಸಿದ ನಾಟಕ ಇದಾಗಿದೆ.

19ರಂದು ಪುನೀತ್ ಅವರ ನಿರ್ದೇಶನದಲ್ಲಿ ಮಹಾಭಾರತ ಆಧಾರಿತ 'ಜ್ಞಾನಪರ್ವ' ನಾಟಕವನ್ನು ದಕ್ಷತರಂಗ ತಂಡದ ಕಲಾವಿದರು ಪ್ರಸ್ತುತಪಡಿಸಲಿದ್ದಾರೆ. 20ರಂದು ಕೆ.ರಾಮಕೃಷ್ಣಯ್ಯ ಅವರ ನಿರ್ದೇಶನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲೆಗಳ ವಿಭಾಗದ ತಂಡವು 'ಮಂಟೇಸ್ವಾಮಿ ಕಥಾ ಪ್ರಸಂಗ' ನಾಟಕವನ್ನು ಪ್ರದರ್ಶಿಸಲಿದೆ. ಈ ನಾಟಕವನ್ನು ಎಚ್.ಎಸ್. ಶಿವಪ್ರಕಾಶ್ ರಚಿಸಿದ್ದಾರೆ.

21ರಂದು ಋತ್ವಿಕ್ ಸಿಂಹ ಅವರ ನಿರ್ದೇಶನದಲ್ಲಿ ವೇದಿಕೆ ತಂಡವು 'ನಂ ಕಂಪ್ನಿ' ಹಾಸ್ಯ ನಾಟಕ ಪ್ರಸ್ತುತಪಡಿಸಲಿದೆ. ಕೈಲಾಸಂ ಅವರು ಈ ನಾಟಕ ರಚಿಸಿದ್ದಾರೆ. ಪ್ರತಿ ನಾಟಕಕ್ಕೆ ಟಿಕೆಟ್ ದರ ₹ 100 ನಿಗದಿಪಡಿಸಲಾಗಿದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಬಿ. ನೀಲಮ್ಮ ತಿಳಿಸಿದ್ದಾರೆ.

ನಗರದಲ್ಲಿ ಇಂದು

ನೆಲ-ಜಲ-ಪರಿಸರ ಸಂರಕ್ಷಣೆ ಕುರಿತು ಚಿಂತನ ಮಂಥನ: ಉದ್ಘಾಟನೆ: ಟಿ.ವಿ. ರಾಮಚಂದ್ರ, ಅತಿಥಿಗಳು: ಕುರುಬೂರು ಶಾಂತಕುಮಾರ್, 'ಮುಖ್ಯಮಂತ್ರಿ' ಚಂದ್ರು, ಮಹಿಮ ಪಟೇಲ್, ರಾಮ್‌ಪ್ರಸಾದ್, ಭರತ್ ಡಿ., ಅಧ್ಯಕ್ಷತೆ: ಶಿವಣ್ಣ, ಆಯೋಜನೆ: ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಕರ್ನಾಟಕ ನೆಲ-ಜಲ ಪರಿಸರ ಸಂರಕ್ಷಣಾ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಎನ್. ಚೆಲುವರಾಯಸ್ವಾಮಿ, ಅತಿಥಿ: ಎಲ್.ಎಸ್. ಶಶಿಧರ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 11.30

ಕಾಲೇಜು ವಾರ್ಷಿಕೋತ್ಸವ: ಅತಿಥಿ: ಆಯೇಷಾ ಖಾನಂ, ಅಧ್ಯಕ್ಷತೆ: ಫಾರೂಕ್ ಮೊಹಮ್ಮದ್, ಆಯೋಜನೆ ಮತ್ತು ಸ್ಥಳ: ಅಬ್ಬಾಸ್ ಖಾನ್ ಮಹಿಳಾ ಕಾಲೇಜು, ಕಬ್ಬನ್‌ಪೇಟೆ, ಬೆಳಿಗ್ಗೆ 11.30

ಬಾಬು ಕೃಷ್ಣಮೂರ್ತಿ, ಎಂ.ಪಿ. ಕುಮಾರ್ ಅವರ 'ಅವಿಶ್ರಾಂತ ಧ್ಯೇಯಜೀವಿ-ಮೈ.ಚ. ಜಯದೇವ ಬದುಕು ನೆನಪು' ಪುಸ್ತಕ ಬಿಡುಗಡೆ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪುಸ್ತಕದ ಕುರಿತು: ದತ್ತಾತ್ರೇಯ ಹೊಸಬಾಳೆ, ಆಯೋಜನೆ: ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 6.30

ಪ್ರಾರಂಭ-2026: ಉಪಸ್ಥಿತಿ: ವಿದಿಶಾ ಕೆ., ಆಯೋಜನೆ: ಆದಾಯ ತೆರಿಗೆ ಇಲಾಖೆ, ಸ್ಥಳ: ಕಾವೇರಿ ಸಭಾಂಗಣ, ನಾಲ್ಕನೇ ಮಹಡಿ, ಸೆಂಟ್ರಲ್ ರೆವಿನ್ಯೂ ಬಿಲ್ಡಿಂಗ್, ಕ್ವೀನ್ಸ್ ರಸ್ತೆ, ಮಧ್ಯಾಹ್ನ 2.45

'ಆಕ್ಸಿಡೆಂಟ್' ಕಿರುಚಿತ್ರ ಬಿಡುಗಡೆ, 'ಖಾಕಿಯೊಳಗಿನ ಸಂತ' ನಾಟಕ ಪ್ರದರ್ಶನ: ಅಧ್ಯಕ್ಷತೆ: ಅಬ್ದುಲ್ ಅಹದ್, ಅತಿಥಿಗಳು: ಪಿ.ವೈ. ನಾಯಕ್, ಮಂಜುನಾಥ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಾಂಸ್ಕೃತಿಕ ಕಲಾ ಕುಟೀರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ದಾಸವಾಣಿ: ಗಾಯನ: ಅನುರಾಧಾ ಎಸ್. ಪಾಟೀಲ್, ಹಾರ್ಮೋನಿಯಂ: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ್ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123.
ಇ-ಮೇಲ್: nelamangala.pa@gmail.com Phone: 9663046622
ಸಂಖ್ಯೆ: ನೆಯೋಪ್ರಾ:CLU:128:2025-26 ದಿನಾಂಕ: 11-05-2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13-02-2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ-2 ಹೋಬಳಿ, ಶ್ಯಾಮಭಟ್ಟರಪಾಳ್ಯ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ವಸತಿ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ.ಚಂದ್ರಶೇಖರ್.ವಿ ಬಿನ್ ವೆಂಕಟರಾಮಯ್ಯ	ಬೆಂಗಳೂರು ಉತ್ತರ ದಾಸನಪುರ ಶ್ಯಾಮಭಟ್ಟರಪಾಳ್ಯ	37/13	00-02	ವ್ಯವಸಾಯ	ವಸತಿ
2.			37/14	00-02		
3.			37/15	00-05		
4.			37/16	00-10¼		

ಷರಾ:- ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ" ವಲಯದಿಂದ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ವಾಪ್ರ/613/ಸ್ಪ್ಯಾನ್/2026-27

16ಕ್ಕೆ ವೆಂಕಟಕೃಷ್ಣ ರಾವ್ ಜನ್ಮ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಲುಗು ವಿಜ್ಞಾನ ಸಮಿತಿಯು ಇದೇ 16ರಂದು ಸಂಜೆ 5ಕ್ಕೆ ವೈಯಾಲಿ ಕಾವಲ್‌ನ ಶ್ರೀಕೃಷ್ಣದೇವ ರಾಯ ಕಲಾಮಂದಿರದಲ್ಲಿ 'ಮಂಡಳಿ ವೆಂಕಟಕೃಷ್ಣ ರಾವ್' ಅವರ ಜನ್ಮ ಶತಮಾನೋತ್ಸವ ಸಮಾರಂಭ ಹಮ್ಮಿಕೊಂಡಿದೆ.



ಈ ಸಮಾರಂಭದಲ್ಲಿ 'ಮಾ ತೆಲುಗು ತಲ್ಲಿ' ಕಿರುಚಿತ್ರ ಪ್ರದರ್ಶನ, ಬಾಬುಜಿ ಮತ್ತು ತಂಡವು ಬುರ್ರಕಥಾ ನೃತ್ಯ ಪ್ರಸ್ತುತಪಡಿಸಲಿದೆ. ಇದೇ ಸಂದರ್ಭದಲ್ಲಿ ಶಿಕ್ಷಣ ಮತ್ತು ತೆಲುಗು ಭಾಷೆಯ ಬೆಳವಣಿಗೆಗೆ ನೀಡಿದ ಕೊಡುಗೆಗಾಗಿ ವೆಂಕಟ ರಾಯುಡು, ವೈ.ಎಸ್.ವೈಕೆ. ವಾಸುದೇವರಾವ್, ಎ.ವಿ.ಸೀತಾರಾಮಯ್ಯ ಅವರನ್ನು ಸನ್ಮಾನಿಸಲಾಗುತ್ತದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಮಿತಿಯ ಅಧ್ಯಕ್ಷ ರಾಧಾಕೃಷ್ಣರಾಜು, ಮಂಡಳಿ ಬುದ್ಧಪ್ರಸಾದ್, ಸಂಸದ ಕೆ. ಗೋಪಿನಾಥ್, ಕೆ.ಆರ್. ರಮೇಶ್ ಕುಮಾರ್, ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾಲಯ ಕುಲಪತಿ ಡಿ. ಮುನಿರತ್ನಂ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

CONNECT ಕ್ಲಾಸಿಫೈಡ್ಸ್

RAMAN GROUP OF INSTITUTIONS
134, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
36, Magadi Main Road, Next to Samrudhi Hotel, Opp. Pooja Convension Hall, Bengaluru-560079
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE
BBA BCom BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-26701

Sulakshmi Silks Proudly Presents
Seere Utsava
6th SEERE UTSAVA
6ನೇ ಸೀರೆ ಉತ್ಸವ
A Celebration of Elegance
PRE VARAMAHALAKSHMI SALE
FLAT 50% OFF
on all Pure Mysore Silk Saree collections
Exclusive Health Offer!
Get a FREE Blood Checkup
(Includes 50 comprehensive tests)
on every bill above Rs. 10,000
ನಿಮ್ಮ ಆರೋಗ್ಯವೇ ನಮ್ಮ ಭಾಗ್ಯ!
6th - 17th May 2026
Address: Hemachandra Sagara Kalyana Mantapa, Jayanagar, Bengaluru
Call: 99727 18898 | 96631 27606
Experience the legacy

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE BUYING

General

General

WE DO FUNDING & Solutions/ Settlementsfor disputed properties under Bank,High Court, Civil/DC/AC/Tribunal/ Tahsildar courts pending cases.Contact Verna Developers, Barton Centre, MG Road,Blr. 9620253180.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

WE, KALPANA C P and Shashi kumar, parents of minor child "Siri.S" born on 30/07/2019, hereby declare that her name has been changed to "Siri Aaradhya S" for all purposes.

CHANGE OF NAME
I, **SHARADAMMA,** residing at No.526, Sri Sharada Nivasa, 5th Cross, 3rd Main, BHEL Mini Colony, T. Dasarahalli, Bengaluru- 560057, have changed my name to **SHARADA K R** vide affidavit dated 18-04-2026 sworn before notary Anuradha D, Bengaluru. Henceforth I shall be called as **SHARADA K R** only.

CHANGE OF NAME
I, **Umesha M** and **Umesh M** Residing at H.No. 146, 2nd Phase, Blue Jay Ardley Layout, Doddabele Village Hobli, Kengeri, Bengaluru-560 060, declare that the above names pertain to me only & henceforth I shall be known as **UMESH M,** vide affidavit dated 07-05-2026 before notary Hemalatha P, Bengaluru.

I, G.R. Paramashivachar S/o Late Ramachar, Residing at #734, 10th Block, BDA Layout, Near Kanaka Bhavana, Banashankari VI Stage, Kengeri, Bengaluru-560060, Karnataka. I have changed my name from G.R. PARAMASHIVACHAR to GOPALAPURA RAMACHAR PARAMASHIVACHAR vide affidavit date 12.05.2026 before Advocate & Notary S. Eshwara Reddy, Bengaluru.

CHANGE OF NAME
I, **RAMAKRISHNA REDDY BALAKRISHNA REDDY,** residing at No.605, 14th Cross, 15th A Main, Sector 4, HSR Layout, Bengaluru– 560102, have changed my name to **BALAKRISHNA REDDY** vide affidavit dated 28-04-2026 sworn before notary Meer Hassan, Bengaluru. Henceforth I shall be called as **BALAKRISHNA REDDY** only.

I, SHAZIA Banu Abdulsubhan W/o Rafiuddin Alias Illiyas Ahmed R/o Pearl Villa, No. 1218, 1st Stage 3rd Block HBR Layout, Bangalore 560043 have changed my name to Shaziya Banu Abdulsubhan for all purposes.

BUSINESS

Business Offers

Business For Sale

USED AS good as new-weld mech machine-4nos, wire straightening & cutting machine-16 nos. interested contact on 98866 12942 & 88802 70330 mail ID is: usedmachines2026@gmail.com

ರಾಜೇಗೌಡ ಶಾಸಕತ್ವ ಮರುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೃಂಗೇರಿ ಕ್ಷೇತ್ರದ ಶಾಸಕರನ್ನಾಗಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಅವರನ್ನು ವಿಧಾನಸಭೆ ಮರುಸ್ಥಾಪಿಸಿದೆ.

ಸುಪ್ರೀಂ ಕೋರ್ಟ್‌ ಮಧ್ಯಂತರ ತೀರ್ಪಿನ ಅನ್ವಯ ಈ ಕ್ರಮ ಜರುಗಿಸಲಾಗಿದೆ. ಬುಧವಾರ ನಡೆದ ವಿಧಾನಮಂಡಲ ಶಾಸನ ರಚನಾ ಸಮಿತಿಯ ಸಭೆಗೆ ರಾಜೇಗೌಡರನ್ನು ಆಹ್ವಾನಿಸಲಾಗಿತ್ತು, ಅವರು ಸಭೆಗೆ ಹಾಜರಾಗಿದ್ದರು.

ಕೆಪಿಎಸ್‌ಸಿ ಸುಧಾರಣೆ: ಸಲಹೆಗೆ ಜೆಡಿಎಸ್ ಕರೆ

ಬೆಂಗಳೂರು: ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಅಕ್ರಮ ತಡೆಗಟ್ಟಲು ಮತ್ತು ಸುಧಾರಣೆಗಳನ್ನು ತರಲು ರಾಜ್ಯ ಸರ್ಕಾರವು ರಚಿಸಿರುವ ಸದನ ಸಮಿತಿಗೆ ಸಲಹೆಗಳನ್ನು ನೀಡಲು ಜೆಡಿಎಸ್ ಕರೆ ನೀಡಿದೆ.

‘ಕೆಪಿಎಸ್‌ಸಿಯಲ್ಲಿ ಏನೆಲ್ಲಾ ಬದಲಾವಣೆ ತರಬೇಕು ಎಂಬ ಸಲಹೆಯನ್ನು ಸಾರ್ವಜನಿಕರು, ಪರೀಕ್ಷಾರ್ಥಿಗಳು, ಯುವಜನರು ನೀಡಬೇಕು. ಇದಕ್ಕಾಗಿ ಜೆಡಿಎಸ್ ವತಿಯಿಂದ ಆನ್‌ಲೈನ್ ಲಿಂಕ್ (https://tinyurl.com/KPSCSuggestions) ಸೃಜಿಸಲಾಗಿದ್ದು, ಅದರಲ್ಲಿ ಸಲಹೆಗಳನ್ನು ದಾಖಲಿಸಬಹುದು’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

‘ಅರ್ಹ ಅಭ್ಯರ್ಥಿಗಳ ಕನಸನ್ನು ಹೊಸಕಿ ಹಾಕುತ್ತಿರುವ ಕೆಪಿಎಸ್‌ಸಿಯ ಕೊಳಕು ವ್ಯವಸ್ಥೆಯನ್ನು ಬುಡಸಮೇತ ಕಿತ್ತೆಸೆಯುವ ನಿರ್ಣಾಯಕ ಕಾಲ ಬಂದಿದೆ’ ಎಂದೂ ಅವರು ತಿಳಿಸಿದ್ದಾರೆ.

‘ಬಿ’ದಿಂದ ‘ಎ’ ಖಾತಾ: ವಿಶೇಷ ರಿಯಾಯಿತಿ

ಸರ್ಕಾರದ ಆರನೇ ಗ್ಯಾರಂಟಿ • 50 ಸ್ಥಳಗಳಲ್ಲಿ ಮೂರು ತಿಂಗಳು ‘ನನ್ನ ಖಾತಾ ನನ್ನ ಹಕ್ಕು’ ಅಭಿಯಾನ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ‘ಬಿ’ ಖಾತಾ ಆಸ್ತಿಗಳನ್ನು ‘ಎ’ ಖಾತಾವನ್ನಾಗಿ ಮಾಡಿಸಿಕೊಳ್ಳುವವರಿಗೆ ಆಸ್ತಿಯ ಮಾರ್ಗಸೂಚಿ ಮೌಲ್ಯದ ಶೇ 5ರ ಬದಲು ಶೇ 2ರಷ್ಟು ಹಣ ಪಾವತಿಸುವ ವಿಶೇಷ ರಿಯಾಯಿತಿ ದೊರೆಯಲಿದೆ. ಇದು ಸರ್ಕಾರದ ಆರನೇ ಗ್ಯಾರಂಟಿ–ಭೂ ಗ್ಯಾರಂಟಿ’ ಎಂದು ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನೆ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಈ ಯೋಜನೆಯ ಜಾರಿಗಾಗಿ ‘ನನ್ನ ಖಾತಾ ನನ್ನ ಹಕ್ಕು’ ಅಭಿಯಾನವನ್ನು ನಗರದ 50 ಸ್ಥಳಗಳಲ್ಲಿ ಮೂರು ತಿಂಗಳು (ಸುಮಾರು ನೂರು ದಿನ) ಪ್ರತಿ ಶನಿವಾರ ನಡೆಸಲಾಗುವುದು ಎಂದು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ನಗರದಲ್ಲಿ 23 ಲಕ್ಷ ಮನೆಗಳಿವೆ. ಅದರಲ್ಲಿ 16 ಲಕ್ಷ ಆಸ್ತಿಗಳು ‘ಎ’ ಖಾತಾ ಹೊಂದಿವೆ. 7 ಲಕ್ಷ ಆಸ್ತಿಗಳು ‘ಬಿ’ ಖಾತೆಯಲ್ಲಿವೆ. ಮಾರ್ಗಸೂಚಿ ಮೌಲ್ಯ ಶೇ 5ರಷ್ಟು (ಒಟ್ಟು ಆಸ್ತಿ ಮೌಲ್ಯದ ಶೇ 5) ಕಟ್ಟಿ ‘ಎ’ ಖಾತೆಯಾಗಿ ಪರಿವರ್ತನೆ ಮಾಡಲು ಹಿಂದೆ ಅವಕಾಶ ನೀಡಲಾಗಿತ್ತು. ಕೇವಲ 11 ಸಾವಿರ ಜನರು ಅರ್ಜಿ ಸಲ್ಲಿಸಿದ್ದು, 5 ಸಾವಿರ ಆಸ್ತಿಗಳಿಗೆ ‘ಎ’ ಖಾತೆ ಮಾಡಿ| ಕೊಡಲಾಗಿದೆ. ದಾಖಲೆಗಳು ಸರಿ ಇದ್ದರೆ, ಕೂಡಲೇ ಅರ್ಜಿ ಸಲ್ಲಿಸಿ ಸರಿಪಡಿಸಿಕೊಳ್ಳಲು ಅವಕಾಶ ನೀಡಲಾಗಿದೆ. ವಿಶೇಷ ರಿಯಾಯಿತಿಯ ಅವಧಿ ಮುಗಿದ ಬಳಿಕವಾದರೆ ಶೇ 5 ಪಾವತಿ ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ ‘ಬಿ’ ಖಾತೆಯೇ ಮುಂದುವರಿಯಲಿದ್ದು, ಮಾರಾಟ ಮಾಡಲಾಗಲಿ, ಇನ್ನಿತರ ಸೌಲಭ್ಯ ಪಡೆಯಲಾಗಲಿ ಸಾಧ್ಯವಾಗುವುದಿಲ್ಲ’ ಎಂದರು.

ಇ-ಖಾತಾ: ‘5 ನಗರ ಪಾಲಿಕೆಗಳ ಆಸ್ತಿ ಮಾಲೀಕರಿಗೆ ಭೂ ದಾಖಲೆಗಳ ಸುರಕ್ಷತೆ, ವಂಚನೆಯಿಂದ ತಪ್ಪಿಸಿಕೊಳ್ಳಲು ದೇಶದಲ್ಲಿಯೇ ಮೊದಲಬಾರಿಗೆ ಇ-ಖಾತಾ ಪರಿಚಯಿಸಿದ ಕೀರ್ತಿ ಕರ್ನಾಟಕ ಸರ್ಕಾರಕ್ಕೆ ಸಲ್ಲುತ್ತದೆ. ಈಗಾಗಲೇ 7000ಕ್ಕೂ ಅಧಿಕ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣ ಮಾಡಲಾಗಿದೆ. ಅಭಿಯಾನದ ಸಂದರ್ಭದಲ್ಲಿ ಅರ್ಜಿ ಸಲ್ಲಿಸಿ, ದಾಖಲೆಗಳನ್ನು ನೀಡಿದರೆ ಮನೆ ಬಾಗಿಲಿಗೆ ಇ-ಖಾತಾ ತಲುಪಿಸಲಾಗುವುದು ಎಂದರು.

ಅಭಿಯಾನದ ಸಂದರ್ಭದಲ್ಲಿ ರಜೆಗಳಿದ್ದರೂ ಅಧಿಕಾರಿಗಳು, ನೌಕರರು ಕೆಲಸ ಮಾಡಬೇಕು. ಅವರಿಗೆ ಬೇರೆ ದಿವಸ ರಜೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗುವುದು ಎಂದರು.

ವಿನಾಯಿತಿ ಮಿತಿ ಶೇ 15ಕ್ಕೆ ಹೆಚ್ಚಳ: ‘ಕಟ್ಟಡ ನಿಯಮ ಉಲ್ಲಂಘನೆ ವಿನಾಯಿತಿ ಮಿತಿಯನ್ನು (ಎತ್ತರ, ಎಫ್‌ಎಆರ್, ಸೆಟ್ ಬ್ಯಾಕ್) ಶೇ 5ರ ಬದಲಾಗಿ ಶೇ 15ಕ್ಕೆ ಹೆಚ್ಚಿಸಲಾಗಿದೆ. ಶೇ15 ರಷ್ಟು ಪ್ರಮಾಣದ ಉಲ್ಲಂಘನೆಗಳಿಗೆ ದಂಡ ಪಾವತಿಸಿಕೊಂಡು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು ಒಪ್ಪಿಗೆ ನೀಡಲಾಗಿದೆ. ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯದ ಕಟ್ಟಡಗಳಿಗೆ ವಿದ್ಯುತ್ ಹಾಗೂ ನೀರು ಸರಬರಾಜು ಸೌಕರ್ಯ ಒದಗಿಸಬಾರದೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಶೇ 15ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಲ್ಲಂಘನೆ ಮಾಡಿರುವ ಪ್ರಕರಣಗಳ ಸಮಸ್ಯೆ ನಿವಾರಿಸಲು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದರು.

‘ನಾವು ಅಕ್ರಮ-ಸಕ್ರಮ ಮಾಡುತ್ತಿಲ್ಲ. ಭೂಮಿಗೆ ತೀವ್ರ ಬೇಡಿಕೆ ಬಂದಿದೆ. ಇದರಿಂದಾಗಿ 20/30, 30/40, 40/60 ಅಳತೆಯ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡವರಿಗಷ್ಟೇ ಈ ವಿನಾಯಿತಿ ನೀಡುತ್ತಿದ್ದೇವೆ. ದೊಡ್ಡ ನಿವೇಶನದಾರರಿಗಲ್ಲ’ ಎಂದರು.

‘ಬಿಡಿಎ ಬಡಾವಣೆಗಳಲ್ಲಿ 1 ಲಕ್ಷಕ್ಕೂ ಅಧಿಕ ಮನೆಗಳನ್ನು ಜನರು ಕಟ್ಟಿಕೊಂಡಿದ್ದರು. ಅವರಿಗೆ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು 2020 ರಲ್ಲಿ ಬಿಜೆಪಿ ಸರ್ಕಾರ 38 ‘ಡಿ’ ಕಾನೂನು ಜಾರಿಗೆ ತಂದಿತ್ತು. 600 ಅಡಿವರೆಗೆ ಶೇ 10 ರಷ್ಟು, 600 ರಿಂದ 900 ಅಡಿವರೆಗೆ ಶೇ 25 ರಷ್ಟು, 1200 ರಿಂದ 2400 ವರೆಗೆ ಶೇ 40 ರಷ್ಟು, 2400 ರಿಂದ 4000 ಅಡಿವರೆಗೆ ಶೇ 50 ರಷ್ಟು ಮಾರ್ಗಸೂಚಿ ಮೌಲ್ಯ ಕಟ್ಟಿ ಪ್ರಮಾಣಪತ್ರ ಪಡೆಯಲು ಅವಕಾಶ ಮಾಡಿಕೊಡಲಾಗಿತ್ತು. ಆದರೆ, ಶುಲ್ಕ ಹೆಚ್ಚಾಯಿತು ಎಂಬ ಕಾರಣಕ್ಕೆ ಬಹುತೇಕರು ಅರ್ಜಿ ಸಲ್ಲಿಸಿರಲಿಲ್ಲ. 570 ಅರ್ಜಿಗಳಷ್ಟೇ ಬಂದಿದ್ದವು’ ಎಂದು ಹೇಳಿದರು.

ಈಗ ಅರ್ಜಿ ಹಾಕಲು ಜೂನ್ 15 ರಿಂದ ಒಟ್ಟು ಮೂರು ತಿಂಗಳ ಕಾಲ ಅವಕಾಶ ಕಲ್ಪಿಸಿಕೊಡಲಾಗುವುದು. ಒಟಿಎಸ್ ಜಾರಿ ಮಾಡಲಾಗುವುದು. ಮೊದಲ ಮೂರು ತಿಂಗಳು ಅರ್ಜಿ ಸಲ್ಲಿಸಲು, ಆ ನಂತರದ ಮೂರು ತಿಂಗಳು ಅರ್ಜಿ ಪರಿಶೀಲನೆಗೆ ಹಾಗೂ ಬಳಿಕ ಆರು ತಿಂಗಳು ಶುಲ್ಕ ಪಾವತಿಗೆ ಅವಕಾಶ ನೀಡಲಾಗುವುದು. 1 ವರ್ಷ ಕಾಲಮಿತಿಯೊಳಗೆ ಅಂದರೆ 2027ರ ಜೂನ್‌ಗೆ ಈ ಯೋಜನೆ ಮುಕ್ತಾಯಗೊಳಿಸಲಾಗವುದು ಎಂದರು.

ಈ ಮೂರು ತಿಂಗಳ ಒಳಗೆ ಅರ್ಜಿ ಸಲ್ಲಿಸಿದವರು ಶೇ 10ರ ಬದಲು ಶೇ 5 ರಷ್ಟು ಮಾತ್ರ ಪಾವತಿ ಮಾಡಬಹುದು. ಅವರಿಗೆ ಶೇ 50 ರಷ್ಟು ರಿಯಾಯಿತಿ ದೊರೆಯಲಿದೆ. ಈ ಬಗ್ಗೆ ಮುಖ್ಯಮಂತ್ರಿ, ಇತರ ಸಚಿವರೊಂದಿಗೆ ಚರ್ಚೆ ನಡೆಸಲಾಗಿದೆ’ ಎಂದು ಹೇಳಿದರು.

‘ಈ ಯೋಜನೆಯ ಸೌಲಭ್ಯ ಬಳಸಿಕೊಳ್ಳದೇ ಇದ್ದರೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಬಿಡಿಎ 2 ಸಾವಿರ ಕೋಟಿ ಮೌಲ್ಯದ ಆಸ್ತಿಗಳನ್ನು ವಶಕ್ಕೆ ಪಡೆದಿದೆ’ ಎಂದರು.

ಪ್ರಮುಖ ಅಂಶಗಳು

- ಹೆಬ್ಬಾಳದ ಬಳಿ ವಾಹನ ದಟ್ಟಣೆಯ ಒತ್ತಡವನ್ನು ಸ್ವಲ್ಪ ಕಡಿಮೆ ಮಾಡಲಾಗಿದೆ
- ಹೆಬ್ಬಾಳ ಜಂಕ್ಷನ್–ಕೃಷಿ ವಿಶ್ವವಿದ್ಯಾಲಯ ಮೂಲಕ ಕಡಿಮೆ ಅಂತರದ ಸುರಂಗ ರಸ್ತೆ ನಿರ್ಮಾಣದ ಯೋಜನೆ
- ಮೂರು ಮಾರ್ಗಗಳ ಕಟ್ ಅಂಡ್ ಕರ್ವ್ ಸುರಂಗ ಬರಲಿದೆ. ಸುರಂಗ ಆರು ಪಥ ಹೊಂದಿರಲಿದೆ
- ಒಟ್ಟು 2.2 ಕಿ.ಮೀ. ಉದ್ದದ ಈ ಯೋಜನೆಯನ್ನು ಋತ್ವಿಕ್ ಟನಲ್‌ಗೆ ಗುತ್ತಿಗೆ
- ಮೇಖ್ರಿ ವೃತ್ತದ ಬಳಿ 1.7 ಕಿ.ಮೀ ಉದ್ದದ 4 ಪಥ ಹೊಂದಿರುವ ಎಲಿವೇಟೆಡ್ ಕಾರಿಡಾರ್ ನಿರ್ಮಾಣ

ಬಿಡಿಎಗೆ 50 ವರ್ಷ ತುಂಬಿದೆ. ಇದರ ನೆನಪಿಗೆ ಜೂನ್ 27ರಂದು ಕೆಂಪೇಗೌಡ ಜಯಂತಿ ದಿನ ‘ಗ್ರೀನ್ ಬೆಂಗಳೂರು’ ಕಾರ್ಯಕ್ರಮದ ಮೂಲಕ ಒಂದೇ ದಿನ 15 ಲಕ್ಷ ಸಸಿಗಳನ್ನು ನೆಡಲಾಗುವುದು

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಶಿವರಾಮ ಕಾರಂತ ಬಡಾವಣೆ: 18 ಸಾವಿರ ನಿವೇಶನ ಹಂಚಿಕೆ

ಶಿವರಾಮ ಕಾರಂತ ಬಡಾವಣೆಗೆ 3,052 ಭೂ ಮಾಲೀಕರು ಆಸ್ತಿಯನ್ನು ನೀಡಿದ್ದರು. ಹಲವು ಆಸ್ತಿ ಮಾಲೀಕರು ಬೇರೆಯವರಿಗೆ ಆಸ್ತಿ ಮಾರಾಟ ಮಾಡಿದ್ದು ಸೇರಿದಂತೆ ಅನೇಕ ತೊಡಕುಗಳಿದ್ದವು. ಈಗ ನ್ಯಾಯಾಲಯದ ಅನುಮತಿ ಪಡೆದು 18 ಸಾವಿರ ನಿವೇಶನಗಳನ್ನು ಭೂ ಮಾಲೀಕರಿಗೆ ನೀಡಲಾಗುತ್ತಿದೆ. ಮೇ 15ನೇ ತಾರೀಕಿನಿಂದಲೇ ನಿವೇಶನ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ಕೇಂದ್ರಿಯ ಇ- ಗವರ್ನೆನ್ಸ್‌ನಿಂದ ಸಾಫ್ಟವೇರ್ ಅಭಿವೃದ್ಧಿಪಡಿಸಿ ಅದರ ಮೂಲಕ ಹಂಚಿಕೆ ವ್ಯವಸ್ಥೆ ಮಾಡಲಾಗಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘1 ಎಕರೆ ಅಥವಾ ಹೆಚ್ಚು ಜಮೀನು ಹೊಂದಿದ್ದ ಮಾಲೀಕರಿಗೆ ಪ್ರತ್ಯೇಕ ಅವಕಾಶ ಕಲ್ಪಿಸಲಾಗಿದೆ. ಒಂದೇ ಜಾಗದಲ್ಲಿ ದೊಡ್ಡ ನಿವೇಶನ ಬೇಕು ಎಂದವರಿಗೂ ಅವಕಾಶ ನೀಡುತ್ತೇವೆ ಎಂದು ಹೇಳಿದ್ದೆವು. ಇದಕ್ಕೆ 7 ಜನರು ಮಾತ್ರ ಅರ್ಜಿ ಸಲ್ಲಿಸಿದ್ದಾರೆ. 1 ಎಕರೆ ಜಮೀನು ಇದ್ದರೆ ಒಂದೇ ಜಾಗದಲ್ಲಿ 9,583 ಚದರ ಅಡಿ ಜಾಗ ನೀಡಲಾಗುವುದು. ಎತ್ತರದ ಕಟ್ಟಡಗಳಿಗೆ ಅವಕಾಶ ಮಾಡಿಕೊಡಲು ಈ ರೀತಿ ಅನುಕೂಲ ಕಲ್ಪಿಸಲಾಗಿದೆ’ ಎಂದು ವಿವರಿಸಿದರು.

‘ಬಿಸಿನೆಸ್ ಕಾರಿಡಾರ್ ಜಮೀನು ಡಿನೋಟಿಫಿಕೇಶನ್ ಇಲ್ಲ’

ಬಿಸಿನೆಸ್ ಕಾರಿಡಾರ್‌ಗೆ ಜಮೀನು ನೀಡಿದವರಿಗೆ ದುಪ್ಪಟ್ಟು ಪರಿಹಾರ ನೀಡಲಾಗುವುದು. ಯಾವುದೇ ಕಾರಣಕ್ಕೆ ಡಿನೋಟಿಫಿಕೇಶನ್ ಮಾಡುವುದಿಲ್ಲ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಸಿನೆಸ್ ಕಾರಿಡಾರ್‌ನ ಮೊದಲನೇ ಹಂತಕ್ಕೆ ಶೇ 80ರಷ್ಟು ಜನರು ಒಪ್ಪಿಗೆ ನೀಡಿದ್ದಾರೆ. ಎರಡನೇ ಹಂತಕ್ಕೆ ನೋಟಿಫಿಕೇಷನ್ ಮಾಡಲಾಗಿದೆ. ಜಮೀನು ನೀಡಲು ರೈತರೂ ಮುಂದೆ ಬರುತ್ತಿದ್ದಾರೆ ಎಂದು ಹೇಳಿದರು.

ಹೊಸೂರು ರಸ್ತೆಯಿಂದ ಮೈಸೂರು ರಸ್ತೆಯವರೆಗೂ 33 ಕಿ.ಮೀ ಬೆಂಗಳೂರು ಬಿಸಿನೆಸ್ ಕಾರಿಡಾರ್ ಅನ್ನು ಬೆಂಗಳೂರು ದಕ್ಷಿಣದಲ್ಲಿ ನಿರ್ಮಾಣ ಮಾಡಲಾಗುವುದು. ದುಪ್ಪಟ್ಟು ಪರಿಹಾರ ನೀಡಲು ಅವಕಾಶ ಇಲ್ಲದಿದ್ದರೂ ನಾನು ಸಚಿವ ಸಂಪುಟ ಸಭೆ ಮುಂದಿಟ್ಟು, ನೀಡುತ್ತಿದ್ದೇವೆ. ಟಿಡಿಆರ್, ರಸ್ತೆ ಪಕ್ಕದಲ್ಲೇ ಶೇ 35ರಷ್ಟು ವಾಣಿಜ್ಯ ಭೂಮಿ, ಎಫ್‌ಎಆರ್, ವಸತಿ ಪ್ರದೇಶದಲ್ಲಿ ಶೇ 40ರಷ್ಟು ಭೂಮಿ ಸೇರಿದಂತೆ ಅನೇಕ ಅವಕಾಶ ನೀಡುತ್ತಿದ್ದೇವೆ. ಈ ರೀತಿ ಪರಿಹಾರವನ್ನು ಇಡೀ ದೇಶದಲ್ಲಿ ಎಲ್ಲೂ ನೀಡಿಲ್ಲ. ಮುಂಬೈಯಲ್ಲಿ ಜಮೀನು ಸ್ವಾಧೀನಕ್ಕೆ ಶೇ 12.5 ಮಾತ್ರ ಪರಿಹಾರ ನೀಡಿದ್ದಾರೆ’ ಎಂದರು.

ಅಂಕಿ ಅಂಶ

1,900 ವೈಟ್‌ಫೀಲ್ಡ್‌ನಲ್ಲಿ ಕಟ್ಟಿರುವ ಬಿಡಿಎ ಮನೆಗಳು	760 ಚ.ಅಡಿ 1 ಬಿಎಚ್‌ಕೆ ಮನೆ	₹ 51 ಲಕ್ಷ ಮನೆಯ ಒಟ್ಟು ಬೆಲೆ	1,733 ಚ.ಅಡಿ 3 ಬಿಎಚ್‌ಕೆ ಮನೆ	₹ 1.44 ಕೋಟಿ ಮನೆಯ ಒಟ್ಟು ಬೆಲೆ

ಬಸವ ವೇದಿಕೆ ವತಿಯಿಂದ ನೀಡಲಾಗುವ ‘ಬಸವಶ್ರೀ ಪ್ರಶಸ್ತಿ’ಯನ್ನು ಸಂಸದ ಬಸವರಾಜ ಬೊಮ್ಮಾಯಿ ಅವರು ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಅವರಿಗೆ ಬುಧವಾರ ಪ್ರದಾನ ಮಾಡಿದರು. ಜೆಡಿಎಸ್ ಮುಖಂಡ ಎಚ್‌.ಎಂ. ರಮೇಶ್ ಗೌಡ, ಬಸವ ವೇದಿಕೆ ಅಧ್ಯಕ್ಷ ಸಿ. ಸೋಮಶೇಖರ, ಉಪಾಧ್ಯಕ್ಷ ಎಸ್‌. ಷಡಕ್ಷರಿ, ಸಮಿತಿ ಸದಸ್ಯ ಬಿ.ಎಂ. ಉಮೇಶ್ ಕುಮಾರ್ ಉಪಸ್ಥಿತರಿದ್ದರು

‘ಕೋರ್ಟ್ ನಿರ್ದೇಶನದಂತೆ ಪಾಲಿಕೆಗಳ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ಕೋರ್ಟ್ ನಿರ್ದೇಶನದ ಪ್ರಕಾರ ನಡೆಯುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚುನಾವಣೆ ಯಾವಾಗ ನಡೆಯಲಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಚುನಾವಣಾ ಆಯೋಗ ಅದನ್ನು ನಿರ್ಧರಿಸುತ್ತದೆ’ ಎಂದರು.

ಈ ವರ್ಷ ಜಿಬಿಎ ಆದಾಯದ ನಿರೀಕ್ಷೆಯ ಬಗ್ಗೆ ಪ್ರತಿಕ್ರಿಯಿಸಿ, ‘ಆದಾಯ ಬರಲಿ ನೋಡೋಣ. ನಾವು ಆದಾಯದ ಲೆಕ್ಕ ಹಾಕುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನರ ಬದುಕು ರಕ್ಷಣೆ ಮಾಡಬೇಕು. ಚಿನ್ನ ಖರೀದಿ ಮಾಡಬೇಡಿ, ಇಂಧನ ಬಳಕೆ ಕಡಿಮೆ ಮಾಡಿ, ವಿದೇಶ ಪ್ರಯಾಣ ಬೇಡ ಎಂದು ಹೇಳುವ ಕಷ್ಟ ಕಾಲದಲ್ಲಿ ಜನರಿಗೆ ಒಳ್ಳೆಯದಾಗಬೇಕು’ ಎಂದರು.

‘ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ದೇಶಕ್ಕೆ ದೊಡ್ಡ ಅಪಮಾನವಾಗಿದ್ದು, ಕೇಂದ್ರ ಸಚಿವರು ಹಾಗೂ ಸಂಸದರು ಇದಕ್ಕೆ ಉತ್ತರಿಸಬೇಕು. ಇದೇ ಪ್ರಕರಣ ನಮ್ಮ ರಾಜ್ಯದಲ್ಲಿ ಆಗಿದ್ದರೆ ಇಷ್ಟು ಹೊತ್ತಿಗೆ ನಮ್ಮ ಮೇಲೆ ವಾಗ್ದಾಳಿ ನಡೆಸುತ್ತಿದ್ದರು. ಹಲವು ಕನಸು ಕಟ್ಟಿಕೊಂಡು ಕಷ್ಟಪಟ್ಟಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ಆಕ್ರೋಶಗೊಂಡಿದ್ದಾರೆ’ ಎಂದು ನೀಟ್ ಪರೀಕ್ಷೆ ರದ್ದಾಗಿರುವ ಬಗ್ಗೆ ಪ್ರತಿಕ್ರಿಯಿಸಿದರು.

ಡಿಕೆಶಿಯನ್ನೇ ಕೇಳಿ: ರಾಮಲಿಂಗಾರೆಡ್ಡಿ

ಬೆಂಗಳೂರು: ‘ಜಿಬಿಎ ವ್ಯಾಪ್ತಿಯ ಐದು ನಗರಪಾಲಿಕೆಗಳ ಚುನಾವಣೆ ಬೇಗ ಮಾಡಿದರೆ ಒಳ್ಳೆಯದು. ಯಾಕೆ ಮುಂದೂಡಲಾಗುತ್ತಿದೆ ಎನ್ನುವುದಕ್ಕೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಉತ್ತರ ಕೊಡಬೇಕು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಜೂನ್ 30ರೊಳಗೆ ಚುನಾವಣೆ ನಡೆಸಲು ಸುಪ್ರೀಂಕೋರ್ಟ್ ಸೂಚಿಸಿದೆ. ಸೆಪ್ಟಂಬರ್‌ವರೆಗೂ ಅವಕಾಶ ನೀಡುವಂತೆ ರಾಜ್ಯ ಸರ್ಕಾರದಿಂದ ಮನವಿ ಸಲ್ಲಿಸಿರುವ ಕುರಿತು ಡಿ.ಕೆ. ಶಿವಕುಮಾರ್ ಅವರನ್ನು ಕೇಳಬೇಕು. ಕಾಲಕಾಲಕ್ಕೆ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕು. ಪಾಲಿಕೆ ಸದಸ್ಯರ ಕೆಲಸವನ್ನೂ ನಾವೇ ಮಾಡುತ್ತಿದ್ದೇವೆ. ಹಿಂದೆ ಬಿಜೆಪಿ ಮಾಡಿದ್ದನ್ನೇ ನಾವು ಈಗ ಮಾಡಿದರೆ ಸರಿಯಾಗುವುದಿಲ್ಲ. ಈಗ ಚುನಾವಣೆ ನಡೆದರೂ ಕಾಂಗ್ರೆಸ್ ಐದು ನಗರಪಾಲಿಕೆಗಳಲ್ಲೂ ಗೆಲ್ಲುವ ವಿಶ್ವಾಸವಿದೆ’ ಎಂದರು.

‘ಬೆಂಗಳೂರಿನ ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಶೇ 90ರಷ್ಟಿದೆ. ಪ್ರತಿ ವಾರ್ಡ್‌ನಲ್ಲಿ ಶೇ 75ರಷ್ಟು ಮತ ನಮಗೆ ಬರಲಿವೆ. ರಾಜ್ಯದಲ್ಲಿ ನಡೆದಿರುವ ಐದು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಗೆದ್ದಿದ್ದೇವೆ. ಬೆಂಗಳೂರು ಶಿಕ್ಷಕರ ಹಾಗೂ ಪದವೀಧರರ ಕ್ಷೇತ್ರದಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದಿದ್ದರು. ಪಾಲಿಕೆ ಚುನಾವಣೆಯಲ್ಲಿ ಫಲಿತಾಂಶ ಏನೋ ಆಗಲಿದೆ ಎಂದು ಭಯಪಡುವ ಅಗತ್ಯ ಇಲ್ಲ’ ಎಂದು ಹೇಳಿದರು.

ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಕರ್ನಾಟಕ ಮುಜರಾಯಿ ಇಲಾಖೆಗೆ 5 ಎಕರೆ ನೀಡಲು ಒಪ್ಪಿಗೆ ನೀಡಲಾಗಿದೆ. ಭಕ್ತರಿಗೆ ಸಮುದಾಯಭವನ, ಕೊಠಡಿಗಳ ನಿರ್ಮಾಣಕ್ಕೆ ಯೋಜನೆ ರೂಪಿಸುತ್ತೇವೆ.

ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

‘ಕರ್ನಾಟಕದಲ್ಲಿ ಎರಡೂವರೆ ವರ್ಷದ ಆಡಳಿತದ ಬಳಿಕ ಕೆಲವರು ಸಚಿವರಾಗುವ ಆಸೆ ಹೊಂದಿದ್ದಾರೆ. ಇದಾಗಿ ಆರು ತಿಂಗಳೇ ಕಳೆದು ಹೋಗಿದೆ. ಅಧಿಕಾರ ಹಂಚಿಕೆ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನಂತೂ ನವದೆಹಲಿಗೆ ಹೋಗಿಲ್ಲ. ಈ ಗೊಂದಲಗಳಿಗೆ ಬೇಗನೇ ತೆರೆ ಎಳೆಯಬೇಕು’ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಮೂಲಸೌಲಭ್ಯ ಕೊರತೆ: ವಿದ್ಯಾರ್ಥಿಗಳ ಪ್ರತಿಭಟನೆ

ರಾಷ್ಟ್ರೀಯ ಕಾನೂನು ಶಾಲಾ ಆಡಳಿತ ಮಂಡಳಿ ನಿರ್ಲಕ್ಷ್ಯ ಆರೋಪ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲಸೌಲಭ್ಯಗಳ ಕೊರತೆ, ಹಾಸ್ಟೆಲ್‌ನಲ್ಲಿ ನಿಗದಿಗಿಂತ ಹೆಚ್ಚಿನ ವಿದ್ಯಾರ್ಥಿಗಳ ಸೇರ್ಪಡೆ ಹಾಗೂ ವಿದ್ಯಾರ್ಥಿಗಳ ಮನವಿಗೆ ಕಾಲೇಜು ಆಡಳಿತ ಮಂಡಳಿ ಸ್ಪಂದಿಸುತ್ತಿಲ್ಲ ಎಂದು ಆಪಾದಿಸಿ, ರಾಷ್ಟ್ರೀಯ ಕಾನೂನು ಶಾಲೆಯ (ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ) ಕ್ಯಾಂಪಸ್‌ನಲ್ಲಿ ಮಂಗಳವಾರ ರಾತ್ರಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ನಾಗರಬಾವಿಯ ಕ್ಯಾಂಪಸ್‌ನ ಬಾಸ್ಕೆಟ್‌ಬಾಲ್ ಕೋರ್ಟ್ ಆವರಣದಲ್ಲಿ ಮಂಗಳವಾರ ರಾತ್ರಿ 10 ಗಂಟೆಯ ಸುಮಾರಿಗೆ ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ಕಾಲೇಜು ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿದರು.

ರಾತ್ರಿ 10 ಗಂಟೆಗೆ ಆರಂಭವಾದ ಪ್ರತಿಭಟನೆ ಬುಧವಾರ ಬೆಳಿಗ್ಗೆವರೆಗೂ ನಡೆದಿತ್ತು. ಬುಧವಾರ ಮಧ್ಯಾಹ್ನವೂ ಇದೇ ವಿಷಯ ಮುಂದಿಟ್ಟುಕೊಂಡು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

'ದೇಶದ ನಾನಾ ಭಾಗದ ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಕಲಿಯುತ್ತಿದ್ದಾರೆ. ನಲ್ಲಿಗಳು ಸರಿ ಇಲ್ಲ. ಕುಡಿಯಲು ಶುದ್ಧ ನೀರು ಒದಗಿಸುತ್ತಿಲ್ಲ' ಎಂದು ವಿದ್ಯಾರ್ಥಿಯೊಬ್ಬ ಆರೋಪಿಸಿದರು.

ರಾಷ್ಟ್ರೀಯ ಕಾನೂನು ಶಾಲಾ ಆವರಣದಲ್ಲಿ ಮಂಗಳವಾರ ರಾತ್ರಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ಕುಲಪತಿ ಸುಧೀರ್ ಕೃಷ್ಣಸ್ವಾಮಿ ಅವರ ಬಳಿ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಸ್ಪಂದಿಸಿಲ್ಲ. ತರಗತಿಯಲ್ಲಿ ಇರುವ ಎ.ಸಿ ಆನ್ ಮಾಡುವ ನಿರ್ಧಾರವನ್ನೂ ಕುಲಪತಿಯೇ ತೆಗೆದುಕೊಳ್ಳುತ್ತಿದ್ದಾರೆ ಎಂದು ಪ್ರತಿಭಟನನಿರತ ವಿದ್ಯಾರ್ಥಿಗಳು ದೂರಿದರು.

ಹಾಸ್ಟೆಲ್‌ನಲ್ಲೂ ವ್ಯವಸ್ಥೆ ಸರಿ ಇಲ್ಲ. ಒಂದೇ ಮಹಡಿಯಲ್ಲಿ 36 ವಿದ್ಯಾರ್ಥಿನಿಯರು ಕೇವಲ ಮೂರು ಶೌಚಾಲಯಗಳನ್ನು ಬಳಸಬೇಕಾದ ಪರಿಸ್ಥಿತಿ ಇದೆ ಎಂದು ದೂರಿದರು.

ಸ್ಥಳಕ್ಕೆ ಬಂದ ಕುಲಪತಿ: ಬುಧವಾರ ಮಧ್ಯಾಹ್ನ ವಿದ್ಯಾರ್ಥಿಗಳನ್ನು ಕುಲಪತಿ ಭೇಟಿಯಾಗಿ ಸಮಸ್ಯೆ ಆಲಿಸಿ ದರು. ತಕ್ಷಣವೇ ಯಾವುದಕ್ಕೂ ಪ್ರತಿಕ್ರಿಯಿಸುವುದಿಲ್ಲ. ಮುಂದಿನ ಹತ್ತು ದಿನಗಳಲ್ಲಿ ಲಿಖಿತವಾಗಿ ಉತ್ತರ ನೀಡುತ್ತೇನೆ ಎಂಬುದಾಗಿ ವಿದ್ಯಾರ್ಥಿಗಳಿಗೆ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಭದ್ರತಾ ಕ್ರಮಗಳೇ ಇಲ್ಲ'

ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳ ಸುರಕ್ಷತೆಯನ್ನು ಲೆಕ್ಕಿಸದೆ ಕಾಮಗಾರಿ ನಡೆಸಲಾಗುತ್ತಿದೆ. ಏಪ್ರಿಲ್ 15ರ ಬೆಳಿಗ್ಗೆ ನ್ಯೂ ಅಕಾಡೆಮಿಕ್ ಬ್ಲಾಕ್ ಪ್ರವೇಶದ್ವಾರದ ಸ್ಲ್ಯಾಬ್‌ನ ಭಾಗವೊಂದು ಕುಸಿದು ಬಿದ್ದಿತ್ತು. ಮೇ 12ರಂದು ಪುರುಷರ ವಸತಿಗೃಹದಲ್ಲಿಯೂ ಇದೇ ರೀತಿಯ ಘಟನೆ ನಡೆದಿದ್ದು, ಅದೃಷ್ಟವಶಾತ್ ಯಾರಿಗೂ ಗಾಯಗಳಾಗಲಿಲ್ಲ ಎಂದು ವಿದ್ಯಾರ್ಥಿಗಳು ಹೇಳಿದರು. ಹೆಚ್ಚು ಶುಲ್ಕ ಪಡೆದು ಕಡಿಮೆ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಆಪಾದಿಸಿದರು.

ಸುದ್ದಿ 2 ನಿಮಿಷ

ನೀಟ್ ಅಕ್ರಮ: ಮೋದಿ ಸರ್ಕಾರ ಹೊಣೆ ಅಲ್ಲವೇ?

ಚಿಕ್ಕಬಳ್ಳಾಪುರ: 'ನೀಟ್–ಯುಜಿ' ಅಕ್ರಮ ನಡೆದರೆ ಅದರಲ್ಲಿ ಮೋದಿ ಸರ್ಕಾರದ ಯಾವುದೇ ತಪ್ಪು ಇಲ್ಲ ಎನ್ನುವ ಬಿಜೆಪಿ ನಾಯಕರು ಸಿಇಟಿ ವೇಳೆ ವಿದ್ಯಾರ್ಥಿ ಜನಿವಾರ ತೆಗೆಸಿದ ಕಾರಣ ರಾಜ್ಯ ಸರ್ಕಾರದ ವಿರುದ್ಧ ಯಾವೆಲ್ಲಾ ಪದಗಳನ್ನು ಬಳಸಿ ಟೀಕಿಸಿದರು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಿಇಟಿ ವೇಳೆ ಎರಡು, ಮೂರು ಕೇಂದ್ರಗಳಲ್ಲಿ ಮೂರ್ನಾಲ್ಕು ವಿದ್ಯಾರ್ಥಿಗಳಿಗೆ ತೊಂದರೆ ಆಯಿತು. ಜನಿವಾರ ತೆಗೆಸಿದಾಗ ಬಿಜೆಪಿಯ ಆರ್. ಅಶೋಕ, ತೇಜಸ್ವಿ ಸೂರ್ಯ ಏನೆಲ್ಲಾ ಮಾತನಾಡಿದರು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ 22 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ. ಈಗ ಏಕೆ ಅವರು ಸುಮ್ಮನಿದ್ದಾರೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರದ ರಾಜ್ಯಗಳಲ್ಲಿ ಪರೀಕ್ಷೆಗಳಲ್ಲಿ ಸಮಸ್ಯೆಗಳು ನಡೆದರೆ ಬಿಜೆಪಿ ನಾಯಕರು ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಕೇಂದ್ರ ಸರ್ಕಾರ ಜನರ ಕ್ಷಮೆಕೋರಬೇಕು.ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ಹೊಣೆ ಯಾರು? ಮೊದಲು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.



ನೀಟ್ ವ್ಯವಸ್ಥೆಯೇ ಸರಿ ಇಲ್ಲ. ಪರೀಕ್ಷೆಯನ್ನೇ ರದ್ದುಗೊಳಿಸಬೇಕು. ದಕ್ಷಿಣ ರಾಜ್ಯದ ಮಕ್ಕಳಿಗೆ ತೊಂದರೆ ಆಗುತ್ತಿದೆ. ಉತ್ತರ ಭಾರತದ ರಾಜ್ಯಗಳಲ್ಲಿ ವಾಮಮಾರ್ಗ ಹುಡುಕಲಾಗುತ್ತಿದೆ. ಸಿಬಿಐ ತನಿಖೆ ನಡೆಸಿ ಏನು ಮಾಡುವಿರಿ? ಕಾನೂನು ರೀತಿ ಮಕ್ಕಳು ಮರು ಪರೀಕ್ಷೆ ಬರೆಯಲೇಬೇಕಲ್ಲ ಎಂದರು.

ಯುವ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ನೀಟ್ ಪರೀಕ್ಷೆಯನ್ನು ಕೇಂದ್ರ ಸರ್ಕಾರವು ರದ್ದುಪಡಿಸಿರುವುದನ್ನು ಖಂಡಿಸಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಸದಸ್ಯರು ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಸಂಸದ ಕೆ.ಸುಧಾಕರ್ ನಿವಾಸದ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಸದಾಶಿವ ನಗರದಲ್ಲಿ ಇರುವ ಸುಧಾಕರ್ ಅವರ ಮನೆಯ ಎದುರು ಜಮಾಯಿಸಿದ್ದ ಯುವ ಕಾಂಗ್ರೆಸ್ ಸದಸ್ಯರು, ಭಿತ್ತಿ ಪತ್ರಗಳನ್ನು ಹಿಡಿದು ರಸ್ತೆಗೆ ಅಡ್ಡವಾಗಿ ಕೂತರು. ಕೇಂದ್ರ ಸರ್ಕಾರದ ವಿರುದ್ಧ, ಬಿಜೆಪಿ ಸಂಸದರ ವಿರುದ್ಧ ಘೋಷಣೆ ಕೂಗಿದರು.

ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ರಾಜಸ್ಥಾನದಲ್ಲಿ ಸೋರಿಕೆಯಾಗಿತ್ತು. ಸೋರಿಕೆ ಪತ್ತೆಯಾಗುತ್ತಿದ್ದಂತೆಯೇ ಕೇಂದ್ರ ಸರ್ಕಾರವು ನೀಟ್ ಪರೀಕ್ಷೆಯನ್ನೇ ರದ್ದುಪಡಿಸಿತ್ತು.

ನೀಟ್ ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್‌ನ (ಎಐಡಿಎಸ್ಒ) ಸದಸ್ಯರು ಮಲ್ಲೇಶ್ವರದ ಕುವೆಂಪು ಪ್ರತಿಮೆಯ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

ಪ್ರಶ್ನೆಪತ್ರಿಕೆ ಸೋರಿಕೆ: ದೊಡ್ಡ ವ್ಯಕ್ತಿಗಳ ರಕ್ಷಣೆ'

ಜೈಪುರ/ಗುರುಗ್ರಾಮ (ಪಿಟಿಐ): 'ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಶಾಮೀಲಾಗಿರುವ 'ಪ್ರಮುಖ ವ್ಯಕ್ತಿ'ಗಳನ್ನು ರಕ್ಷಣೆ ಮಾಡಲಾಗುತ್ತಿದೆ' ಎಂದು ಇದೇ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಬಂಧಿಸಿರುವ ಆರೋಪಿಯೊಬ್ಬರು ಬುಧವಾರ ಆಪಾದಿಸಿದ್ದಾರೆ.

ಜೈಪುರದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿದ ವೇಳೆ, ವಾಹನದಲ್ಲಿದ್ದ ಬಂಧಿತರನ್ನು ಮಾತನಾಡಿಸಲು ಯತ್ನಿಸಿದ ಮಾಧ್ಯಮ ಪ್ರತಿನಿಧಿಗಳಿಗೆ ಒಬ್ಬ ಆರೋಪಿ ಈ ಮಾತು ಹೇಳಿದರು.

'ಈ ಪ್ರಕರಣದಲ್ಲಿ ದೊಡ್ಡ ವ್ಯಕ್ತಿಗಳನ್ನು ರಕ್ಷಣೆ ಮಾಡಲಾಗುತ್ತಿದೆ ಹಾಗೂ ಸಾಮಾನ್ಯ ಜನರಿಗೆ ತೊಂದರೆ ನೀಡಲಾಗುತ್ತಿದೆ' ಎಂದೂ ಆರೋಪಿಸಿದರು.

ಸಿಬಿಎಸ್‌ಇ: ಕುಸಿದ ಫಲಿತಾಂಶ

ಬೆಂಗಳೂರು: ಕೇಂದ್ರ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 12ನೇ ತರಗತಿಯ ಫಲಿತಾಂಶವನ್ನು ಬುಧವಾರ ಪ್ರಕಟಿಸಿದ್ದು, ರಾಜ್ಯದಲ್ಲಿನ ಶೇ 93.01ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ, ಈ ವರ್ಷ ಫಲಿತಾಂಶದಲ್ಲಿ ಇಳಿಮುಖವಾಗಿದೆ.

ಸಿಬಿಎಸ್‌ಇ ಜಾರಿಗೊಳಿಸಿದ ಹೊಸ ಪದ್ಧತಿಯಿಂದಾಗಿ ಈ ವರ್ಷ ದೇಶದಲ್ಲಿನ ಒಟ್ಟಾರೆ ಫಲಿತಾಂಶದಲ್ಲಿ ಶೇ 3.19ರಷ್ಟು ಕುಸಿದಿದೆ. ರಾಜ್ಯವಾರು ಫಲಿತಾಂಶ ನೋಡಿದಾಗ ಕರ್ನಾಟಕವು ಈ ವರ್ಷ 8ನೇ ಸ್ಥಾನದಲ್ಲಿದೆ. 2024ರಲ್ಲಿ ಶೇ 96.09ರಷ್ಟು ಫಲಿತಾಂಶದೊಂದಿಗೆ 9ನೇ ಸ್ಥಾನದಲ್ಲಿತ್ತು. 2025ರಲ್ಲಿ ಶೇ 95.95ರಷ್ಟು ಫಲಿತಾಂಶದೊಂದಿಗೆ 7ನೇ ಸ್ಥಾನದಲ್ಲಿತ್ತು. ರಾಜ್ಯದಲ್ಲಿ 22,386 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 20,861 ಮಂದಿ ಪಾಸಾಗಿದ್ದಾರೆ. ಬಾಲಕಿಯರ ಉತ್ತೀರ್ಣ ಪ್ರಮಾಣ ಶೇ 94.4ರಷ್ಟು ಇದ್ದರೆ, ಬಾಲಕರ ಉತ್ತೀರ್ಣ ಪ್ರಮಾಣ ಶೇ 92ರಷ್ಟು ಇದೆ. ರಾಜ್ಯದಲ್ಲಿ 315 ಸಿಬಿಎಸ್‌ಇ ಶಾಲೆಗಳಿದ್ದು 187 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು.

ವಲಯವಾರು ನೋಡಿದಾಗ ಬೆಂಗಳೂರು 3ನೇ ಸ್ಥಾನದಲ್ಲಿದೆ. ಲಕ್ಷದ್ವೀಪದಲ್ಲಿ ಶೇ 100ರಷ್ಟು ಫಲಿತಾಂಶ ಬಂದಿದೆ. ಗೋವಾದಲ್ಲಿ ಶೇ 96.38ರಷ್ಟು, ಕೇರಳದಲ್ಲಿ ಶೇ 95.61ರಷ್ಟು, ತಮಿಳುನಾಡಿನಲ್ಲಿ ಶೇ 95.25ರಷ್ಟು, ಮಿಜೋರಾಂನಲ್ಲಿ ಶೇ 94.94ರಷ್ಟು, ದಿಯು ಮತ್ತು ದಾಮನ್ ನಲ್ಲಿ ಶೇ 93.86ರಷ್ಟು ಹಾಗೂ ಆಂಧ್ರದಲ್ಲಿ ಶೇ 93.23ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಚೈತನ್ಯ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 12ನೇ ತರಗತಿಯ ಪರೀಕ್ಷೆಯಲ್ಲಿ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ವೈಷ್ಣವಿ ದಾಸ್

ಆದಿತ್ಯ ಸಿಂಗ್

ರಘುರಾಮ್

500 ಅಂಕಕ್ಕೆ ಸಂಸ್ಥೆಯ ವೈಷ್ಣವಿ ದಾಸ್ 492, ಆದಿತ್ಯ ಸಿಂಗ್ 490 ಮತ್ತು ರಘುರಾಮ್ ಎಂ. 490 ಅಂಕ ಗಳಿಸಿದ್ದಾರೆ. ಒಟ್ಟು 44 ವಿದ್ಯಾರ್ಥಿಗಳು 480 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಸುಷ್ಮಾ ಬೋಪಣ್ಣ ಮತ್ತು ಸೀಮಾ ಬೊಪ್ಪಣ ಅಭಿನಂದಿಸಿದ್ದಾರೆ ಎಂದು ಶ್ರೀ ಚೈತನ್ಯ ಟೆಕ್ನೊ ಸ್ಕೂಲ್ಸ್‌ನ ಎಜಿಎಂ ವಿ. ಸತೀಶ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನೀರಿನ ಸಂಪರ್ಕ ಶುಲ್ಕ ಶೇ 50ರಷ್ಟು ತಗ್ಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಜಲಮಂಡಳಿಯ ಕಾವೇರಿ 5ನೇ ಹಂತದ ಯೋಜನೆಯ ಅಡಿ ಸಂಪರ್ಕ ಪಡೆಯುವ ಬಳಕೆದಾರರ ಶುಲ್ಕವನ್ನು ಶೇ 50ರಷ್ಟು ತಗ್ಗಿಸಬೇಕು. ಮುಖ್ಯಮಂತ್ರಿ ಅವರು ಸಭೆ ಕರೆದು ಶೀಘ್ರ ತೀರ್ಮಾನ ಕೈಗೊಳ್ಳಬೇಕು' ಎಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

'ನಗರದ ಹೊರವಲಯದ 110 ಹಳ್ಳಿಗಳ 2.5 ಲಕ್ಷ ಮನೆಗಳಿಗೆ ಕುಡಿಯುವ ನೀರನ್ನು ಪೂರೈಸಲು ಜಾರಿಗೊಳಿಸಿರುವ ಯೋಜನೆ ನಾಗರಿಕರಿಗೆ ನೀರನ್ನು ತಲುಪಿಸುವಲ್ಲಿ ವಿಫಲವಾಗಿದೆ. ಜಲ ಮಂಡಳಿ ವಿಧಿಸುತ್ತಿರುವ ಬಳಕೆದಾರರ ಶುಲ್ಕ ದುಬಾರಿ ಆಗಿದೆ' ಎಂದು ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಸತೀಶ್ ಕುಮಾರ್ ತಿಳಿಸಿದ್ದಾರೆ.

'ಯೋಜನೆಗೆ ಈಗಾಗಲೇ ₹5,500 ಕೋಟಿ ವೆಚ್ಚ ಮಾಡಲಾಗಿದೆ. ಯೋಜನೆ ಮುಗಿದು 2 ವರ್ಷ ಆಗುತ್ತಿದೆ. ಆದರೆ, ಸಾರ್ವಜನಿಕರು ಜಲಮಂಡಳಿ ಶುಲ್ಕ ಭರಿಸಲಾಗದೇ ಸಂಪರ್ಕ ತೆಗೆದುಕೊಳ್ಳುತ್ತಿಲ್ಲ. ಸರ್ಕಾರ ಕುಡಿಯುವ ನೀರಿನ ಯೋಜನೆಗೆ ವಿದೇಶದಲ್ಲಿ ಸಾಲ ಮಾಡಿದೆ. ಸಾಲವ ತೀರಿಸಬೇಕೆಂಬ ನೆಪದಲ್ಲಿ ನಾಗರಿಕರಿಂದ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆಯುವ ಹುನ್ನಾರದಲ್ಲಿ ತೊಡಗಿದೆ' ಎಂದು ಟೀಕಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ, ದೇವನಹಳ್ಳಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಹಾಗೂ ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತದಲ್ಲಿ ಮಾಜಿ ಸೈನಿಕ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

ಹೊಸೂರು ರಸ್ತೆಯ ಬಯೊಕಾನ್ ಮೆಟ್ರೊ ನಿಲ್ದಾಣದ ಬಳಿ, ಕ್ಯಾಂಟರ್ ವಾಹನ ಹಾಗೂ ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆಯ ಅರುಣ್‌ಕುಮಾರ್ (26) ಮೃತಪಟ್ಟಿದ್ದಾರೆ. ಅರುಣ್ ಅವರು ಕಾರು ಚಾಲಕರಾಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಹೆಬ್ಬಗೋಡಿನ ಅನಂತನಗರದಲ್ಲಿ ಸ್ನೇಹಿತನ ಜತೆಗೆ ಅರುಣ್‌ಕುಮಾರ್ ವಾಸವಿದ್ದರು. ಊಟಕ್ಕೆಂದು ದ್ವಿಚಕ್ರ ವಾಹನದಲ್ಲಿ ಹೊರಕ್ಕೆ ಹೋಗಿ ಮನೆಗೆ ವಾಪಸ್ ಬರುತ್ತಿದ್ದರು. ಬಯೊಕಾನ್ ಮೆಟ್ರೊ ನಿಲ್ದಾಣದ ಬಳಿ ವೇಗವಾಗಿ ಬಂದ ಕಾರೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅರುಣ್‌ಕುಮಾರ್ ಮೃತಪಟ್ಟಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೆಬ್ಬಗೋಡಿ ಬಸ್ ನಿಲ್ದಾಣದ ಬಳಿ ಸಂಭವಿಸಿದ ಮತ್ತೊಂದು ಅಪಘಾತದಲ್ಲಿ ಆನೇಕಲ್‌ನ ಇಬ್ಬಲೂರಿನ ನಿವಾಸಿ, ಮಾಜಿ ಸೈನಿಕ ರಾಮ್‌ಕಿಶನ್ (60) ಮೃತಪಟ್ಟಿದ್ದಾರೆ.

ಬುಧವಾರ ಬೆಳಿಗ್ಗೆ ಎಲೆಕ್ಟ್ರಾನಿಕ್ ಸಿಟಿಗೆ ಹೋಗಿ ಮನೆಗೆ ವಾಪಸ್ ಬರುತ್ತಿದ್ದರು. ಹೆಬ್ಬಗೋಡಿ ಬಸ್ ನಿಲ್ದಾಣದ ಬಳಿ ಸಂಭವಿಸಿದ ಅಪಘಾತದಲ್ಲಿ ರಾಮ್‌ಕಿಶನ್ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಚಾಲಕ ಸಾವು: ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ನಿಲೇರಿ ಗ್ರಾಮದ ನಿವಾಸಿ, ಲಾರಿ ಚಾಲಕ ಶೇಖರ್ (28) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶೇಖರ್ ಹಾಗೂ ಯಶಸ್ವಿನಿ ದಂಪತಿ ದೇವನಹಳ್ಳಿಯ ನಿಲೇರಿ ಗ್ರಾಮದಲ್ಲಿ ವಾಸಿಸುತ್ತಿದ್ದರು. ಯಶಸ್ವಿನಿ ಅವರು ಬಾಣಂತನಕ್ಕೆ ಪಟೇಲ್ ಜಳ್ಳಪ್ಪ ಬೀದಿಯಲ್ಲಿ ನೆಲಸಿರುವ ತಂದೆಯ ಮನೆಗೆ ಹೋಗಿದ್ದರು. ಮಗು ಜನಿಸಿದ ಬಳಿಕ ಒಂಬತ್ತು ತಿಂಗಳಿಂದ ತಂದೆಯ ಮನೆಯಲ್ಲೇ ಯಶಸ್ವಿನಿ ಉಳಿದುಕೊಂಡಿದ್ದರು.

ಶೇಖರ್ ಆಗಾಗ್ಗೆ ಪಟೇಲ್ ಜಳ್ಳಪ್ಪ ಬೀದಿಗೆ ಹೋಗಿ ಪತ್ನಿ ಹಾಗೂ ಮಗುವನ್ನು ನೋಡಿಕೊಂಡು ಬರುತ್ತಿದ್ದರು. ಶೇಖರ್ ಈ ಬಾರಿ ಹೋದವರು ಬುಧವಾರ ರಾತ್ರಿ 10.30ರ ಸುಮಾರಿಗೆ ವಾಪಸ್ ಬರುತ್ತಿದ್ದರು. ದೇವನಹಳ್ಳಿ ಕೋಟೆ ಕ್ರಾಸ್ ಬಳಿ, ವೇಗವಾಗಿ ಬಂದ ಕಾರೊಂದು ಬೈಕ್‌ಗೆ ಡಿಕ್ಕಿ ಹೊಡಿದಿದೆ. ರಸ್ತೆಗೆ ಬಿದ್ದ ಶೇಖರ್ ಅವರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ದೇವನಹಳ್ಳಿ ಸಂಚಾರ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಮೊಬೈಲ್ ವಿಚಾರಕ್ಕೆ ಗಲಾಟೆ: ವ್ಯಕ್ತಿ ಸಾವು

ಬೆಂಗಳೂರು: ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಚೌಡೇಶ್ವರಿ ರಸ್ತೆಯಲ್ಲಿ ಮೊಬೈಲ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಸ್ನೇಹಿತನಿಂದ ಇರಿತಕ್ಕೆ ಒಳಗಾದ ಯುವಕ ಬುಧವಾರ ಮೃತಪಟ್ಟಿದ್ದಾರೆ.

ಪರಶುರಾಮ್ ಯಲ್ಲಪ್ಪ ಮಂಗಳಗಟ್ಟಿ (25) ಮೃತಪಟ್ಟವರು.

ಮೇ 10ರಂದು ನಡೆದ ಗಲಾಟೆಯಲ್ಲಿ ಸ್ನೇಹಿತ ರಾಮು ಎಂಬಾತ ಪರಶುರಾಮ್ ಯಲ್ಲಪ್ಪ ಮಂಗಳಗಟ್ಟಿಗೆ ಚಾಕುವಿನಿಂದ ಇರಿದಿದ್ದ ಎಂದು ಪೊಲೀಸರು ಹೇಳಿದರು.

'ಹುಬ್ಬಳ್ಳಿಯ ಪರಶುರಾಮ್ ಹಾಗೂ ರಾಮು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಮಾರತ್‌ಹಳ್ಳಿ ಠಾಣೆ ವ್ಯಾಪ್ತಿಯ ಚೌಡೇಶ್ವರಿ ರಸ್ತೆಯಲ್ಲಿನ ಬೆಸ್ಕಾಂ ಕಚೇರಿ ಬಳಿ ಬಾಡಿಗೆ ಕೊಠಡಿಯಲ್ಲಿ ಇಬ್ಬರೂ ವಾಸವಿದ್ದರು. ಮೇ 10ರಂದು ರಾಮು ಕೆಲಸ ಮುಗಿಸಿ, ಮಾರ್ಗಮಧ್ಯದಲ್ಲಿ ಬಾರ್‌ಗೆ ತೆರಳಿ, ಮದ್ಯ ಸೇವಿಸಿ ಕೊಠಡಿಗೆ ಬಂದಿದ್ದ. ಕೊಠಡಿಗೆ ಬಂದ ಮೇಲೆ ಪರಶುರಾಮ್ ಅವರ ಮೊಬೈಲ್ ಫೋನ್ ಬಚ್ಚಿಟ್ಟಿದ್ದ. ಎಚ್ಚರವಾದ ಬಳಿಕ 'ಮೊಬೈಲ್ ಎಲ್ಲಿಟ್ಟಿದ್ದೀಯಾ, ಕೊಡು' ಎಂಬುದಾಗಿ ಪರಶುರಾಮ್ ಕೇಳಿದ್ದರು. ಈ ವೇಳೆ ರಾಮು 'ಮೊಬೈಲ್ ಕೊಡಲ್ಲ' ಎಂದಿದ್ದಕ್ಕೆ ಇಬ್ಬರ ಮಧ್ಯೆ ಗಲಾಟೆ ಆಗಿತ್ತು. ಸಿಟ್ಟಿಗೆದ್ದ ರಾಮು, ಅಡುಗೆ ಕೋಣೆಯಿಂದ ಚಾಕು ತಂದು ಪರಶುರಾಮ್ ಅವರಿಗೆ ಇರಿದಿದ್ದ. ಬಳಿಕ, ಮೊಬೈಲ್ ತೆಗೆದುಕೊಂಡು ಪರಾರಿ ಆಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಕ್ಕಪಕ್ಕದ ಮನೆಯವರು ಗಲಾಟೆ ಗಮನಿಸಿ ಹಲ್ಲೆಗೆ ಒಳಗಾದ ಪರಶುರಾಮ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ.

'ಮೃತನ ಸಹೋದರ ಗಂಗಪ್ಪ ನೀಡಿದ ದೂರಿನ ಮೇರೆಗೆ ಆರೋಪಿ ವಿರುದ್ಧ ಕೊಲೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಕಾಲ್ತುಳಿತ: ಆರೋಪಿಗಳ ವಿದೇಶ ಪ್ರವಾಸಕ್ಕೆ ಹೈಕೋರ್ಟ್ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ಆರೋಪಿಗಳಾದ ಅಂದಿನ ಕಾರ್ಯಕ್ರಮ ಆಯೋಜಕ, 'ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್ ಕಂಪನಿ' ನಿರ್ದೇಶಕ ಸುನಿಲ್ ಮ್ಯಾಥ್ಯೂ ಮತ್ತು ಎಸ್.ಕಿರಣ್ ಕುಮಾರ್ ಅವರ ಹತ್ತು ದಿನಗಳ ಬ್ರೆಜಿಲ್ ಪ್ರವಾಸಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

ಸುನಿಲ್ ಮ್ಯಾಥ್ಯೂ ಮತ್ತು ಕಿರಣ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರ ರಜಾಕಾಲದ ಏಕ ಸದಸ್ಯ ಪೀಠ ವಿಚಾರಣೆ ನಡೆಸಿ ಜಾಮೀನಿನ ಷರತ್ತು ಸಡಿಲಿಸಿ ಆದೇಶಿಸಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಬಿ.ಕೆ.ಸಂಪತ್ ಕುಮಾರ್, 'ಈಗಾಗಲೇ ಪ್ರಕರಣದ ತನಿಖೆ ಮುಕ್ತಾಯಗೊಂಡಿದೆ. ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಅರ್ಜಿದಾರರು 11 ತಿಂಗಳಿಂದ ಜಾಮೀನಿನ ಮೇಲೆ ಹೊರಗಿದ್ದಾರೆ. ನ್ಯಾಯಾಲಯ ವಿಧಿಸಿರುವ ಯಾವ ಷರತ್ತನ್ನೂ ಉಲ್ಲಂಘಿಸಿಲ್ಲ' ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿದರು.

ಇದಕ್ಕೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಟಿ.ವೆಂಕಟೇಶ್, 'ದೋಷಾರೋಪ ಪಟ್ಟಿಯಲ್ಲಿ ಅರ್ಜಿದಾರರ ವಿರುದ್ಧ ಗಂಭೀರ ಆಪಾದನೆಗಳಿವೆ. ಈ ಹಂತದಲ್ಲಿ ಅರ್ಜಿದಾರರಿಗೆ ನೀಡಿರುವ ಜಾಮೀನು ಷರತ್ತುಗಳನ್ನು ಸಡಿಲಿಕೆ ಮಾಡುವುದು ಸರಿಯಲ್ಲ' ಎಂದು ಬಲವಾದ ಆಕ್ಷೇಪ ವ್ಯಕ್ತಪಡಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ಅಂತಿಮವಾಗಿ ಅರ್ಜಿದಾರರಿಬ್ಬರೂ ನ್ಯಾಯಾಲಯಕ್ಕೆ ನೀಡಿದ ಮುಚ್ಚಳಿಕೆ ಹಾಗೂ ಪ್ರವಾಸದ ಪಟ್ಟಿಯನ್ನು ಪರಿಗಣಿಸಿ, 'ಜೂನ್ 1ರಿಂದ 10ರವರೆಗೆ ಬ್ರೆಜಿಲ್‌ನ ರಿಯೊ ಡಿ ಜನೈರೊಗೆ ಕರ್ತವ್ಯದ ನಿಮಿತ್ತ ಪ್ರವಾಸ ಕೈಗೊಳ್ಳಲು ಅನುಮತಿ ನೀಡಲಾಗಿದೆ' ಎಂದು ತಿಳಿಸಿ ವಿಚಾರಣೆಯನ್ನು ಜೂನ್ 12ಕ್ಕೆ ಮುಂದೂಡಿತು. ಸುನಿಲ್ ಮ್ಯಾಥ್ಯೂ ಸೇರಿದಂತೆ ಪ್ರಕರಣದ ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡುವಾಗ, 'ನ್ಯಾಯಾಲಯದ ಅನುಮತಿ ಪಡೆಯದೇ ವ್ಯಾಪ್ತಿ ಪ್ರದೇಶ ತೊರೆಯುವಂತಿಲ್ಲ' ಎಂಬ ಷರತ್ತು ವಿಧಿಸಲಾಗಿತ್ತು. ಷರತ್ತನ್ನು ಸಡಿಲಿಸುವಂತೆ ಸುನಿಲ್ ಮತ್ತು ಕಿರಣ್ ಕೋರಿದ್ದರು.

ಪ್ರಕರಣವೇನು?: 2025ರ ಜೂನ್ 4ರಂದು ಐಪಿಎಲ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡ ಜಯಗಳಿಸಿತ್ತು. ಮರುದಿನ (ಜೂ.5) ನಗರದಲ್ಲಿ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಲಕ್ಷಾಂತರ ಜನ ಚಿನ್ನಸ್ವಾಮಿ ಕ್ರೀಡಾಂಗಣದ ಮುಂದೆ ಜಮಾಯಿಸಿದ್ದರು. ಈ ವೇಳೆ ಕಾಲ್ತುಳಿತ ಉಂಟಾಗಿ 11 ಜನ ಮೃತಪಟ್ಟು, 56 ಜನ ಗಾಯಗೊಂಡಿದ್ದರು.

ಕಾರು ಡಿಕ್ಕಿ: ಪತಿ ಸಾವು, ಪತ್ನಿ, ಪುತ್ರಿಗೆ ಗಾಯ

ಬೆಂಗಳೂರು: ಆಡಿ ಕಾರು ಡಿಕ್ಕಿ ಹೊಡೆದು ಪತಿ ಮೃತಪಟ್ಟು, ಪತ್ನಿ ಮತ್ತು ಮಗಳು ಗಾಯಗೊಂಡಿರುವ ಘಟನೆ ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮಹೇಶ್ ಕುಮಾರ್

ಹುಣಸಮಾರನಹಳ್ಳಿ ನಿವಾಸಿ ಮಹೇಶ್ ಕುಮಾರ್ (40) ಮೃತರು. ಅವರ ಪತ್ನಿ ಕಲಾ (35) ಮತ್ತು ಮಗಳು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಂಗಳವಾರ ರಾತ್ರಿ 9 ಗಂಟೆ ಸುಮಾರಿಗೆ ಚಿಕ್ಕಜಾಲ ಜಂಕ್ಷನ್ ಬಳಿ ದುರ್ಘಟನೆ ನಡೆದಿದೆ.

ಮಂಗಳವಾರ ರಾತ್ರಿ 9ರ ಸುಮಾರಿಗೆ ಮಹೇಶ್ ಕುಮಾರ್, ಪತ್ನಿ ಮತ್ತು ಮಗಳ ಜತೆ ಮದುವೆ ಕಾರ್ಯಕ್ರಮ ಮುಗಿಸಿ ಕೊಂಡು ತಮ್ಮ ದ್ವಿಚಕ್ರ ವಾಹನದಲ್ಲಿ ಮನೆಗೆ ಹಿಂತಿರುಗುತ್ತಿ ರುವಾಗ ಚಿಕ್ಕಜಾಲ ಜಂಕ್ಷನ್ ಬಳಿ ವೇಗವಾಗಿ ಬಂದ ಆಡಿ ಕಾರೊಂದು ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಕೆಳಗೆ ಬಿದ್ದ ಮಹೇಶ್ ಕುಮಾರ್, ಹಿಂಬದಿ ಕುಳಿತಿದ್ದ ಕಲಾ ಮತ್ತು ಮಗಳು ಗಾಯ ಗೊಂಡಿದ್ದರು. ಮಹೇಶ್ ಕುಮಾರ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ಕಾರಿನ ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಿದ್ದಾನೆ.. ಸಿಸಿಟಿವಿ ಕ್ಯಾಮೆರಾಗಳ ದೃಶ್ಯ ಪರಿಶೀಲಿಸಲಾಗಿದೆ ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಚಾಲಕನ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಅಮೃತಹಳ್ಳಿಯ ಶ್ರೀರಾಮ್‌ಪುರದ ನಿವಾಸಿ ರಾಮ್ ಕುಮಾರ್ (26) ಆತ್ಮಹತ್ಯೆ ಮಾಡಿಕೊಂಡವರು.

ರಾಮ್‌ಕುಮಾರ್ ಅವರು ಯುವತಿಯನ್ನು ಪ್ರೀತಿಸುತ್ತಿದ್ದರು. ಪ್ರೀತಿಗೆ ಮನೆಯವರು ವಿರೋಧ ವ್ಯಕ್ತಪಡಿಸಿದ್ದರಿಂದ ಅವರು ಬುಧವಾರ ಮಧ್ಯಾಹ್ನ ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ಅನಿಲ್



ಬೆಂಗಳೂರು: ನಗರದ ಕಾಕ್ಸ್‌ಟೌನ್ ಭಾಗದಲ್ಲಿ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದ ಅನಿಲ್ (51) ಅವರು ಬುಧವಾರ ನಿಧನರಾದರು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಪ್ರತಿಭಟನೆ

'ಗೌರವಧನ ಹೆಚ್ಚಿಸಿ, ಭರವಸೆ ಈಡೇರಿಸಿ'

ಪ್ರಜಾವಾಣಿ ವಾರ್ತೆ

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಮಹಿಳೆಯರು ಬುಧವಾರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

ಬೆಂಗಳೂರು: ಗೌರವ ಧನ ಹೆಚ್ಚಳವೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

'2025ರ ಜನವರಿಯಲ್ಲಿ ಮುಖ್ಯಮಂತ್ರಿ ಅವರೇ ಘೋಷಿಸಿದ ರೀತಿಯಲ್ಲಿ ಗೌರವ ಧನವನ್ನು ಕನಿಷ್ಠ ₹10 ಸಾವಿರ ನೀಡಲು ಕ್ರಮ ವಹಿಸಬೇಕು. ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ₹1,000 ಗೌರವ ಧನ ಹೆಚ್ಚಿಸಿದಂತೆ ಆಶಾ ಕಾರ್ಯಕರ್ತೆಯರಿಗೆ ಹೆಚ್ಚಳ ಮಾಡಬೇಕು. ಬೇಡಿಕೆಗಳ ಕುರಿತು ಚರ್ಚಿಸಲು ಕೂಡಲೇ ಸಭೆ ಕರೆಯಬೇಕು' ಎಂದು ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಉಪಾಧ್ಯಕ್ಷೆ ಟಿ.ಸಿ.ರಮಾ ಆಗ್ರಹಿಸಿದರು.

'ಒಂದು ವರ್ಷದಿಂದ ಕಾರ್ಯಕರ್ತೆಯರಿಗೆ ಗೌರವಧನ, ಪ್ರೋತ್ಸಾಹಧನ ಪ್ರತೀ ತಿಂಗಳು ನಿಗದಿತ ಸಮಯಕ್ಕೆ ಬರುತ್ತಿಲ್ಲ. ಈಗಲೂ 3–4 ತಿಂಗಳ ಕೇಂದ್ರದ ಪ್ರೋತ್ಸಾಹಧನ ಬಾಕಿ ಇದೆ. 1–2 ತಿಂಗಳ ರಾಜ್ಯ ಸರ್ಕಾರದ ಗೌರವಧನ ಬಾಕಿ ಇದೆ. ಇದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು' ಎಂದರು.

'ಆ್ಯಪ್ ಮೂಲಕ ದಾಖಲಾತಿ ಮಾಡಿಸುವುದನ್ನು ಕೈಬಿಡಬೇಕು. ಮೌಲ್ಯಮಾಪನದ ಹೆಸರಲ್ಲಿ ಆಶಾಗಳಿಗೆ ಆಗುತ್ತಿರುವ ಶೋಷಣೆ ನಿಲ್ಲಿಸಬೇಕು. ನಿವೃತ್ತಿ ಆಗಿರುವ ಆಶಾಗಳಿಗೆ ಇರುವ ಇಡುಗಂಟು ನೀಡಬೇಕು. ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರಿಸಬೇಕು' ಎಂದು ಒತ್ತಾಯಿಸಿದರು.

'ಆಶಾ ನಿಧಿ ತಂತ್ರಾಂಶದಲ್ಲಿ ಆಶಾ ಸೇವೆಗಳನ್ನು ನಿಷ್ಕ್ರಿಯಗೊಳಿಸಿರುವುದರಿಂದ ಕಾರ್ಯಕರ್ತರಿಗೆ ಮಾಸಿಕ ₹ 500ರಿಂದ ₹1000 ವರೆಗೆ ಪ್ರೋತ್ಸಾಹಧನ ಕಡಿತವಾಗಿದೆ. ಈ ಸೇವೆ ಮುಂದುವರಿಸಬೇಕು' ಎಂದರು.

ಸಂಘದ ಪ್ರಮುಖರಾದ ಮಹಾಲಕ್ಷ್ಮಿ, ಫರ್ಹಾನ, ದೀಪಾ, ಮುನಿರತ್ನ, ಭವ್ಯಾ, ಲಕ್ಷ್ಮಿದೇವಿ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಮುನ್ನೋಟ

'ಒಳಚರಂಡಿ ಪುರಾಣ' ನಾಟಕದ ದೃಶ್ಯ

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ

ಬೆಂಗಳೂರು: ಅಂತರಂಗ ತಂಡವು ಇದೇ 15ರಂದು ಮಲ್ಲೇಶ್ವರದ ಸೇವಾಸದನದಲ್ಲಿ ಸಂಜೆ 7.15ಕ್ಕೆ 'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಗೌರೀಶ್ ಜೋಶಿ ಅವರು ಈ ನಾಟಕ ರಚಿಸಿದ್ದು, ಅರ್ಚನಾ ಶ್ಯಾಮ್ ಅವರು ನಿರ್ದೇಶಿಸಿದ್ದಾರೆ. ಸರ್ಕಾರಿ ಕಚೇರಿಗಳ ಕಾರ್ಯವೈಖರಿಯನ್ನು ವಿಡಂಬನಾತ್ಮಕವಾಗಿ ತೋರಿಸುವ ಪ್ರಯತ್ನವನ್ನು ಈ ನಾಟಕ ಮಾಡಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ. ಸಂಪರ್ಕಕ್ಕೆ: 9880914509 ಅಥವಾ 9986911321

ತಿಂಗಳ ನಾಟಕ ಸಂಭ್ರಮ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ತಿಂಗಳ ನಾಟಕ ಸಂಭ್ರಮ ಸರಣಿಯಡಿ ಇದೇ 16ರಂದು ಸಂಜೆ 6.30ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಮುಚ್ಚಯ ಭವನದಲ್ಲಿ 'ಬೆಲ್ಲದ ದೋಣಿ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಹನೂರು ಚನ್ನಪ್ಪ ಅವರು ರಚಿಸಿರುವ ಈ ನಾಟಕವನ್ನು, ರೂಬಿನ್ ಸಂಜಯ್ ಅವರ ನಿರ್ದೇಶನದಲ್ಲಿ ರಂಗವಾಹಿನಿ ತಂಡ ಪ್ರಸ್ತುತಪಡಿಸಲಿದೆ.

'ಸಂಜೆ ಹಾಡು' ನಾಟಕ ಪ್ರದರ್ಶನ

ಬೆಂಗಳೂರು: ರಂಗಚಕ್ರ ರಂಗ ತಂಡವು ಇದೇ 17ರಂದು ಸಂಜೆ 7 ಗಂಟೆಗೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 'ಸಂಜೆ ಹಾಡು' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ. ರಾಜೇಂದ್ರ ಕಾರಂತ್ ಅವರು ಈ ನಾಟಕ ರಚಿಸಿದ್ದು, ಮಹೇಶ್ ಕುಮಾರ್ ಸಂಪರ್ಕಕ್ಕೆ: 7022325440

'ನಮ್ಗೇನ್ ಬೆಲೆನೇ ಇಲ್ವಾ?' ನಾಟಕ

ಬೆಂಗಳೂರು: ಪಯಣ ರಂಗ ತಂಡವು ಇದೇ 17ರಂದು ಸಂಜೆ 7.15ಕ್ಕೆ ದೊಡ್ಡಕಲ್ಲಸಂದ್ರ ಮೆಟ್ರೊ ನಿಲ್ದಾಣದ ಬಳಿಯಿರುವ ಶಂಕರ ಫೌಂಡೇಷನ್‌ನ ಢಮರು ಆಡಿಟೋರಿಯಂನಲ್ಲಿ 'ನಮ್ಗೇನ್ ಬೆಲೆನೇ ಇಲ್ವಾ?' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಅರುಣ್ ಸೂರ್ಯ ಅವರ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನ ಕಾಣಲಿದೆ. ಇದೊಂದು ಪ್ರಯೋಗಾತ್ಮಕ ಕನ್ನಡ ನಾಟಕವಾಗಿದ್ದು, ನಿಜ ಜೀವನದ ಘಟನೆಗಳಿಂದ ಸ್ಫೂರ್ತಿ ಪಡೆದಿದೆ. ಒಂದು ರೋಚಕ ಹಾಗೂ ರಂಜನೀಯ ಪ್ರಯಾಣಕ್ಕೆ ಕರೆದೊಯ್ಯುತ್ತದೆ. ಒಂದೇ ವೇದಿಕೆಯ ಮೇಲೆ ಎರಡು ನಾಟಕಗಳು ಏಕಕಾಲದಲ್ಲಿ ತೆರೆದುಕೊಳ್ಳುತ್ತವೆ ಎಂದು ಆಯೋಜಕರು ತಿಳಿಸಿದ್ದಾರೆ.

ಟಿಕೆಟ್ ದರ ₹150 ನಿಗದಿಪಡಿಸಲಾಗಿದ್ದು, ಬುಕ್ ಮೈ ಶೋದಲ್ಲಿ ಟಿಕೆಟ್‌ಗಳು ಲಭ್ಯ. ಸಂಪರ್ಕಕ್ಕೆ: 6363333506

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕದ ದೃಶ್ಯ

ಹಾಸ್ಯ ನಾಟಕ ಪ್ರದರ್ಶನ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಇದೇ 17ರ ಸಂಜೆ 5 ಹಾಗೂ 7 ಗಂಟೆಗೆ ಎನ್.ಆರ್. ಕಾಲೊನಿಯಲ್ಲಿರುವ ಸಿ. ಅಶ್ವತ್ಥ್ ಕಲಾಭವನದಲ್ಲಿ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ ಅವರು ನಾಟಕ ರಚಿಸಿದ್ದು, ಅಶೋಕ್ ಬಿ. ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ. ಸಂಪರ್ಕಕ್ಕೆ: 9945977184 ಅಥವಾ 9916863637

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

400 ರೋಸ್ಟರ್ ಬಿಂದು ಪಾಲನೆಗೆ ಆದೇಶ

ಒಳಮೀಸಲು: ಎಸ್‌ಸಿ 101 ಜಾತಿಗಳಿಗೆ ಲಭ್ಯವಿರುವ ಶೇ 15ರ ಮೀಸಲಾತಿಯಲ್ಲಿ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಲಭ್ಯವಿರುವ ಶೇ 15ರ ಮೀಸಲಾತಿಯಲ್ಲಿ ಒಳಮೀಸಲಾತಿ ಹಂಚಿಕೆಗಾಗಿ, 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸುವ ಕುರಿತು ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ರೋಸ್ಟರ್ ಬಿಂದುಗಳನ್ನು 100 ರೋಸ್ಟರ್ ಬಿಂದುಗಳಿಗೆ ಸೀಮಿತಗೊಳಿಸಿದಾಗ ಆಗುತ್ತಿದ್ದ ಸಮಸ್ಯೆಗಳಿಗೆ ಹೊಸ ಆದೇಶದಿಂದ ಪರಿಹಾರ ಸಿಕ್ಕಂತಾಗಿದೆ. ಇತ್ತೀಚೆಗೆ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿತ್ತು.

ಪ್ರವರ್ಗ 'ಎ' (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ 'ಬಿ' (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ 'ಸಿ'ಗೆ (ಸ್ಪೃಶ್ಯ, ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿ ಜಾತಿಗಳು) 5.25:5.25:4.50 ಅನುಪಾತದಲ್ಲಿ ಮೀಸಲಾತಿ ನೀಡಲಾಗಿದೆ. 0.25 ಮೀಸಲಾತಿಯ ಹುದ್ದೆಗಳು ನಾಲ್ಕು ಬಾರಿ ಬಂದಾಗ ಒಂದು ಹುದ್ದೆಯಾಗಿ ಬದಲಾಗಲಿವೆ. ಅಂದರೆ, ಸದ್ಯ ಪಾಲಿಸುತ್ತಿರುವ 100 ಬಿಂದುಗಳ ರೋಸ್ಟರ್ ವರ್ತುಲವು ನಾಲ್ಕು ಬಾರಿ ಆದಾಗ, ಒಂದು ಹುದ್ದೆ ಲಭ್ಯವಾಗಲಿದೆ.

ರೋಸ್ಟರ್ ಬಿಂದುಗಳನ್ನು 100 ರೋಸ್ಟರ್ ಬಿಂದುಗಳಿಗೆ ಸೀಮಿತಗೊಳಿಸಿದರೆ 0.25 ಹುದ್ದೆ ಉಳಿಕೆ ಆಗಲಿದೆ. ಅದನ್ನು ಒಂದು ಹುದ್ದೆಯಾಗಿ ಮಾಡಲು ರೋಸ್ಟರ್ ಅನ್ನು 400 ರೋಸ್ಟರ್ ಬಿಂದುಗಳ ವರ್ತುಲ ಮಾಡುವ ಅಗತ್ಯವಿತ್ತು. ಅದನ್ನು ಈಗ ಸರ್ಕಾರ ಮಾಡಿದೆ.

ಯಾರಿಗೆ ಎಷ್ಟು ಬಿಂದುಗಳು

ಹೊಸ ಆದೇಶದ ಅನ್ವಯ ಪರಿಶಿಷ್ಟ ಜಾತಿ ಪ್ರವರ್ಗ-ಎ (5.25)-21 ಬಿಂದುಗಳು, ಪರಿಶಿಷ್ಟ ಜಾತಿ ಪ್ರವರ್ಗ-ಬಿ (5.25)-21 ಬಿಂದುಗಳು, ಪರಿಶಿಷ್ಟ ಜಾತಿ ಪ್ರವರ್ಗ-ಸಿ (4.5)-18 ಬಿಂದುಗಳು. ಒಟ್ಟು ಶೇ 15 ಅಂದರೆ 60 ಬಿಂದುಗಳು. ಶೇ 20ರಂತೆ 4 ಹುದ್ದೆಗಳನ್ನು 59 ಪರಿಶಿಷ್ಟ ಜಾತಿಯ ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಿದೆ.

ಆದೇಶದ ಪ್ರಮುಖ ಅಂಶಗಳು

- 400 ಬಿಂದುಗಳ ರೋಸ್ಟರ್‌ನಲ್ಲಿ ಪರಿಶಿಷ್ಟ ಜಾತಿಯ ಯಾವುದೇ ಪ್ರವರ್ಗಗಳನ್ನು (ಪ್ರವರ್ಗ-ಎ,ಬಿ,ಸಿ) ನಮೂದಿಸದೇ ತಯಾರಿಸಲಾಗಿದೆ. ಹಿಂದಿನ ನೇರ ನೇಮಕಾತಿಯು ಯಾವ ಬಿಂದುವಿನವರೆಗೆ ಆಗಿರುತ್ತದೆಯೋ, ಅದರ ನಂತರದ ಬಿಂದುವಿನಿಂದ ಹೊಸ ನೇಮಕಾತಿ ಆರಂಭಿಸುವುದು. ಇದೇ ಪದ್ಧತಿ ಸಮತಳ ಮೀಸಲಾತಿಗೂ ಅನುಸರಿಸುವುದು.
- ನೇಮಕಾತಿ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿಗೆ 3ಕ್ಕಿಂತ ಕಡಿಮೆ ಹುದ್ದೆಗಳು ಲಭ್ಯವಾಗುತ್ತಿದ್ದಲ್ಲಿ ಎಲ್ಲಾ 101 ಪರಿಶಿಷ್ಟ ಜಾತಿಗಳಿಗೆ ಅವಕಾಶ ನೀಡಬೇಕಾಗಿರುವುದರಿಂದ ಲಗತ್ತಿಸಿರುವ 400 ರೋಸ್ಟರ್ ಬಿಂದುಗಳನ್ನು ಯಥಾವತ್ತಾಗಿ ಅನುಸರಿಸುವುದು. ಸಮತಳ ಮೀಸಲಾತಿಯನ್ನು 2023ರ ಮಾರ್ಚ್ 8ರ ಆದೇಶದಂತೆ ಪಾಲಿಸಬೇಕು. ಈ ಸಂದರ್ಭದಲ್ಲಿ ಸಮತಳ ಮೀಸಲಾತಿಯು ಹಿಂದಿನ ನೇಮಕಾತಿಯಲ್ಲಿ ಯಾವ ಬಿಂದುವಿನಲ್ಲಿ ಅಂತಿಮಗೊಂಡಿರುತ್ತದೆಯೋ ಆ ಬಿಂದುವಿನ ನಂತರದ ಬಿಂದುವಿನಿಂದ ನೇಮಕಾತಿ ಆರಂಭಿಸುವುದು.
- ನೇಮಕಾತಿ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿಗೆ 3ಕ್ಕಿಂತ ಹೆಚ್ಚು ಹುದ್ದೆಗಳು ಲಭ್ಯವಾದಲ್ಲಿ ಒಳಮೀಸಲಾತಿ ಅನ್ವಯಿಸಬೇಕಾಗಿರುವುದರಿಂದ ಮೊದಲಿಗೆ 400 ಬಿಂದುಗಳ ರೋಸ್ಟರ್ ಅನ್ನು ಯಥಾವತ್ತಾಗಿ ನಿರ್ವಹಿಸುವುದು.
- ಪರಿಶಿಷ್ಟ ಜಾತಿಯ ವಿವಿಧ ಪ್ರವರ್ಗಗಳಿಗೆ 5.25, 5.25, 4.50 ಪ್ರಮಾಣದಲ್ಲಿ ತಯಾರಿಸಿರುವ (400 ರೋಸ್ಟರ್ ಬಿಂದುಗಳಲ್ಲಿ ಮೀಸಲಾತಿ ಪ್ರಮಾಣ ಶೇ 15 ರಂತೆ) 60 ಬಿಂದುಗಳ ರೋಸ್ಟರ್‌ರಂತೆ ಒಳಮೀಸಲಾತಿ ಅನುಸರಿಸಿ ಪ್ರತ್ಯೇಕವಾಗಿ ರೋಸ್ಟರ್ ನಿರ್ವಹಿಸುವುದು.
- ಪ್ರವರ್ಗ-ಸಿಗೆ ಲಭ್ಯವಾಗುವ ಹುದ್ದೆಗಳಲ್ಲಿ ಶೇ 20 ರಷ್ಟು ಹುದ್ದೆಗಳನ್ನು 59 ಅತ್ಯಂತ ಹಿಂದುಳಿದ ಜಾತಿಯವರಿಗೆ ಮೀಸಲಿರಿಸಬೇಕು. ಒಳಮೀಸಲಾತಿ ಬಿಂದು ಸಂಖ್ಯೆ 3, 20, 37, 54 ಗಳನ್ನು ಕಡ್ಡಾಯವಾಗಿ, ಈ 59 ಜಾತಿಗಳಿಗೆ ಮೀಸಲಿರಿಸುವುದು. ಒಂದು ವೇಳೆ ಸದರಿ 59 ಜಾತಿಗಳಲ್ಲಿ ಅಭ್ಯರ್ಥಿಗಳಿಗೆ ಲಭ್ಯವಾಗದಿದ್ದಲ್ಲಿ, ಆ ಹುದ್ದೆಗಳನ್ನು ಪ್ರವರ್ಗ-ಸಿ ರಲ್ಲಿನ ಇತರೆ ಜಾತಿಗಳಿಗೆ ನೀಡುವುದು.

ಮೀಸಲಾತಿ: ಬಿಜೆಪಿ ನಾಯಕರ ಆರೋಪ

'ಕಾಂಗ್ರೆಸ್‌ನಿಂದ ಎಸ್‌ಟಿಗಳಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಪಂಗಡಕ್ಕೆ ನೀಡಿದ್ದ ಮೀಸಲಾತಿ ಪ್ರಮಾಣ ಕಡಿಮೆ ಮಾಡಿ ಅನ್ಯಾಯ ಮಾಡಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಸರ್ಕಾರ ಇದ್ದಾಗ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಅದನ್ನು ರದ್ದು ಮಾಡಿ ದ್ರೋಹ ಎಸಗಿದೆ ಎಂದು ದೂರಿದರು.

'ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಎಸ್‌ಸಿ ಮೀಸಲಾತಿ ಶೇ 15ರಿಂದ ಶೇ 17ಕ್ಕೂ, ಎಸ್‌ಟಿ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೂ ಹೆಚ್ಚಿಸಲಾಗಿತ್ತು. ಎಸ್‌ಟಿ ಸಮುದಾಯದ ನ್ಯಾಯಯುತ ಬೇಡಿಕೆಯನ್ನು ಈಡೇರಿಸಿದ್ದೆವು. ಮಾಧುಸ್ವಾಮಿ ವರದಿ, ಸದಾಶಿವ ಆಯೋಗದ ವರದಿ ಗಮನದಲ್ಲಿಟ್ಟುಕೊಂಡು ನಾವು ಮೀಸಲಾತಿ ಹೆಚ್ಚಳ ಮಾಡಿದ್ದೆವು' ಎಂದು ಅಶೋಕ ವಿವರಿಸಿದರು.

'ಮೀಸಲಾತಿ ಪ್ರಮಾಣ ಕಡಿಮೆ ಮಾಡಿದ್ದೇ ಸಿದ್ದರಾಮಯ್ಯ ಸರ್ಕಾರದ ಘನಂದಾರಿ ಕೆಲಸ. ಇದು ದಲಿತ ಪರ ನೀತಿಯೇ? ಎಸ್‌ಟಿ ಸಮುದಾಯದ ಮೀಸಲಾತಿಯನ್ನು ಶೇ 7ರಿಂದ ಶೇ 3ಕ್ಕೆ ಇಳಿಸಲಾಗಿದೆ. ಎಸ್‌ಟಿ ಸಮುದಾಯ ಈಗ ನ್ಯಾಯ ಕೇಳುತ್ತಿದೆ. ಇದಕ್ಕೆ ನಿಮ್ಮ ಉತ್ತರವೇನು? ಇವರು ನ್ಯಾಯ ಪಡೆಯಲು ಇನ್ನೆಷ್ಟು ವರ್ಷ ಹೋರಾಟ ಮಾಡಬೇಕು' ಎಂದು ಪ್ರಶ್ನಿಸಿದರು.

ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 'ಬಿಜೆಪಿ ಸರ್ಕಾರ ಇದ್ದಾಗ ಎಸ್‌ಸಿ,ಎಸ್‌ಟಿ ಸಮುದಾಯಗಳ ಬಹುದಿನಗಳ ಹೋರಾಟಕ್ಕೆ ತೆರೆ ಎಳೆಯಲು ಮೀಸಲಾತಿ ಪ್ರಮಾಣ ಹೆಚ್ಚಿಸಿತ್ತು. ಈ ಏರಿಕೆ ಬಳಿಕ ಸುಮಾರು ಮೂರುವರೆ ವರ್ಷಗಳ ಕಾಲ ಯಾವ ತೊಂದರೆ, ತೊಡಕು ಇಲ್ಲದೆ ಎಲ್ಲ ರೀತಿಯ ಸವಲತ್ತುಗಳು ಈ ಜನಾಂಗಕ್ಕೆ ಲಭಿಸಿವೆ' ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ರಾಜುಗೌಡ ನಾಯಕ್ ಮಾತನಾಡಿ, 'ಛತ್ತೀಸಗಢದಲ್ಲಿ ಎಸ್‌ಟಿಗೆ ಶೇ 32, ಎಸ್‌ಸಿಗೆ ಶೇ 10, ಒಬಿಸಿಗೆ ಶೇ 16 ಸೇರಿ ಒಟ್ಟು ಶೇ 58 ಮೀಸಲಾತಿ ನೀಡಲಾಗಿದೆ. ಅಲ್ಲಿ ಎಸ್‌ಸಿ, ಎಸ್‌ಟಿ ಜನಸಂಖ್ಯೆಯ ಆಧಾರದಲ್ಲಿ ಶೇ 50ಕ್ಕಿಂತ ಹೆಚ್ಚು ಕೊಡಿ ಎಂದು ಕೋರ್ಟ್ ಹೇಳಿದೆ ಕರ್ನಾಟಕದಲ್ಲಿ ಏಕೆ ಕೊಡಲು ಸಾಧ್ಯವಾಗುತ್ತಿಲ್ಲ? ಏಕೆಂದರೆ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಸರಿಯಾಗಿ ವಾದ ಮಂಡಿಸುತ್ತಿಲ್ಲ' ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ವಿರೋಧಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸದಾಸ ಕರಿಯಪ್ಪ ಇದ್ದರು.

ಮುಖ್ಯಾಂಶಗಳು

- 'ಎಸ್‌ಟಿ ಸಮುದಾಯದ ನ್ಯಾಯಯುತ ಬೇಡಿಕೆ ಈಡೇರಿಸಿದ್ದು ಬಿಜೆಪಿ'
- 'ಮೀಸಲಾತಿ ಕಡಿಮೆ ಮಾಡಿದ್ದೇ 'ಕೈ' ಸರ್ಕಾರದ ಘನಂದಾರಿ ಕೆಲಸ'

ಹೂಡಿಕೆ ಚಿನ್ನ ಖರೀದಿ ವ್ಯವಹಾರ ನಿಲ್ಲಲಿ: ಟಿ.ಎ. ಶರವಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ಖರೀದಿಯನ್ನು ಒಂದು ವರ್ಷದವರೆಗೆ ಮುಂದೂಡುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿರುವುದು 'ಆಭರಣ'ಗಳಿಗೆ ಅಲ್ಲ, 'ಬುಲಿಯನ್'ಗಳಿಗೆ. ಹಾಗಾಗಿ ಬುಲಿಯನ್ (ಹೂಡಿಕೆ ಚಿನ್ನ) ಖರೀದಿ ವ್ಯವಹಾರ ಸದ್ಯಕ್ಕೆ ನಿಲ್ಲಿಸಬೇಕು ಎಂದು ಕರ್ನಾಟಕ ಜುವೆಲ್ಲರಿ ಅಸೋಸಿಯೇಷನ್ ಅಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ತಿಳಿಸಿದರು.

ಪ್ರಧಾನಿ ನೀಡಿದ ಕರೆಯ ಸಾಧಕ-ಬಾಧಕ ಕುರಿತು 'ಪ್ರಜಾವಾಣಿ' ನಡೆಸಿದ ಮಾತುಕತೆಯಲ್ಲಿ ಅವರು ಈ ಮಾಹಿತಿ ನೀಡಿದರು.

'ವಿದೇಶಕ್ಕೆ ಹೋಗಬೇಡಿ, ವಾಹನಗಳನ್ನು ಕಡಿಮೆ ಬಳಕೆ ಮಾಡಿ, ಸಂಚಾರಕ್ಕೆ ಸಾರ್ವಜನಿಕ ಸಾರಿಗೆ ವಾಹನಗಳನ್ನು ಬಳಸಿ, ಚಿನ್ನಾಭರಣ ಖರೀದಿ ಮುಂದಕ್ಕೆ ಹಾಕಿ ಎಂಬ ಕರೆಯನ್ನು ಸ್ವಾಗತ ಮಾಡುತ್ತೇನೆ. ಯಾಕೆಂದರೆ ಭಾರತದ ರೂಪಾಯಿ ಸದೃಢ ವಾಗಬೇಕು. ಭಾರತದ ಆರ್ಥಿಕತೆ ಬಲವಾಗ ಬೇಕು' ಎಂದು ಹೇಳಿದರು.

ಬಂಡವಾಳ ಹೂಡಿಕೆ ಚಿನ್ನ (ಬುಲಿಯನ್), ನಿತ್ಯ ಬಳಕೆಯ ಆಭರಣದ ಚಿನ್ನ ನಮ್ಮ ಸಂಸ್ಕೃತಿ ಸಂಸ್ಕಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದು ಅನಿವಾರ್ಯ. ಅದನ್ನು ಖರೀದಿಸಿ. ಬಂಡವಾಳ ಹೂಡಿಕೆ ಚಿನ್ನವನ್ನು ನಿಲ್ಲಿಸಿದರೆ ಶೇ 50ರಷ್ಟು ಚಿನ್ನ ಖರೀದಿ ಕಡಿಮೆಯಾಗುತ್ತದೆ ಎಂದರು.

ಆಭರಣವಾಗಿ ಖರೀದಿ ಮಾಡುವುದಕ್ಕೆ ಸಮಸ್ಯೆ ಇಲ್ಲ. ಆದರೆ, ಹೂಡಿಕೆಯಾಗಿ 'ಬುಲಿಯನ್' ಅಂದರೆ ಕಾಯಿನ್, ಬಿಸ್ಕೆಟ್‌ಗಳನ್ನು ಖರೀದಿಸುತ್ತಾರೆ. ಇಂದು ಒಮ್ಮೆ ಖರೀದಿಯಾಗಿ ಸಂಗ್ರಹವಾದರೆ ಮತ್ತೆ ವ್ಯವಹಾರಕ್ಕೆ ಬರುವುದು ಬಹಳ ಕಡಿಮೆ. ಇದರಿಂದ ಚಿನ್ನಕ್ಕೆ ಮತ್ತಷ್ಟು ಬೇಡಿಕೆ ಉಂಟಾಗುತ್ತದೆ. ಆಗ ಸಹಜವಾಗಿಯೇ ಚಿನ್ನದ ದರ ಹೆಚ್ಚಳವಾಗುತ್ತದೆ ಎಂದು ವಿವರಿಸಿದರು.

'ಚಿನ್ನಾಭರಣ ವ್ಯವಹಾರದಲ್ಲಿ ಇರುವವರಿಗೆ ತೊಂದರೆ ಉಂಟಾಗಿರುವುದು ನಿಜ. ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಚಿನ್ನದ ಆಮದು ಮೇಲಿನ ಸುಂಕ ಶೇ 6 ಇದ್ದಿದ್ದನ್ನು ಶೇ 15ಕ್ಕೆ ಏರಿಕೆ ಮಾಡಿದ್ದರಿಂದ ಒಮ್ಮೆಲೇ ಚಿನ್ನ, ಬೆಳ್ಳಿ ಬೆಲೆ ಜಾಸ್ತಿಯಾಗಿದೆ. ಇದು ಬಡವರಿಗೆ ತೊಂದರೆಯಾಗುತ್ತದೆ. ಬಂಗಾರ ಬಲು ಭಾರವಾಗಿದೆ. ಇದು ಉದ್ಯಮಕ್ಕೆ ಹೊಡೆತ ಎಂಬುದನ್ನು ಒಪ್ಪುತ್ತೇನೆ. ಸುಂಕ ಜಾಸ್ತಿ ಮಾಡಿದರೆ ಕಳ್ಳಸಾಗಣೆ ಹೆಚ್ಚಾಗುತ್ತದೆ. ಗ್ರಾಹಕರಿಗೆ ಚಿನ್ನದ ಬಿಸ್ಕೆಟ್, ಚಿನ್ನದ ನಾಣ್ಯ ಮಾರಬಾರದು ಎಂದು ನಿಯಮ ರೂಪಿಸಬೇಕು' ಎಂದರು.

ಮಾನವ್–ಕಿಬೆನ್ ಮಿಂಚು; ಎಫ್‌ಸಿ ವೈಟ್‌ಫೀಲ್ಡ್‌ಗೆ ಜಯ

ಬೆಂಗಳೂರು: ಮಾನವ್ ಹಾಗೂ ಕಿಬೆನ್ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಎಫ್‌ಸಿ ವೈಟ್‌ಫೀಲ್ಡ್ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ (ಉತ್ತರ ವಲಯ) ಪಂದ್ಯದಲ್ಲಿ ಬುಧವಾರ 6–1ರಿಂದ ಪಿಕೆಆರ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ವೈಟ್‌ಫೀಲ್ಡ್ ತಂಡದ ಮಾನವ್ (8ನೇ, 11ನೇ ಹಾಗೂ 30ನೇ ನಿ.) ಮತ್ತು ಕಿಬೆನ್ (18ನೇ, 48ನೇ ಹಾಗೂ 56ನೇ ನಿ.) ತಲಾ ಮೂರು ಗೋಲು ಗಳಿಸಿ ಮಿಂಚಿದರು.

ಎ ಗುಂಪಿನ ಇತರ ಪಂದ್ಯಗಳಲ್ಲಿ ಬ್ಲ್ಯೂಸ್ಟಾರ್ ಎಫ್‌ಸಿ ತಂಡವು 3–1ರಿಂದ ಲಾ ಎಸ್ಪೆರಾಂಝಾ ವಿರುದ್ಧ ಹಾಗೂ ಫುಟ್‌ಬಾಲ್ ಔರಾ ತಂಡವು 2–1ರಿಂದ ಸಿಲಿಕಾನ್ ಎಫ್‌ಸಿ ವಿರುದ್ಧ ಗೆದ್ದವು.

ಬಿ ಗುಂಪಿನ ಪಂದ್ಯಗಳಲ್ಲಿ ಯೂನಿವರ್ಸಲ್ ಬ್ಲ್ಯೂಸ್ ತಂಡವು 6-0ಯಿಂದ ಅನ್‌ಡಿಸ್ಪ್ಯೂಟೆಡ್ ಎಫ್‌ಸಿ ತಂಡವನ್ನು ಹಾಗೂ ಕೊಡಗು ಎಫ್‌ಸಿ ತಂಡ 7–1ರಿಂದ ವೆಲೊಟಿಕಾ ಎಫ್‌ಸಿ ತಂಡವನ್ನು ಮಣಿಸಿದವು. ಬ್ಲ್ಯೂಸ್ ಫುಟ್‌ಬಾಲ್ ಅಕಾಡೆಮಿ–ಸಮುರೈ ಬೆಂಗಳೂರು ಫುಟ್‌ಬಾಲ್ ಅಸೋಸಿಯೇಶನ್ ನಡುವಣ ಪಂದ್ಯ 1–1 ಡ್ರಾ ಆಯಿತು.

ವಿದ್ಯಾರ್ಥಿವೇತನ ವಿತರಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಅಕಾಡೆಮಿ ಪದವಿ ಕಾಲೇಜು ಬುಧವಾರ ಆಯೋಜಿಸಿದ್ದ 13ನೇ ವಿದ್ಯಾರ್ಥಿವೇತನ ವಿತರಣೆ ಸಮಾರಂಭವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ವಿದ್ಯಾರ್ಥಿವೇತನ ನೀಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಮಾಜ ಸೇವೆಯಲ್ಲಿ ಪಾಲ್ಗೊಳ್ಳುವ ಮೂಲಕ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಇಂಡಿಯನ್ ಅಕಾಡೆಮಿ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಟಿ. ಸೋಮಶೇಖರ್ ಮಾತನಾಡಿ, 'ಮುಂದಿನ ವರ್ಷ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. 2026ರ ಶೈಕ್ಷಣಿಕ ಸಾಲಿನಲ್ಲಿ ಸುಮಾರು 56 ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು' ಎಂದು ಮಾಹಿತಿ ನೀಡಿದರು.

ಪ್ರಾಂಶುಪಾಲರಾದ ಭಾರತಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಸಚಿವ ಕೆ.ಜೆ. ಜಾರ್ಜ್ ಅವರು ವಿದ್ಯಾರ್ಥಿನಿಯೊಬ್ಬರಿಗೆ ವಿದ್ಯಾರ್ಥಿವೇತನ ವಿತರಿಸಿದರು

ರಾಜ್ಯ ಅಮೆಚೂರ್ ಚೆಸ್ ಟೂರ್ನಿ 15ರಿಂದ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ಇದೇ 15 ರಿಂದ 17ರವರೆಗೆ ರಾಜ್ಯ ಅಮೆಚೂರ್ (2000 ರೇಟಿಂಗ್ ಒಳಗಿನವರ) ಚೆಸ್ ಚಾಂಪಿಯನ್‌ಷಿಪ್, ವೈಟ್‌ಫೀಲ್ಡ್–ಹೊಸಕೋಟೆ ಮುಖ್ಯರಸ್ತೆಯ (ಕಾಟಮನಲ್ಲೂರು ಗೇಟ್ ಬಳಿ) ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಈ ಚಾಂಪಿಯನ್‌ಷಿಪ್‌ನಲ್ಲಿ ಅಗ್ರ ಎರಡು ಸ್ಥಾನ ಪಡೆದವರು ರಾಷ್ಟ್ರೀಯ ಅಮೆಚೂರು ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಟೂರ್ನಿಯು ಒಟ್ಟು ₹3 ಲಕ್ಷ ಬಹುಮಾನ ಹಣ ಹೊಂದಿದೆ. ವೆಬ್‌ಸೈಟ್ ಮೂಲಕ (website www.circlechess.com) ಹೆಸರು ನೋಂದಾಯಿಸಬಹುದು. ಮಾಹಿತಿಗೆ ಟೂರ್ನಿಯ ನಿರ್ದೇಶಕ ಚಿದಾನಂದ (ಮೊ: 9663405589) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಈಡೇರದ ಭರವಸೆ: 16ಕ್ಕೆ ಮುಸ್ಲಿಮರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಭರವಸೆಗಳನ್ನು ಇದುವರೆಗೂ ಈಡೇರಿಸಿಲ್ಲ. ಈ ಬಗ್ಗೆ ಹೇಳಿದ್ದೇನು? ಮಾಡಿದ್ದೇನು? ಮುಂದೇನು? ಎಂಬ ವರದಿಯನ್ನು ಮೇ 16ರಂದು ಪುರಭವನದಲ್ಲಿ ನಡೆಯುವ ಕರ್ನಾಟಕ ಮುಸ್ಲಿಂ ಸಮಾವೇಶದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಮುಸ್ಲಿಂ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಒಕ್ಕೂಟದ ಮುಖಂಡರಾದ ತನ್ವೀರ್ ಅಹಮದ್, ಮೌಲಾನಾ ಮಹಮ್ಮದ್, ಜುಲ್ಫೀಕರ್ ರಜಾ ನೂರಿ, ಶಬ್ಬೀರ್ ಅಹಮದ್ ಹುಸೈನಿ ನದ್ವಿ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಹಿಜಾಬ್ ನಿರ್ಬಂಧ, ಮೀಸಲಾತಿ ರದ್ದತಿ, ದ್ವೇಷ ಭಾಷಣ, ದ್ವೇಷ ಅಪರಾಧ, ಅನುದಾನ ಹಂಚಿಕೆಯಲ್ಲಿ ತಾರತಮ್ಯ, ರಾಜಕೀಯ ಪ್ರಾತಿನಿಧ್ಯದಲ್ಲಿ ಅಡ್ಡಗಾಲು, ವಕ್ಫ್ ವಿಷಯ, ಗೋಹತ್ಯೆ ನಿಷೇಧ ಕಾಯ್ದೆ ಹಾಗೂ ಮತಾಂತರ ನಿರ್ಬಂಧ ಕಾಯ್ದೆ ತೆರವು, ವಿದ್ಯಾರ್ಥಿವೇತನ, ಶಿಕ್ಷಣ ಕ್ಷೇತ್ರದ ಬೇಡಿಕೆಗಳನ್ನು ಇದುವರೆಗೂ ಈಡೇರಿಸಿಲ್ಲ. ಈ ಎಲ್ಲ ವಿಷಯಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದರು.

'ಈ ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಮುಸ್ಲಿಂ ಸಂಘಗಳು ಹಾಗೂ ಒಕ್ಕೂಟದ ಮುಖಂಡರು, ಉಲೇಮಾಗಳು, ವಕೀಲರು, ನಿವೃತ್ತ ಅಧಿಕಾರಿಗಳು, ಹೋರಾಟಗಾರರು ಸೇರಿದಂತೆ ನೂರಾರು ಮಂದಿ ಪಾಲ್ಗೊಳ್ಳಲಿದ್ದಾರೆ. ಈ ಬಗ್ಗೆ ರಾಜ್ಯದಾದ್ಯಂತ ಪ್ರಚಾರ ಸಭೆಗಳನ್ನು ನಡೆಸುತ್ತಿದ್ದೇವೆ. ಈ ಸಮಾವೇಶಕ್ಕೆ ಯಾವುದೇ ರಾಜಕಾರಣಿಗಳಿಗೆ ಆಹ್ವಾನ ಇರುವುದಿಲ್ಲ' ಎಂದು ತಿಳಿಸಿದರು.

'ರಾಜ್ಯ ಸರ್ಕಾರ ಮುಸ್ಲಿಂ ಸಮುದಾಯವನ್ನು ಯಾವ ರೀತಿಯಾಗಿ ನಡೆಸಿಕೊಳ್ಳುತ್ತಿದೆ ಎಂಬುದರ ಬಗ್ಗೆ ಚರ್ಚೆಗಳು ನಡೆಯಲಿವೆ. ಸಮಾವೇಶದಲ್ಲಿ ಬಿಡುಗಡೆಯಾಗುವ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ನೀಡಲಾಗುವುದು. ಈ ಸಮಾವೇಶದ ಉದ್ದೇಶ ಸಂಘರ್ಷವಲ್ಲ. ಮುಸ್ಲಿಮರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಂತೆ ಒತ್ತಡ ಹೇರಲಾಗುವುದು' ಎಂದರು.

ಸುಹೇಲ್ ಅಹಮದ್ ಮರೂರ್, ಯಹ್ಯಾ ದಾಮೂದಿ ಮಹಮ್ಮದ್ ಹುಸೇನ್ ಷರೀಫ್ ಸುದ್ದಿಗೋಷ್ಠಿಯಲ್ಲಿದ್ದರು.

ಡಾಕ್ಟರೇಟ್ ಗೌರವ

ಸೇಂಟ್ ಮದರ್ ತೆರೇಸಾ ಯುನಿವರ್ಸಿಟಿ ವತಿಯಿಂದ ಚಿಕ್ಕಜಾಲ ಗ್ರಾಮದ **ಶ್ರೀಮತಿ ಆರತಿ ಎಸ್** ಮತ್ತು **ಶ್ರೀ ಭೂಮಿ ಶೆಟ್ಟಿ ಕಿರಣ್ ಕುಮಾರ್** ದಂಪತಿಗಳಿಗೆ ದಿ: 9-5-2026 ರಂದು ಬೆಂಗಳೂರಿನ ಕ್ಯಾಪಿಟಲ್ ಹೋಟೆಲ್ ನಲ್ಲಿ ಗೌರವಾನ್ವಿತ **ಡಾಕ್ಟರೇಟ್ ಪ್ರಶಸ್ತಿ** ಕೊಟ್ಟು ಗೌರವಿಸಲಾಯಿತು.

ಶುಭಕೋರುವವರು:
ಶ್ರೀ ಶ್ರೀನಿವಾಸ್ ಮೂರ್ತಿ,
ಶ್ರೀ ವೆಂಕಟಾಚಲಪತಿ (ಅವಧೂತ ಗುರುಗಳು)
ಶ್ರೀ ಕಾಳಿಕಾದೇವಿ ಎಂಟರ್‌ಪ್ರೈಸಸ್
ಮತ್ತು ಸಿಬ್ಬಂದಿ ವರ್ಗ.

ಶ್ರೀ ಕಾಳಿಕಾದೇವಿ ಎಂಟರ್‌ಪ್ರೈಸಸ್
No. 19, Rajashyalaya Nilaya, Palekamma Nagar,
Opp. Bapista Church, Chikkajala, Bengaluru-562157
E-mail: srikalikadevie@gmail.com

WORK FROM HOME
40 TYPES OF OPPORTUNITIES
Join now free Demo & Training
Start your own Packing works from Home

Earn Extra Income Monthly Rs.10,000/- to Rs. 30,000/-

ಹಿಜಾಬ್, ಜನಿವಾರ ಧರಿಸಲು ಅವಕಾಶ

ಸಿದ್ದರಾಮಯ್ಯ ನಿರ್ದೇಶನದಂತೆ ಕ್ರಮ ಪ್ರವೇಶಕ್ಕೆ ನಿರಾಕರಿಸುವಂತೆ ಇಲ್ಲ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ-ಕಾಲೇಜುಗಳಲ್ಲಿ ವಸ್ತ್ರಸಂಹಿತೆ ನಿಗದಿಪಡಿಸಿ 2022ರಲ್ಲಿ ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದ್ದು, ಹಿಜಾಬ್ ಹಾಗೂ ಜನಿವಾರ ಸೇರಿದಂತೆ ಆಚರಣೆಗೆ ಸಂಬಂಧಿಸಿದ ಸಂಕೇತಗಳನ್ನು ಧರಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕ ರಿಜ್ವಾನ್ ಅರ್ಷದ್ ಜತೆಗೆ ಬುಧವಾರ ಸುದ್ದಿಗೋಷ್ಠಿ ನಡೆಸಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಈ ವಿಷಯ ತಿಳಿಸಿದರು.

'ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದೆ. ಸಾಂಪ್ರದಾಯಿಕ ಹಾಗೂ ಆಚರಣೆ ಆಧರಿಸಿದ ಸಂಕೇತಗಳಾದ ಪೇಟ/ಟರ್ಬನ್, ಜನಿವಾರ/ಪವಿತ್ರ ದಾರ, ರುದ್ರಾಕ್ಷಿ, ತಲೆವಸ್ತ್ರ/ ಹಿಜಾಬ್ ಧರಿಸಬಹುದು ಎಂದರು.

12ನೇ ಶತಮಾನದ ಕ್ರಾಂತಿಕಾರಿ ಬಸವಣ್ಣನವರು 'ಇವ ನಮ್ಮವ, ಇವ ನಮ್ಮವ' ಎನ್ನುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಚಿಂತನೆಯನ್ನು ನೀಡಿದ್ದರು. ಅದನ್ನು ಅನುಷ್ಠಾನಗೊಳಿಸುವ ಆಶಯವನ್ನು ಹೊಂದಿದೆ. ವಿದ್ಯಾರ್ಥಿಗಳಲ್ಲಿ ಸಮಾನತೆ ಹಾಗೂ ಸೌಹಾರ್ದ ಬಿತ್ತಲು ನೆರವಾಗಲಿದೆ. ಇಂತಹದೊಂದು ಆದೇಶವನ್ನು ಹೊರಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ದೇಶನ ನೀಡಿದ್ದರು ಎಂದು ಹೇಳಿದರು.

> **ಹಿಜಾಬ್ ನಿಷೇಧ ಆದೇಶವನ್ನು ಹಿಂಪಡೆಯುವ ಮೂಲಕ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಇಸ್ಲಾಮೀಕರಣಗೊಳಿಸಲು ರಾಜ್ಯದ ಸರ್ಕಾರ ಮುಂದಾಗಿದೆ**
> **ಯಶ್‌ಪಾಲ್ ಸುವರ್ಣ,** ಉಡುಪಿ ಶಾಸಕ

ಸಾಂಪ್ರದಾಯಿಕ ಹಾಗೂ ಆಚರಣೆ ಆಧರಿಸಿದ ಸಂಕೇತಗಳನ್ನು ಧರಿಸುವಂತೆ ಅಥವಾ ಬಲವಂತವಾಗಿ ತೆಗೆಯುವಂತೆ ವಿದ್ಯಾರ್ಥಿಗಳನ್ನು ಒತ್ತಾಯ ಮಾಡುವಂತಿಲ್ಲ. ಶಿಸ್ತು, ಸುರಕ್ಷತೆ ಮತ್ತು ವಿದ್ಯಾರ್ಥಿಯ ಗುರುತಿಸುವುದಕ್ಕೆ ಅಡ್ಡಿಯಾಗದಂತೆ ನಿಗದಿತ ಸಮವಸ್ತ್ರದೊಂದಿಗೆ ಸಮಾನ ಸ್ವರೂಪದ ಸಾಂಪ್ರದಾಯಿಕ ಹಾಗೂ ಆಚರಣೆ ಆಧರಿಸಿದ ಸಂಕೇತಗಳನ್ನು ಧರಿಸಬಹುದು. ಅಂತಹ ವಿದ್ಯಾರ್ಥಿಗಳಿಗೆ ಯಾವುದೇ ಶಿಕ್ಷಣ ಸಂಸ್ಥೆ ತರಗತಿ ಅಥವಾ ಪರೀಕ್ಷಾ ಕೊಠಡಿ ಪ್ರವೇಶಕ್ಕೆ ಅವಕಾಶ ನಿರಾಕರಿಸುವಂತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಪರೀಕ್ಷೆಯ ಸಂದರ್ಭದಲ್ಲಿ ರಾಷ್ಟ್ರ ಹಾಗೂ ರಾಜ್ಯಮಟ್ಟದ ವಸ್ತ್ರ ಸಂಹಿತೆಯ ನಿಯಮಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಸಂಬಂಧಪಟ್ಟ ಪ್ರಾಧಿಕಾರಗಳು ಅಳವಡಿಸಿಕೊಳ್ಳಬೇಕಾಗುತ್ತದೆ ಎಂದರು.

ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಸಮವಸ್ತ್ರ ಧರಿಸುವುದು ಮುಂದುವರಿಯಲಿದೆ. ಈ ವಿಷಯದಲ್ಲಿ ರಾಜಿ ಇಲ್ಲ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (ಎಸ್‌ಡಿಎಂಸಿ), ಕಾಲೇಜು ಅಭಿವೃದ್ಧಿ ಸಮಿತಿಗಳು (ಸಿಡಿಸಿ), ಆಡಳಿತ ಮಂಡಳಿಗಳು, ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ವಿದ್ಯಾರ್ಥಿಗಳಿಗೆ ತಾರತಮ್ಯ, ಅವಮಾನ ಆಗದಂತೆ ನೋಡಿಕೊಳ್ಳಬೇಕು. ಇದು ಅವರ ಜವಾಬ್ದಾರಿ ಎಂದು ತಿಳಿಸಿದರು.

ಹೊಸ ಆದೇಶ ಜಾರಿ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಅಗತ್ಯಕ್ಕೆ ಅನುಗುಣವಾಗಿ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಿದ್ದಾರೆ. ಈ ಆದೇಶಕ್ಕೆ ವಿರುದ್ಧವಾದ ಯಾವುದೇ ಸುತ್ತೋಲೆ, ನಿರ್ಣಯ, ಸೂಚನೆ ಮಾನ್ಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಬರುವುದಕ್ಕೆ ಉಡುಪಿಯ ಪಿಯು ಕಾಲೇಜಿನಲ್ಲಿ ಅವಕಾಶ ನಿರಾಕರಿಸಲಾಗಿತ್ತು. ಇದು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿತ್ತು. ಆ ಬಳಿಕ 2022ರ ಫೆಬ್ರುವರಿ 5ರಂದು ಬಿಜೆಪಿ ಸರ್ಕಾರ ಹಿಜಾಬ್ ನಿಷೇಧಿಸಿ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ, ನ್ಯಾಯಾಲಯ ಸರ್ಕಾರದ ಆದೇಶವನ್ನು ಎತ್ತಿಹಿಡಿದಿತ್ತು.

ಕೇಂದ್ರೀಯ ವಿದ್ಯಾಲಯಗಳ ಮಾದರಿ ಪಾಲನೆ: ಮಧು


ಮಧು ಬಂಗಾರಪ್ಪ

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕೇಂದ್ರೀಯ ವಿದ್ಯಾಲಯಗಳಲ್ಲಿ ಅಳವಡಿಸಿಕೊಂಡಿರುವ ವಸ್ತ್ರ ಸಂಹಿತೆಗೆ ಅನುಗುಣವಾಗಿ ಈ ಆದೇಶ ಹೊರಡಿಸಲಾಗಿದೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕೇಂದ್ರೀಯ ವಿದ್ಯಾಲಯಗಳಲ್ಲಿ ಇರುವ ವಸ್ತ್ರ ಸಂಹಿತೆಯನ್ನು ಪರಿಶೀಲಿಸಿದ್ದೇವೆ. ಅದಕ್ಕೆ ಅನುಗುಣವಾಗಿಯೇ ಸಾಂಪ್ರದಾಯಿಕವಾದ ಪದ್ಧತಿಗೆ ಅನುಗುಣವಾಗಿ ಕೆಲವು ಸಂಕೇತಗಳನ್ನು ಧರಿಸಲು ಅವಕಾಶ ನೀಡಲಾಗಿದೆ ಎಂದರು.

'ಜನಿವಾರ ಪ್ರಕರಣ ಮರುಕಳಿಸದಂತೆ ಈ ಕ್ರಮ'

ದಿನೇಶ್ ಗುಂಡೂರಾವ್

'ಕಳೆದ ತಿಂಗಳು ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಹಾಜರಾಗಿದ್ದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಇಂತಹ ಘಟನೆಗಳು ಮರುಕಳಿಸಬಾರದು ಎಂಬ ಉದ್ದೇಶದಿಂದ ಸರ್ಕಾರ ಈ ತೀರ್ಮಾನ ತೆಗೆದುಕೊಂಡಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ವಿದ್ಯಾರ್ಥಿಗಳು ಕಲಿಯುವುದಕ್ಕೆ ಶಾಲೆಗೆ ಬರುತ್ತಾರೆ. ಅಲ್ಲಿ ಬೇರೆ ಉದ್ದೇಶಗಳಿಗೆ ಅವಕಾಶ ಇರಬಾರದು' ಎಂದೂ ಅವರು ಪ್ರತಿಪಾದಿಸಿದರು.

'ಜನಿವಾರ ತೆಗೆಸಿದ ಬೆಳವಣಿಗೆ ನಂತರ ಬ್ರಾಹ್ಮಣ ಮಹಾಸಭಾ ಸೇರಿದಂತೆ ವಿವಿಧ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಹೊಸ ಆದೇಶ ಹೊರಡಿಸಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆ, ಘನತೆ, ಭ್ರಾತೃತ್ವ, ಜಾತ್ಯತೀತತೆ, ವೈಚಾರಿಕತೆ ಮತ್ತು ಶಿಕ್ಷಣದ ಹಕ್ಕು ಸಂವಿಧಾನದ ಮೌಲ್ಯಗಳಿಗೆ ಅನುಗುಣವಾಗಿರಬೇಕು. ಯಾವುದೇ ವಿದ್ಯಾರ್ಥಿಗೆ ಶಿಕ್ಷಣ ನಿರಾಕರಿಸಬಾರದು ಹಾಗೂ ಶಿಸ್ತುಪಾಲನೆ ಆಗಬೇಕು ಎಂಬುದಕ್ಕೆ ಒತ್ತು ನೀಡಲಾಗಿದೆ' ಎಂದು ತಿಳಿಸಿದರು.

ಮುಸ್ಲಿಂ ಮುನಿಸಿಗೆ 'ಹಿಜಾಬ್' ಮುಲಾಮು: ಅಶೋಕ

'ದಾವಣಗೆರೆ ಉಪಚುನಾವಣೆ ಸುತ್ತ ನಡೆದ ಘಟನೆಗಳ ನಂತರ ಮುಸ್ಲಿಮರ ಆಕ್ರೋಶಕ್ಕೆ ಬೆದರಿರುವ ಕಾಂಗ್ರೆಸ್ ಸರ್ಕಾರ, ಈಗ ತನ್ನ ಮತಬ್ಯಾಂಕ್ ಉಳಿಸಿಕೊಳ್ಳಲು ಹಿಜಾಬ್ ಅಸ್ತ್ರವನ್ನು ಕೈಗೆತ್ತಿಕೊಂಡಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಬೆಲೆ ಏರಿಕೆ, ಭ್ರಷ್ಟಾಚಾರ, ರೈತರ ಸಂಕಷ್ಟ, ಕಾನೂನು ಸುವ್ಯವಸ್ಥೆಯ ವೈಫಲ್ಯ, ಇವೆಲ್ಲದರ ಬಗ್ಗೆ ಮೌನವಾಗಿರುವ ಕಾಂಗ್ರೆಸ್ ಸರ್ಕಾರ, ಮುನಿಸಿಕೊಂಡಿರುವ ಮುಸ್ಲಿಂ ಮತ ಬ್ಯಾಂಕ್‌ಗೆ ಹಿಜಾಬ್ ಮೂಲಕ ಮುಲಾಮು ಹಚ್ಚಲು ಹೊರಟಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಶಾಲಾ- ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ 2022ರಲ್ಲಿ ಅಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ವಸ್ತ್ರ ಸಂಹಿತೆಯನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಮುಖ್ಯ ಎಂದು ತೀರ್ಪು ನೀಡಿತ್ತು. ಈಗ ಕೋರ್ಟ್ ಆದೇಶವನ್ನೇ ಗಾಳಿಗೆ ತೂರಿ ಒಂದು ಸಮುದಾಯದ ಓಲೈಕೆಗೆ ಮುಂದಾಗಿರುವುದು ಯಾವ ಸೀಮೆಯ ಜಾತ್ಯತೀತತೆ' ಎಂದು ಅಶೋಕ ಪ್ರಶ್ನಿಸಿದ್ದಾರೆ.

'ಹಿಜಾಬ್‌ಗೆ ಹಸಿರು ನಿಶಾನೆ ತೋರಿರುವ ಸರ್ಕಾರ, ಕೇಸರಿ ಶಾಲಿಗೆ ನಿಷೇಧ ಹೇರಿದೆ. ನಿಮ್ಮ ಈ ಓಲೈಕೆ ರಾಜಕಾರಣ ಹಿಂದೂಗಳಿಗೆ ಅರ್ಥವಾಗುವುದಿಲ್ಲ ಎಂದು ಭಾವಿಸಿದ್ದೀರಾ' ಎಂದು ಅವರು ಮುಖ್ಯಮಂತ್ರಿಯನ್ನು ಪ್ರಶ್ನಿಸಿದ್ದಾರೆ.

ಸುದ್ದಿ 2 ನಿಮಿಷ

ಶೇ 50ರಷ್ಟು ಪೆಟ್ರೋಲ್ ಬಳಕೆ ಕಡಿಮೆ ಮಾಡುವೆ: ಅಶೋಕ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ನಾನು ಬಳಸುವ ಕಾರುಗಳ ಪೆಟ್ರೋಲ್ ಮತ್ತು ಡೀಸೆಲ್ ಪ್ರಮಾಣವನ್ನು ಶೇ 30ರಿಂದ ಶೇ 50 ರಷ್ಟು ಕಡಿಮೆ ಮಾಡುತ್ತೇನೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಬೆಂಗಾವಲು ವಾಹನ ಬಳಸುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪೆಟ್ರೋಲಿಯಂ ಉತ್ಪನ್ನಗಳ ಮಿತ ಬಳಕೆ, ಒಂದು ವರ್ಷ ಚಿನ್ನ ಖರೀದಿ ಮಾಡದೇ ಇರುವುದು ಸೇರಿ ವಿವಿಧ ವಿಷಯಗಳ ಕುರಿತು ಮನವಿ ಮಾಡಿದ್ದಾರೆ. ಅದಕ್ಕೆ ನಾವು ಸ್ಪಂದಿಸುತ್ತೇವೆ' ಎಂದರು.

'ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣ ಪ್ರಪಂಚವೇ ಸಂಕಷ್ಟದಲ್ಲಿದೆ. ಪ್ರಧಾನಿಯವರ ಕೋರಿಕೆಗೆ ಸಾರ್ವಜನಿಕರೂ ಸ್ಪಂದಿಸುತ್ತಿದ್ದಾರೆ. ಮನೆಯಲ್ಲಿ ಬಳಸುವ ಅಡುಗೆ ಎಣ್ಣೆಯ ಪ್ರಮಾಣವನ್ನು ಕಡಿಮೆ ಮಾಡಲು ನನ್ನ ಮನೆಯಲ್ಲಿ ಹೇಳಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ರಾಜೇಗೌಡ ಫಲಕ ತೆರವು: ಎಫ್‌ಐಆರ್

ನರಸಿಂಹರಾಜಪುರ (ಚಿಕ್ಕಮಗಳೂರು): ತಾಲ್ಲೂಕು ಪಂಚಾಯಿತಿ ಆವರಣದಲ್ಲಿನ ಶಾಸಕರ ಕಚೇರಿಯ ಬಳಿ ಅಳವಡಿಸಿದ್ದ ಟಿ.ಡಿ.ರಾಜೇಗೌಡ ಹೆಸರಿದ್ದ ಫಲಕ ತೆರವುಗೊಳಿಸಿದ್ದ ಆರೋಪದಲ್ಲಿ ವೆಲ್ಡಿಂಗ್ ಶಾಪ್ ಕಾರ್ಮಿಕ ಹಾಗೂ ಬಿಜೆಪಿಯ ಎಂಟು ಜನ ಕಾರ್ಯಕರ್ತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ವಿನಾಯಕ ವೆಲ್ಡಿಂಗ್ ಶಾಪ್‌ನ ವರುಣ್, ಬಿಜೆಪಿ ಕಾರ್ಯಕರ್ತರಾದ ಪ್ರದೀಪ್, ಅಶ್ವಿನ್, ಸುಮಂತ್, ರಾಜೇಂದ್ರ, ಫರ್ವೇಜ್, ಮನೋಜ್, ಮದನ್, ದರ್ಶನ್ ಹಾಗೂ ಇತರರ ಮೇಲೆ ಪ್ರಕರಣ ದಾಖಲಿಸಲಾಗಿದೆ.

'ಶಾಸಕರ ಹೆಸರಿನ ನಾಮಫಲಕ ಬದಲಾಯಿಸಲು ಪಟ್ಟು ಹಿಡಿದಿದ್ದ ಗುಂಪು ಸಮಯಾವಕಾಶ ಬೇಕು ಎಂದು ತಿಳಿಸಿದರೂ ಒಪ್ಪಲಿಲ್ಲ. ಫಲಕವನ್ನು ಸುರಕ್ಷಿತವಾಗಿ ತೆಗೆದಿಡಲು ವಿನಾಯಕ ವೆಲ್ಡಿಂಗ್ ಶಾಪ್‌ನ ವರುಣ್ ಎಂಬುವರನ್ನು ಕರೆತರಲಾಗಿತ್ತು. ಫಲಕ ಕೆಳಗೆ ಬೀಳಿಸುತ್ತಿದ್ದಂತೆ ಕೆಲವರು ನಮ್ಮ ಗಮನಕ್ಕೆ ಬಾರದೆ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ' ಎಂದು ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಎನ್.ಎಲ್.ಮನಿಷ್ ದೂರು ನೀಡಿದ್ದರು.

ಬೆಳಗಾವಿ: ರಾಜ್ಯದ ಪರ ನಿರ್ಣಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯವನ್ನು ಪಾಲಿಕೆ ಪರಿಷತ್ ಸಭೆಯಲ್ಲಿ ಅಂಗೀಕರಿಸಬೇಕು' ಎಂದು ಆಗ್ರಹಿಸಿ ಕನ್ನಡಪರ ಸಂಘಟನೆಯ ಹೋರಾಟಗಾರರು ಇಲ್ಲಿನ ಪಾಲಿಕೆ ಎದುರು ಬುಧವಾರ ಪ್ರತಿಭಟನೆ ನಡೆಸಿದರು. ಪಾಲಿಕೆಗೆ ಮುತ್ತಿಗೆ ಹಾಕಲು ಯತ್ನಿಸಿದ ಅವರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

ಪಾಲಿಕೆ ಸಭಾಂಗಣದಲ್ಲಿ ಪರಿಷತ್ತು ಸಭೆಯ ಆರಂಭದಲ್ಲೇ ನಾಮನಿರ್ದೇಶಿತ ಸದಸ್ಯ ರಮೇಶ ಸೊಂಟಕ್ಕಿ ಅವರು, 'ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿ, ಸುಪ್ರೀಂಕೋರ್ಟ್ ಏನೇ ತೀರ್ಪು ಕೊಟ್ಟರೂ ನಾವು ಪಾಲಿಸುತ್ತೇವೆ. ಆದರೆ, ಈಗ ರಾಜ್ಯದ ನಿರ್ಣಯ ಅಂಗೀಕರಿಸಬೇಕು' ಎಂದು ಒತ್ತಾಯಿಸಿದರು.

ಇದಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಬೆಂಬಲಿತ ಸದಸ್ಯರಾದ ರವಿ ಸಾಳುಂಕೆ ಹಾಗೂ ಶಿವಾಜಿ ಮಂಡೋಳಕರ ವಿರೋಧ ವ್ಯಕ್ತಪಡಿಸಿದಾಗ, ವಾಕ್ಸಮರ ನಡೆಯಿತು. ಪರಿಸ್ಥಿತಿ ತಾರಕಕ್ಕೇರಿತು.

ಮಠದ ವಸತಿ ನಿಲಯದಲ್ಲಿದ್ದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ

ವಚನಾನಂದ ಶ್ರೀ ವಿರುದ್ಧ ಪೋಕ್ಸೊ ಪ್ರಕರಣ

ಪ್ರಜಾವಾಣಿ ವಾರ್ತೆ

ವಚನಾನಂದ ಸ್ವಾಮೀಜಿ

ದಾವಣಗೆರೆ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಸತಿ ನಿಲಯದಲ್ಲಿದ್ದು ಶಿಕ್ಷಣ ಪಡೆಯುತ್ತಿದ್ದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪದಚ್ಯುತ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ವಿರುದ್ಧ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯಡಿ (ಪೋಕ್ಸೊ) ಪ್ರಕರಣ ದಾಖಲಾಗಿದೆ.

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಠಾಣೆಯಲ್ಲಿ ದಾಖಲಾಗಿದ್ದ 'ಝೀರೊ' ಎಫ್‌ಐಆರ್, ಕೃತ್ಯ ನಡೆದ ಸ್ಥಳದ ವ್ಯಾಪ್ತಿಯ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ವರ್ಗಾವಣೆಯಾಗಿದೆ. ತನಿಖೆ ಆರಂಭಿಸಿದ ಪೊಲೀಸರು, ದೂರು ದಾಖಲಿಸಿರುವ 16 ವರ್ಷದ ಸಂತ್ರಸ್ತ ಬಾಲಕನ ತಾಯಿಯ ಹೇಳಿಕೆ ಪಡೆದಿದ್ದಾರೆ.

'ವಚನಾನಂದ ಸ್ವಾಮೀಜಿ ಬಾಲಕನಿಂದ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು ಎಂದು ಆರೋಪಿಸಿ ಸಂತ್ರಸ್ತ ಬಾಲಕನ ತಾಯಿ ಲಕ್ಷ್ಮೇಶ್ವರ ಠಾಣೆಗೆ ದೂರು ನೀಡಿದ್ದರು. ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿಕೊಂಡ ಲಕ್ಷ್ಮೇಶ್ವರ ಠಾಣೆಯ ಪೊಲೀಸರು, ಪ್ರಕರಣವನ್ನು ಹರಿಹರದ ಗ್ರಾಮಾಂತರ ಠಾಣೆಗೆ ವರ್ಗಾಯಿಸಿದ್ದಾರೆ. ಈ ಸಂಬಂಧ ತನಿಖೆ ಆರಂಭವಾಗಿದ್ದು, ಸಂತ್ರಸ್ತ ಬಾಲಕನ ಹೇಳಿಕೆ ಪಡೆಯಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎಚ್.ಟಿ. ಶೇಖರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸಿದ್ಧವಾಗುತ್ತಿದೆ ಸಮಿತಿ ವರದಿ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಿಂದ ವಚನಾನಂದ ಸ್ವಾಮೀಜಿ ಅವರನ್ನು ಗುರುಪೀಠದ ಟ್ರಸ್ಟ್ ಏಪ್ರಿಲ್ 13ರಂದು ಪದಚ್ಯುತಗೊಳಿಸಿತ್ತು. ಬೆಂಗಳೂರಿನ ಶ್ವಾಸಯೋಗ ಪೀಠ ತ್ಯಜಿಸುವಂತೆ ಟ್ರಸ್ಟ್ ನೀಡಿದ ಗಡುವು ಮೀರಿದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿತ್ತು. ಇದು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ 'ಮಠದ ವಸತಿ ನಿಲಯದಲ್ಲಿದ್ದ ಬಾಲಕರಿಂದ ಸ್ವಾಮೀಜಿ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು' ಎಂದು ಟ್ರಸ್ಟಿಗಳು ಆರೋಪಿಸಿದ್ದರು.

'ಸ್ವಾಮೀಜಿ ಹೊಡೆಯುತ್ತಾರೆ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ ಹಾಗೂ ಅನಾರೋಗ್ಯದ ಸಂದರ್ಭದಲ್ಲಿ ಔಷಧ ನೀಡುವುದಿಲ್ಲ' ಎಂದು ವಸತಿ ನಿಲಯದ ಮೂವರು ಬಾಲಕರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ದೂರು ನೀಡಿದ್ದರು. ಸಮಿತಿಯ ಅಧ್ಯಕ್ಷೆ ಮಂಜುಳಾ ಮಹೇಶ್ ನೇತೃತ್ವದ ನಿಯೋಗ ಏಪ್ರಿಲ್ 17ರಂದು ಮಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತಲ್ಲದೆ, ಸ್ವಾಮೀಜಿ ಸೇರಿದಂತೆ ಹಲವರ ಹೇಳಿಕೆ ದಾಖಲಿಸಿಕೊಂಡಿತ್ತು.

'ಸಂತ್ರಸ್ತ ಬಾಲಕರೊಂದಿಗೆ ಮೂರು ಹಂತಗಳಲ್ಲಿ ಸಮಾಲೋಚನೆ ನಡೆಸಲಾಗಿದೆ. ಈ ಸಂಬಂಧ ವರದಿ ಸಿದ್ಧವಾಗುತ್ತಿದ್ದು, ಶೀಘ್ರದಲ್ಲೇ ಹರಿಹರ ಗ್ರಾಮಾಂತರ ಠಾಣೆಗೆ ಸಲ್ಲಿಸಲಾಗುವುದು' ಎಂದು ಮೂಲಗಳು ಮಾಹಿತಿ ನೀಡಿವೆ.

'ಒಂದು ವೇಳೆ ಬಾಲಕರ ಆರೋಪದಲ್ಲಿ ಸತ್ಯಾಂಶ ಇರುವುದು ಸಮಾಲೋಚನೆಯಲ್ಲಿ ಖಚಿತವಾದರೆ, ಮಕ್ಕಳ ಕಲ್ಯಾಣ ಸಮಿತಿ ನೀಡುವ ವರದಿ ಆಧರಿಸಿ ಮತ್ತೊಂದು ಎಫ್‌ಐಆರ್ ದಾಖಲಾಗುವ ಸಾಧ್ಯತೆ ಕೂಡ ಇದೆ' ಎಂದು ಮೂಲಗಳು ವಿವರಿಸಿವೆ.

ನಿರೀಕ್ಷಣಾ ಜಾಮೀನು ಪಡೆದಿರುವ ಸ್ವಾಮೀಜಿ

ಮಕ್ಕಳ ಮೇಲೆ ದೌರ್ಜನ್ಯ ಎಸಗಿದ ಆರೋಪ ಎದುರಾಗುತ್ತಿದ್ದಂತೆಯೇ ನ್ಯಾಯಾಲಯದ ಮೊರೆ ಹೋಗಿದ್ದ ವಚನಾನಂದ ಸ್ವಾಮೀಜಿ ಅವರು ಮೇ 2ರಂದು ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಇದರಿಂದ ತಕ್ಷಣಕ್ಕೆ ಅವರ ಬಂಧನ ಸಾಧ್ಯತೆ ವಿರಳ ಎನ್ನಲಾಗುತ್ತಿದೆ.

ವಚನಾನಂದ ಸ್ವಾಮೀಜಿ ಅವರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ- 482ರ ಅಡಿ ನಿರೀಕ್ಷಣಾ ಜಾಮೀನು ಕೋರಿ ಏ.21ರಂದು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ (ಪೋಕ್ಸೊ ವಿಶೇಷ ನ್ಯಾಯಾಲಯ) ಸ್ವಾಮೀಜಿಗೆ ಮೇ 2ರಂದು ಜಾಮೀನು ಮಂಜೂರು ಮಾಡಿತ್ತು.

ದೂರಿನಲ್ಲಿ ಏನಿದೆ? ಸಂತ್ರಸ್ತ ಬಾಲಕನಿಗೆ ಈಗ 16 ವರ್ಷ. ಹರಿಹರ ಬಳಿಯ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕ, 2021ರಿಂದ 2024ರವರೆಗೆ ಮಠದ ವಸತಿ ನಿಲಯದಲ್ಲಿ ಆಶ್ರಯ ಪಡೆದಿದ್ದ. ಈ ಅವಧಿಯಲ್ಲಿ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬುದು ದೂರಿನಲ್ಲಿದೆ.

'ವಸತಿ ನಿಲಯದ ಬಾಲಕರು ಸ್ನಾನ ಮಾಡುತ್ತಿದ್ದ ಸಂದರ್ಭದಲ್ಲಿ ಸ್ನಾನದ ಕೊಠಡಿಗೆ ತೆರಳುತ್ತಿದ್ದ ಸ್ವಾಮೀಜಿ, ಬಟ್ಟೆ ಬಿಚ್ಚಿಸಿ ತಾವು ಕೂಡ ಬೆತ್ತಲಾಗುತ್ತಿದ್ದರು. ದೇಹದ ಖಾಸಗಿ ಭಾಗ ಸೇರಿದಂತೆ ಎಲ್ಲೆಡೆ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು. ಬಾಲಕರ ಖಾಸಗಿ ಭಾಗಗಳನ್ನು ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಸಂತ್ರಸ್ತ ಬಾಲಕನ ತಾಯಿ ಠಾಣೆಗೆ ನೀಡಿದ ದೂರಿನಲ್ಲಿ ಮಾಹಿತಿ ನೀಡಿದ್ದಾರೆ.

ನಟ, ನಿರ್ಮಾಪಕ ದಿಲೀಪ್ ನಿಧನ

ಪ್ರಜಾವಾಣಿ ವಾರ್ತೆ

ದಿಲೀಪ್ ರಾಜ್

ಬೆಂಗಳೂರು: ನಟ, ನಿರ್ಮಾಪಕ ದಿಲೀಪ್ ರಾಜ್ (47) ಬುಧವಾರ ಹೃದಯಾಘಾತದಿಂದ ನಿಧನರಾದರು.

ಬೆಳಗಿನ ಜಾವದಲ್ಲಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ನಂತರ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅವರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಬುಧವಾರ ಆರೋಗ್ಯ ತಪಾಸಣೆಗೆ ನಿರ್ಧರಿಸಿ ಅವರು ಸಮಯ ಪಡೆದುಕೊಂಡಿದ್ದರು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ರಾಮನಗರ ತಾಲ್ಲೂಕಿನ ಗುನ್ನೂರು ಎಂಬಲ್ಲಿ ದಿಲೀಪ್ ಅವರ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಹಾಸನ ಜಿಲ್ಲೆಯ ಅರಸೀಕೆರೆಯ ದಿಲೀಪ್ ರಾಜ್ 1997–98ರಲ್ಲಿ ಬಣ್ಣದ ಪಯಣ ಆರಂಭಿಸಿದರು. ರಂಗಭೂಮಿಯಲ್ಲಿಯೂ ಕೆಲಸ ಮಾಡಿದರು. ಬಳಿಕ 'ಜನನಿ' ಧಾರಾವಾಹಿಯ ಮೂಲಕ ಕಿರುತೆರೆಗೆ ಹೆಜ್ಜೆ ಇಟ್ಟರು. ಇವರು ನಂತರ 'ಬಾಯ್ ಫ್ರೆಂಡ್', 'ಮಿಲನ', 'ಲವ್ ಗುರು', 'ಗಾನ ಬಜಾನ', 'ಪೊಲೀಸ್ ಕ್ವಾರ್ಟಸ್', 'ಯು ಟರ್ನ್', 'ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು', 'ಟೋನಿ', 'ಛೂಮಂತರ್', 'ಆರ್ಕೆಸ್ಟ್ರಾ ಮೈಸೂರು', 'ಲವ್ ಮಾಕ್ಟೇಲ್-3' ಸೇರಿದಂತೆ ಸುಮಾರು 25 ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಅಂಬಿ ನಿಂಗ್ ವಯಸ್ಸಾಯ್ತೋ'ದಲ್ಲಿನ ಅವರ ಅಭಿನಯ ಗಮನಸೆಳೆದಿತ್ತು.

'ಜಸ್ಟ್ ಮಾತ್ ಮಾತಲ್ಲಿ' ಧಾರಾವಾಹಿ ಹಾಗೂ 'ಮಜಾ ಭಾರತ' ರಿಯಾಲಿಟಿ ಶೋ ಮೂಲಕ ನಿರ್ಮಾಪಕರಾಗಿ, ಧಾರಾವಾಹಿಗಳಿಗೆ ಕ್ರಿಯೇಟಿವ್ ಡೈರೆಕ್ಟರ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ. ಕಿರುತೆರೆಯಲ್ಲಿ 'ಹಿಟ್ಲರ್ ಕಲ್ಯಾಣ'ದ ಎ.ಜೆ. ಪಾತ್ರ ಬಹು ಜನಪ್ರಿಯವಾಗಿತ್ತು. ಹನ್ನೆರಡಕ್ಕೂ ಅಧಿಕ ಧಾರಾವಾಹಿಗಳಲ್ಲಿ ಅವರು ಬಣ್ಣಹಚ್ಚಿದ್ದಾರೆ.

ನಟರಾದ ಗಣೇಶ್, ಎಸ್. ನಾರಾಯಣ್, ರವಿಶಂಕರ್, ನವೀನ್ ಕೃಷ್ಣ, ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್, ಅನುಶ್ರೀ ಸೇರಿದಂತೆ ಚಿತ್ರರಂಗದ, ಕಿರುತೆರೆಯ ಕಲಾವಿದರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಜೋಶಿ ಮನೆಗೆ ಮುತ್ತಿಗೆ ಯತ್ನ

ಪ್ರಜಾವಾಣಿ ಚಿತ್ರ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಹುಬ್ಬಳ್ಳಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮನೆಗೆ ಬುಧವಾರ ಮುತ್ತಿಗೆ ಹಾಕಲು ಯತ್ನಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ತಡೆದರು

20ರಿಂದ ಸಾರಿಗೆ ನಿಗಮಗಳ ನೌಕರರ ಮುಷ್ಕರ

ಶೇ 12.5ರಷ್ಟು ವೇತನ ಹೆಚ್ಚಳ ಒಪ್ಪದ ಸಿಬ್ಬಂದಿ • ಶೇ 25ರಷ್ಟು ವೇತನ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಸಾರಿಗೆ ನಿಗಮಗಳ ನೌಕರರ ಮೂಲ ವೇತನವನ್ನು ಶೇ25ರಷ್ಟು ಹೆಚ್ಚಳ ಮಾಡಬೇಕು ಎಂಬ ಬೇಡಿಕೆ ಸಲ್ಲಿಸಿದ್ದರೂ ಸರ್ಕಾರ ಏಕಪಕ್ಷೀಯವಾಗಿ ಶೇ 12.5ರಷ್ಟು ಹೆಚ್ಚಳದ ನಿರ್ಧಾರ ಮಾಡಿದೆ ಎಂದು ಆರೋಪಿಸಿರುವ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದೆ.

ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷೆ ಜ್ಯೋತಿ ಅನಂತಸುಬ್ಬರಾವ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಗಿದೆ.

ಸಭೆಯ ವಿವರವನ್ನು ಜಂಟಿ ಕ್ರಿಯಾ ಸಮಿತಿಯ ಜ್ಯೋತಿ ಅನಂತಸುಬ್ಬರಾವ್, ವಿಜಯ ಭಾಸ್ಕರ ಡಿ.ಎ., ಬಿ. ಜಯದೇವರಾಜೇ ಅರಸು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರಿ ನೌಕರರಿಗೆ ನಾಲ್ಕು ವರ್ಷಗಳ ಹಿಂದೆಯೇ 7ನೇ ವೇತನ ಆಯೋಗದ ಶಿಫಾರಸಿನಂತೆ ಶೇ 27.5ರಷ್ಟು ವೇತನ ಹೆಚ್ಚಿಸಿರುವ ರಾಜ್ಯ ಸರ್ಕಾರವು ಸಾರಿಗೆ ನೌಕರರ ವಿಷಯದಲ್ಲಿ ತಾರತಮ್ಯದ ನಿಲುವು ತಳೆದಿದೆ. ಕಳೆದ ಫೆಬ್ರುವರಿ 18ರಂದು ಸರ್ಕಾರ ಹೊರಡಿಸಿರುವ ಆದೇಶವನ್ನು ತಿದ್ದುಪಡಿ ಮಾಡಿ 2025ರ ಜನವರಿ 1ರ ಬದಲು 2024ರ ಜ.1ರಿಂದ ಅನ್ವಯವಾಗುವಂತೆ ವೇತನ ಹೆಚ್ಚಳ ಮಾಡಬೇಕು ಎಂಬ ಬೇಡಿಕೆಗೂ ಸರ್ಕಾರ ಸ್ಪಂದಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಚಾಲ್ತಿಯಲ್ಲಿರುವ ಕೈಗಾರಿಕಾ ಒಪ್ಪಂದಗಳ ಪ್ರಕಾರ 2022ರಲ್ಲಿದ್ದ ಶೇ 31ರಷ್ಟು ತುಟ್ಟಿಭತ್ಯೆಯನ್ನು ಮೂಲ ವೇತನದಲ್ಲಿ ವಿಲೀನಗೊಳಿಸಬೇಕು, ವಾರ್ಷಿಕ ಬಡ್ತಿಯನ್ನು 2024ರ ಜ.25ರ ಬೇಡಿಕೆಯ ಪಟ್ಟಿಯಲ್ಲಿ ಇರುವಂತೆ ಹೆಚ್ಚಿಸಿ, ವೇತನ ಶ್ರೇಣಿ ರಚಿಸಬೇಕು. 2024ರಿಂದ ನಾಲ್ಕು ವರ್ಷಗಳಿಗೆ ಅನ್ವಯವಾಗುವಂತೆ ಶೇ 25ರಷ್ಟು ವೇತನ ಹೆಚ್ಚಳ ಮಾಡಬೇಕು. ಬಾಟಾ ಮತ್ತಿತರ ಭತ್ಯೆಗಳನ್ನು ಹೆಚ್ಚಿಸಬೇಕು. 12 ತಿಂಗಳ ಬಾಕಿ ಹಣವನ್ನು ಕರ್ತವ್ಯದಲ್ಲಿರುವವರಿಗೂ ನಿವೃತ್ತರಿಗೂ ಪಾವತಿಸಬೇಕು. 26 ತಿಂಗಳ ಬಾಕಿ ಹಣ ₹1,272 ಕೋಟಿಯನ್ನು ಒಂದೇ ಕಂತಿನಲ್ಲಿ ಪಾವತಿಸಬೇಕು ಎಂದು ಒತ್ತಾಯಿಸಿದರು.

> **ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ ಕುರಿತು ಸರ್ಕಾರದ ತೀರ್ಮಾನದ ಮಾಹಿತಿ ನೀಡಲಾಗಿದೆ. ಅದಕ್ಕೂ ಒಪ್ಪದೇ ನೌಕರರು ಮುಷ್ಕರ ಆರಂಭಿಸಿದರೆ ಆ ಮೇಲೆ ನಮ್ಮ ನಿರ್ಧಾರ ಹೇಳುತ್ತೇವೆ**
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

ಮೇ 20ರಿಂದ ಮುಷ್ಕರ ನಡೆಸಲು ಕರೆ ನೀಡಲಾಗಿದ್ದು, ಈ ಬಗ್ಗೆ ಚರ್ಚಿಸಲು ಪೂರ್ವಭಾವಿ ಸಭೆಯನ್ನು ಮೇ 15ಕ್ಕೆ ಮಧ್ಯಾಹ್ನ 3ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸಾರಿಗೆಯ ವಿವಿಧ ಸಂಘಟನೆಗಳ ಮುಖ್ಯಸ್ಥರಾದ ಎನ್.ಆರ್. ದೇವರಾಜೇ ಅರಸು, ಎಚ್.ಡಿ. ರೇವಪ್ಪ, ಎಚ್.ಎಸ್. ಮಂಜುನಾಥ್, ವೆಂಕಟರವಣಪ್ಪ, ಮೋಹನ್‌ರಾಜ್, ಜಗದೀಶ್ ಎಚ್.ಆರ್., ಗಂಡಸಿ ಸದಾನಂದ ಸ್ವಾಮಿ ಉಪಸ್ಥಿತರಿದ್ದರು.

ಜೋಯಾಲುಕ್ಕಾಸ್ ಪ್ರೈಡ್ ಪಾಲುದಾರಿಕೆ ಗುರುತಿಸುವಿಕೆ ಮತ್ತು ವಿನ್ಯಾಸ ಶ್ರೇಷ್ಠತೆಯಲ್ಲಿ ನಾವೀನ್ಯತೆ 2026

ಜೋಯಾಲುಕ್ಕಾಸ್ ಪ್ರೈಡ್ ಪಾಲುದಾರಿಕೆ ಗುರುತಿಸುವಿಕೆ ಮತ್ತು ವಿನ್ಯಾಸ ಶ್ರೇಷ್ಠತೆಯಲ್ಲಿ ನಾವೀನ್ಯತೆ 2026 ಸಮಾರಂಭವನ್ನು ಡಾ.ಜೋಯ್ ಆಲುಕ್ಕಾಸ್ ಮತ್ತು ಶ್ರೀಮತಿ ಜೊಲ್ಲಿ ಜೋಯ್ ಆಲುಕ್ಕಾಸ್ ಅವರು ಆಡಲಕ್ಸ್ ಕನ್ವೆನ್ಷನ್ ಮತ್ತು ಎಕ್ಸಿಬಿಷನ್ ಸೆಂಟರ್‌ನಲ್ಲಿ ಉದ್ಘಾಟಿಸಿದರು. ನ್ಯಾಷನಲ್ ಜೆಮ್ಸ್ ಮತ್ತು ಜ್ಯುವೆಲ್ಲರಿ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷ ಪ್ರಮೋದ್ ಅಗರ್‌ವಾಲ್, ದಿ ಆರ್ಟ್ ಜ್ಯುವೆಲ್ಲರಿ ಮ್ಯಾಗಜೈನ್‌ನ ಎಂಡಿ ಮತ್ತು ಪ್ರಧಾನ ಸಂಪಾದಕ ಸುಮೇಶ್ ವಡೇರಾ, ಪಿಜಿಐ ಇಂಡಿಯಾದ ಎಂಡಿ ವೈಶಾಲಿ ಬ್ಯಾನರ್ಜಿ, ನಟಿ ಅಪರ್ಣಾ ಬಾಲಮುರಳಿ, ಜೋಯಾಲುಕ್ಕಾಸ್ ಸಿಇಓ ಜಾನ್ ಪೌಲ್, ಜೋಯಾಲುಕ್ಕಾಸ್ ಕಾರ್ಯಕಾರಿ ನಿರ್ದೇಶಕರಾದ ಥಾಮಸ್ ಮ್ಯಾಥ್ಯ ಮತ್ತು ಆಂಟೊನಿ ಜೋಸ್, ಜೋಯಾಲುಕ್ಕಾಸ್‌ನ ನಿರ್ದೇಶಕರಾದ ಸೋನಿಯಾ ಆಲುಕ್ಕಾಸ್ ಮತ್ತು ಎಲ್ಲಾ ಜೋಯ್ ಆಲುಕ್ಕಾಸ್, ಮತ್ತು ಇನ್ನಿತರ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನೀಟ್-ಯುಜಿ 2026ರ ಪ್ರಶ್ನೆಪತ್ರಿಕೆ: ಎನ್‌ಟಿಎ ಕೇಂದ್ರ ಕಚೇರಿಯಲ್ಲಿ ಸಿಬಿಐ ಶೋಧ

ಸೋರಿಕೆ ಹಿಂದೆ ಎಂಬಿಬಿಎಸ್ ವಿದ್ಯಾರ್ಥಿ

ಜೈಪುರ (ಪಿಟಿಐ): ಕೇರಳದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ರಾಜಸ್ಥಾನ ರಾಜ್ಯದ ವಿದ್ಯಾರ್ಥಿ ಮೂಲಕ ನೀಟ್-ಯುಜಿ 2026ರ ಪ್ರಶ್ನೆಗಳಿಗೆ ಹೋಲಿಕೆ ಇದ್ದಂತಹ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವುದು ರಾಜಸ್ಥಾನ ಪೊಲೀಸರ ವಿಶೇಷ ಕಾರ್ಯಾಚರಣೆ ತಂಡದ (ಎಸ್‌ಒಜಿ) ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಈ ವಿದ್ಯಾರ್ಥಿಯು, ರಾಜಸ್ಥಾನದ ಸಿಕರ್‌ನಲ್ಲಿರುವ ತನ್ನ ಸ್ನೇಹಿತರಿಗೆ ಮತ್ತು ಅಲ್ಲಿನ ಹಾಸ್ಟೆಲ್ ಮಾಲೀಕನಿಗೂ ಈ ಪ್ರಶ್ನೆ ಪತ್ರಿಕೆ ಕಳುಹಿಸಿದ್ದ. ಪಿಡಿಎಫ್ ಸ್ವರೂಪದಲ್ಲಿದ್ದ ಈ ಪ್ರಶ್ನೆಪತ್ರಿಕೆಯು ನಂತರ ವಾಟ್ಸ್‌ಆ್ಯಪ್, ಟೆಲಿಗ್ರಾಂ ಮೂಲಕ ದೊಡ್ಡ ಪ್ರಮಾಣದಲ್ಲಿ ಹಂಚಿಕೆ ಆಗಿರುವುದು ತನಿಖೆಯಲ್ಲಿ ಕಂಡುಬಂದಿದೆ.

'ಕೇರಳದಲ್ಲಿದ್ದ ರಾಜಸ್ಥಾನದ ಎಂಬಿಬಿಎಸ್ ವಿದ್ಯಾರ್ಥಿ ಕೈಗೆ ಮೊದಲು ಪ್ರಶ್ನೆಪತ್ರಿಕೆ ಲಭಿಸಿದೆ. ಆತ ಅದನ್ನು ರಾಜಸ್ಥಾನದ ಸ್ನೇಹಿತರಿಗೆ ಕಳುಹಿಸಿದ್ದಾನೆ. ಅಲ್ಲಿಂದ ದೇಶದ ವಿವಿಧೆಡೆ ಹಂಚಿಕೆ ಆಗಿದೆ' ಎಂದು ತನಿಖಾ ತಂಡದ ಐಜಿ ಅಜಯ್ ಪಾಲ್ ಲಂಬಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ವಿದ್ಯಾರ್ಥಿಗಳಿಗೆ ನೀಟ್ ಮಾದರಿ ಪ್ರಶ್ನೆಗಳ ಸಂಗ್ರಹವನ್ನು (ಕ್ವೆಶ್ಚನ್ ಬ್ಯಾಂಕ್) ವಿತರಿಸಲಾಗಿತ್ತು ಎಂದು ಹಾಸ್ಟೆಲ್ ಮಾಲೀಕ ವಿಚಾರಣೆ ವೇಳೆ ಹೇಳಿದರು. ಈ ಮೂಲಕ ಪ್ರಶ್ನೆಪತ್ರಿಕೆ ಸೋರಿಕೆ ಆಗಿರುವ ಬಗ್ಗೆ ಪೊಲೀಸರಿಗೆ ಸುಳಿವು ಲಭಿಸಿತು' ಎಂದು ಅಧಿಕಾರಿ ವಿವರಿಸಿದರು.

ಸಿಬಿಐ ತಂಡ ಬುಧವಾರ ನವದೆಹಲಿಯಲ್ಲಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಕೇಂದ್ರ ಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ನೀಟ್-ಯುಜಿ 2026ರ ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗಿಯಾದ ಅಧಿಕಾರಿಗಳ ಜತೆ ಮಾತುಕತೆ ನಡೆಸಿತು.

ಮೂಲಗಳ ಪ್ರಕಾರ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಸ್ಥಾನ ಪೊಲೀಸರ 'ಎಸ್‌ಒಜಿ' ತಂಡ ಇದುವರೆಗೆ 150ಕ್ಕೂ ಹೆಚ್ಚು ಜನರನ್ನು ಬಂಧಿಸಿದೆ.

ಆರೋಪಿ ಬಿಜೆಪಿ ಮುಖಂಡ: ಕಾಂಗ್ರೆಸ್

ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದ ಆರೋಪದಡಿ ಬಂಧಿತನಾದ ಒಬ್ಬ ರಾಜಸ್ಥಾನದ ಬಿಜೆಪಿ ಮುಖಂಡ, ರಾಜ್ಯ ಸರ್ಕಾರವು ಈ ವಿಷಯವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದೆ ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಮುಖಂಡ ಅಶೋಕ್ ಗೆಹಲೋತ್ ಆರೋಪಿಸಿದ್ದಾರೆ. ಆದರೆ, ಈ ಆರೋಪವನ್ನು ನಿರಾಕರಿಸಿರುವ ಬಿಜೆಪಿ, 'ಬಂಧಿತ ಪಕ್ಷದಲ್ಲಿ ಯಾವುದೇ ಹುದ್ದೆ ಹೊಂದಿರಲಿಲ್ಲ' ಎಂದು ಹೇಳಿದೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅಶೋಕ್ ಗೆಹಲೋತ್, 'ಪೊಲೀಸರು ಬಂಧಿಸಿರುವ ದಿನೇಶ್ ಬಿನ್ವಾಲ್ ರಾಜಸ್ಥಾನದ ಬಿಜೆಪಿ ಯುವ ಮೋರ್ಚಾ ಜೈಪುರ ಗ್ರಾಮೀಣ ಘಟಕದ ಕಾರ್ಯದರ್ಶಿ' ಎಂದು ಬರೆದು, ಭಾವಚಿತ್ರವನ್ನೂ ಹಂಚಿಕೊಂಡಿದ್ದಾರೆ.

ಕೇರಳದಿಂದ ಹರಿಯಾಣ ಮೂಲಕ ರಾಜಸ್ಥಾನಕ್ಕೆ

ಕೇರಳದಿಂದ ಸೋರಿಕೆಯಾದ ಪ್ರಶ್ನೆಪತ್ರಿಕೆ ರಾಜಸ್ಥಾನ ತಲುಪುವ ಮೊದಲು, ಅದು ಹರಿಯಾಣದ ಗುರುಗ್ರಾಮದ ವ್ಯಕ್ತಿಯೊಬ್ಬರಿಗೆ ರವಾನೆ ಆಗಿದೆ ಎಂದು ಅಧಿಕಾರಿಗಳು ಹೇಳಿದರು. ಕೆಲವರು ಪ್ರಶ್ನೆಪತ್ರಿಕೆ ಸೋರಿಕೆಯ ಸಂಘಟಿತ ಜಾಲದ ಭಾಗವಾಗಿ ಕಾರ್ಯನಿರ್ವಹಿಸುತ್ತಿದ್ದ ಶಂಕೆ ಇದ್ದು, ವಿಚಾರಣೆ ಮುಂದುವರಿದಿದೆ. ಪ್ರಕರಣ ಸಂಬಂಧ ರಾಜಸ್ಥಾನದಲ್ಲಿ ಈವರೆಗೆ ಎಫ್‌ಐಆರ್ ದಾಖಲಾಗಿಲ್ಲ.

ಬಂಧಿತ ಮಹಿಳೆ ಸಿಬಿಐಗೆ ಹಸ್ತಾಂತರ

ನೀಟ್ ಪಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಪುಣೆಯ ಬಿಬ್ವೆವಾಡಿಯಲ್ಲಿ ಬಂಧಿಸಿದ್ದ ಮಹಿಳೆಯನ್ನು ಸಿಬಿಐಗೆ ಹಸ್ತಾಂತರಿಸಿದ್ದೇವೆ ಎಂದು ನಗರ ಪೊಲೀಸ್ ವರಿಷ್ಠಾಧಿಕಾರಿ ಅಮಿತೇಶ್ ಕುಮಾರ್ ತಿಳಿಸಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಮಹಿಳೆಯ ನಿಖರ ಪಾತ್ರದ ಬಗ್ಗೆ ಮಾಹಿತಿ ಲಭಿಸಿಲ್ಲ.

ಸುಪ್ರೀಂ ಕೋರ್ಟ್‌ಗೆ ಅರ್ಜಿ: ನೀಟ್-ಯುಜಿ ಪರೀಕ್ಷಾ ವ್ಯವಸ್ಥೆಯನ್ನು ಪುನರ್ ಪರಿಶೀಲಿಸುವಂತೆ ಅಖಿಲ ಭಾರತ ವೈದ್ಯಕೀಯ ಸಂಘಗಳ ಒಕ್ಕೂಟ (ಎಫ್‌ಎಐಎಂಎ) ಸುಪ್ರೀಂ ಕೋರ್ಟ್‌ಗೆ ಬುಧವಾರ ಅರ್ಜಿ ಸಲ್ಲಿಸಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆ ಹಗರಣದ ಬಗ್ಗೆ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒತ್ತಡ ಹೇರಿದೆ.

₹418 ಕೋಟಿ ಜಿಎಸ್‌ಟಿ ವಂಚನೆ

ಇಬ್ಬರ ಬಂಧನ • ₹2,384 ಕೋಟಿ ಖೊಟ್ಟಿ ವಹಿವಾಟು ನಡೆಸಿದ್ದ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ


ಸಲೀಮುಲ್ಲಾ ಬೇಗ್

ಹಸನ್ ಬೇಗ್

ಬೆಂಗಳೂರು: ಗುಜರಿ ವಸ್ತುಗಳ ಹೆಸರಿನಲ್ಲಿ ₹2,384 ಕೋಟಿ ಮೊತ್ತದ ಖೊಟ್ಟಿ ವಹಿವಾಟು ನಡೆಸಿ, ರಾಜ್ಯ ಸರ್ಕಾರಕ್ಕೆ ₹418 ಕೋಟಿ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚಿಸಿದ್ದ ಜಾಲವನ್ನು ಪತ್ತೆ ಮಾಡಿರುವ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಇಬ್ಬರನ್ನು ಬಂಧಿಸಿದ್ದಾರೆ.

‘ನಗರದ ನಾಯಂಡಹಳ್ಳಿ ವ್ಯಾಪ್ತಿಯಲ್ಲಿ ನೋಂದಣಿಯಾಗಿದ್ದ ಕೆಲವು ಗುಜರಿ ವಸ್ತು ನಿರ್ವಹಣಾ ಕಂಪನಿಗಳು ಪದೇ ಪದೇ ನಕಲಿ ಜಿಎಸ್‌ಟಿ ಇನ್‌ವಾಯ್ಸ್ ಸೃಷ್ಟಿಸಿ, ಐಟಿಸಿ ವಂಚಿಸು ತ್ತಿದ್ದವು. ಈ ಬಗ್ಗೆ ವಿವರಣೆ ಪಡೆಯಲು ನೋಟಿಸ್ ನೀಡಲು ಹೋದಾಗ ನೋಂದಾಯಿತ ವಿಳಾಸದಲ್ಲಿ ಅಂತಹ ಕಂಪನಿಗಳೇ ಇಲ್ಲ ಎಂಬುದು ಪತ್ತೆಯಾಗು ತ್ತಿದ್ದವು’ ಎಂದು ವಾಣಿಜ್ಯ ಇಲಾಖೆ ಮೂಲಗಳು ತಿಳಿಸಿವೆ.

‘ಈ ಕಂಪನಿಗಳ ವಹಿವಾಟುಗಳ ವಿವರ ಕಲೆ ಹಾಕಲು ವಿಶೇಷ ತಂಡವನ್ನು ರಚಿಸಲಾಗಿತ್ತು. ನಾಯಂಡಹಳ್ಳಿ ವ್ಯಾಪ್ತಿಯಲ್ಲಿ ಇಂತಹ ವಹಿವಾಟು ನಡೆಸಿದ್ದ ಮತ್ತು ನಡೆಸುತ್ತಿದ್ದ ಸುಮಾರು 127 ಕಂಪನಿಗಳನ್ನು ಒಂದೇ ಜಾಲವು ನಿರ್ವಹಣೆ ಮಾಡುತ್ತಿದೆ ಎಂಬುದು ಪತ್ತೆಯಾಯಿತು’ ಎಂದು ಮೂಲಗಳು ಮಾಹಿತಿ ನೀಡಿವೆ.

‘ನಾಯಂಡಹಳ್ಳಿಯಲ್ಲಿ ‘ಎಸ್‌ಕೆಎಸ್ ಟ್ರೇಡರ್ಸ್’ ಎಂಬ ಗುಜರಿ ವಸ್ತುಗಳ ಕಂಪನಿ ನಡೆಸುತ್ತಿರುವ ಸಲೀಮುಲ್ಲಾ ಬೇಗ್ (49 ವರ್ಷ) ಎಂಬವರು ಇದೇ ರೀತಿ ಸುಮಾರು 72 ನಕಲಿ ಕಂಪನಿಗಳ ಜತೆ ಸಂಶಯಾಸ್ಪದ ಖೊಟ್ಟಿ ವಹಿವಾಟು ನಡೆಸಿದ್ದಾರೆ. ಈ ನಕಲಿ ಕಂಪನಿಗಳಿಂದ ₹2,172 ಕೋಟಿ ಮೊತ್ತದ ಟಂಗ್‌ಸ್ಟನ್ ಕಾರ್ಬೈಡ್ ತ್ಯಾಜ್ಯ, ಇ-ತ್ಯಾಜ್ಯ ಮತ್ತು ಇತರ ಕೆಲವು ಹಾಳಾದ ಯಂತ್ರೋಪಕರಣಗಳನ್ನು ಖರೀದಿಸಿದ್ದೇವೆ ಎಂದು ಎಸ್‌ಕೆಎಸ್ ಟ್ರೇಡರ್ಸ್ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿದೆ. ಆದರೆ, ಆ 72 ಕಂಪನಿಗಳೂ ಅಸ್ತಿತ್ವದಲ್ಲಿ ಇಲ್ಲ’ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಪ್ರಕಟಣೆ ತಿಳಿಸಿದೆ.

‘₹2,172 ಕೋಟಿ ಮೊತ್ತದ ಖೊಟ್ಟಿ ವಹಿವಾಟಿನ ಮೂಲಕ ಎಸ್‌ಕೆಎಸ್ ಟ್ರೇಡರ್ಸ್ ಹೆಸರಿಗೆ ₹380 ಕೋಟಿ ಮೊತ್ತದ ಐಟಿಸಿ ಪಡೆಯಲಾಗಿದೆ. ಇದೇ ರೀತಿ, ಹಸನ್ ಬೇಗ್ (35 ವರ್ಷ), ಮಾಲೀಕತ್ವದ ‘ಕೆಎಚ್ ಇ-ವೇಸ್ಟ್ ರಿಸೈಕ್ಲರ್’ ಕಂಪನಿಯು 55 ನಕಲಿ ಕಂಪನಿಗಳ ಜತೆ ₹212 ಕೋಟಿ ಮೊತ್ತದ ಸಂಶಯಾಸ್ಪದ ವಹಿವಾಟಿನ ಮೂಲಕ ₹38 ಕೋಟಿ ಮೊತ್ತದ ಐಟಿಸಿ ಪಡೆದಿದೆ. ಸಲೀಮುಲ್ಲಾ ಬೇಗ್ ಮತ್ತು ಹಸನ್ ಬೇಗ್ ಒಟ್ಟಾಗಿ ಈ ಜಾಲವನ್ನು ನಡೆಸುತ್ತಿದ್ದರು. ತಾವು ಪಡೆದುಕೊಂಡ ಐಟಿಸಿಯನ್ನು ಕಮಿಷನ್ ಪಡೆದು ಬೇರೆ ಕಂಪನಿಗಳಿಗೆ ವರ್ಗಾಯಿಸುತ್ತಿದ್ದರು ಎಂದು ವಿವರಿಸಿದೆ.

‘ಸುದೀರ್ಘ ತನಿಖೆಯ ನಂತರ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ಐಟಿಸಿ ವರ್ಗಾವಣೆ ಮಾಡಿಸಿಕೊಂಡವರಲ್ಲಿ ರಾಜ್ಯದ ಮತ್ತು ಹೊರರಾಜ್ಯದ ಕಂಪನಿಗಳೂ ಇವೆ. ತನಿಖೆಯನ್ನು ಮುಂದುವರಿಸಲಾಗಿದ್ದು, ರಾಜ್ಯ ಸರ್ಕಾರಕ್ಕೆ ವಂಚಿಸಿರುವ ಐಟಿಸಿ ಮೊತ್ತವನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಮಾಹಿತಿ ನೀಡಿವೆ.

ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತ (ಜಾರಿ) ಕನಿಷ್ಕ, ಹೆಚ್ಚುವರಿ ಆಯುಕ್ತೆ (ಸೇವಾ ವಿಶ್ಲೇಷಣೆ ಮತ್ತು ಗುಪ್ತಚರ ವಿಭಾಗ) ಅಪರ್ಣಾ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಜಂಟಿ ತಂಡವು ಈ ತನಿಖೆಯನ್ನು ನಡೆಸುತ್ತಿದೆ.

ವಂಚನೆಯ ಪರಿ

- ಆರೋಪಿಗಳು ಯಾರದ್ದೋ ಆಧಾರ್ ಮತ್ತು ಪ್ಯಾನ್ ವಿವರ ಬಳಸಿಕೊಂಡು, ಅಂತಹವರ ಹೆಸರಿನಲ್ಲಿ ಕಂಪನಿ ಹಾಗೂ ಜಿಎಸ್‌ಟಿ ನೋಂದಣಿ ಮಾಡಿಸುತ್ತಿದ್ದರು
- ನಕಲಿ ಬಾಡಿಗೆ ಕರಾರು ಪತ್ರ, ಸುಳ್ಳು ವಿಳಾಸ, ನಕಲಿ ನೋಟರಿ ಮುದ್ರೆಗಳನ್ನು ಸೃಷ್ಟಿಸಿ ವಹಿವಾಟು ನಡೆಸುತ್ತಿದ್ದರು. ಇವೇ ದಾಖಲೆಗಳನ್ನು ಬಳಸಿಕೊಂಡು ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳನ್ನೂ ತೆರೆಯುತ್ತಿದ್ದರು
- ಹೀಗೆ ಅಪರಿಚಿತರ ಹೆಸರಿನಲ್ಲಿ ನೋಂದಣಿ ಮಾಡಲಾದ ಕಂಪನಿಯಿಂದ ತಮ್ಮ ಕಂಪನಿಗಳು (ಎಸ್‌ಕೆಎಸ್ ಟ್ರೇಡರ್ಸ್ ಮತ್ತು ಕೆಎಚ್ ಇ-ವೇಸ್ಟ್ ರಿಸೈಕ್ಲರ್) ಗುಜರಿ ವಸ್ತುಗಳನ್ನು ಖರೀದಿಸಿವೆ ಎಂದು ನಕಲಿ ಇನ್‌ವಾಯ್ಸ್ ಸೃಷ್ಟಿಸುತ್ತಿದ್ದರು
- ಗುಜರಿ ವಸ್ತುಗಳನ್ನು ಮತ್ತು ಮರುಬಳಕೆ ವಸ್ತುಗಳನ್ನು ಬೇರೆ ಕಂಪನಿಗಳಿಗೆ ಮಾರಾಟ ಮಾಡಿದಂತೆ ಮತ್ತೊಂದು ಇನ್‌ವಾಯ್ಸ್ ಸೃಷ್ಟಿಸುತ್ತಿದ್ದರು. ಆ ಇನ್‌ವಾಯ್ಸ್‌ಗಳ ಆಧಾರದಲ್ಲಿ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಪಡೆದುಕೊಂಡು, ಅವುಗಳನ್ನು ಇತರರಿಗೆ ವರ್ಗಾಯಿಸುತ್ತಿದ್ದರು
- ಜಿಎಸ್‌ಟಿ ಐಟಿಸಿ ನೀಡಲಾಗಿರುವ ಪ್ರಕರಣಗಳಲ್ಲಿ, ಮೂಲ ಕಂಪನಿಯು ಜಿಎಸ್‌ಟಿ ಪಾವತಿಸದೇ ಇರುವುದು ಪತ್ತೆಯಾಗುತ್ತಿತ್ತು. ಅಂತಹ ಕಂಪನಿಗೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡುತ್ತಿದ್ದಂತೆಯೇ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುತ್ತಿದ್ದರು. ವಾಸ್ತವದಲ್ಲಿ ಆ ಕಂಪನಿಗಳೇ ಇಲ್ಲದಿದ್ದ ಕಾರಣ ಜಿಎಸ್‌ಟಿ ವಸೂಲಿ ಸಾಧ್ಯವಾಗುತ್ತಿರಲಿಲ್ಲ

ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣ: ತನಿಖೆ ಚುರುಕು

ತಮಿಳುನಾಡಿನಲ್ಲಿ ತೀವ್ರ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಗ್ಗಲೀಪುರ ಪೊಲೀಸ್ ಠಾಣೆ ವ್ಯಾಪ್ತಿಯ ವಡೇರಹಳ್ಳಿಯ ಸೇತುವೆ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ಪೊಲೀಸ್ ತಂಡವು, ಶಂಕಿತರನ್ನು ತಮಿಳುನಾಡಿನಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ.

ತಾಂತ್ರಿಕ ಸುಳಿವು ಹಾಗೂ ನೈಸ್ ರಸ್ತೆಯ ಪ್ರವೇಶ ದ್ವಾರದಲ್ಲಿ ಇರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ತಮಿಳುನಾಡಿಗೆ ತೆರಳಿರುವ ವಿಶೇಷ ಪೊಲೀಸ್ ತಂಡವು, ಆ ರಾಜ್ಯದಲ್ಲಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ ಎಂದು ಗೊತ್ತಾಗಿದೆ.

ಎಚ್‌ಎಎಲ್ ವಿಮಾನ ನಿಲ್ದಾಣ ಹಾಗೂ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಒಡ್ಡಿದ್ದ ಕೋರಮಂಗಲದ ಲೋಹಿತ್‌ಗೂ, ತಮಿಳುನಾಡಿನಲ್ಲಿ ವಿಚಾರಣೆ ನಡೆಸುತ್ತಿರುವ ವ್ಯಕ್ತಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ವಿಚಾರಣೆ ಪೂರ್ಣವಾದ ಮೇಲಷ್ಟೇ ವಡೇರಹಳ್ಳಿ ಸೇತುವೆಯ ಬಳಿ ಜಿಲೆಟಿನ್ ಕಡ್ಡಿಗಳು ಎಸೆದಿದ್ದು ಯಾರು ಎಂಬುದು ಪತ್ತೆ ಆಗಲಿದೆ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.


ರಟ್ಟಿನ ಪೆಟ್ಟಿಗೆಯಲ್ಲಿದ್ದ ಸ್ಫೋಟಕ ವಸ್ತುಗಳು ಹಾಗೂ ವೈರ್

‘ಕನಕಪುರದ ಸುತ್ತಮುತ್ತ ಕಲ್ಲು ಕ್ವಾರಿಗಳು ಇವೆ. ಕ್ವಾರಿ ಮಾಲೀಕರು ಹಾಗೂ ಕಾರ್ಮಿಕರನ್ನು ಕರೆಯಿಸಿ ವಿಚಾರಣೆ ನಡೆಸಲಾಗುತ್ತಿದೆ. ಕ್ವಾರಿ ಮಾಲೀಕರ ಕೃತ್ಯ ಅಲ್ಲ ಎಂಬುದು ಕಂಡುಬಂದಿದೆ. ರಟ್ಟಿನ ಪೆಟ್ಟಿಗೆಯಲ್ಲಿ ಜಿಲೆಟಿನ್ ಕಡ್ಡಿಗಳು, ಅಗರಬತ್ತಿ, ಕರ್ಪೂರದ ಡಬ್ಬಿ ಇಟ್ಟಿರುವುದರಿಂದ ಹಲವು ಸಂಶಯಗಳಿವೆ. ಜಿಲೆಟಿನ್ ಕಡ್ಡಿಗಳ ಪರಿಶೀಲನೆ ನಡೆಸಲಾಗಿದೆ. ಅವುಗಳು ಹಳೆಯವು ಎಂಬುದು ಕಂಡುಬಂದಿದೆ’ ಎಂದು ಪೊಲೀಸರು ಹೇಳಿದರು.

‘ಬಂಧಿತ ಆರೋಪಿ, ಕೋರಮಂಗಲದ ಲೋಹಿತ್ ಮೇ 10ರ ಬೆಳಿಗ್ಗೆ ಕೇವಲ ಬೆಂಗಳೂರು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಬೆದರಿಕೆ ಹಾಕಿರಲಿಲ್ಲ. ತಮಿಳುನಾಡು ಪೊಲೀಸ್ ಸಹಾಯವಾಣಿ ಹಾಗೂ ರಾಷ್ಟ್ರದ ಇನ್ನೂ ಕೆಲವು ತನಿಖಾ ಸಂಸ್ಥೆಗಳ ಸಹಾಯವಾಣಿಗಳಿಗೂ ಕರೆ ಮಾಡಿರುವುದು ತನಿಖೆ ವೇಳೆ ದೃಢಪಟ್ಟಿದೆ’ ಎಂದು ಮೂಲಗಳು ಹೇಳಿವೆ.

‘ಮಾನಸಿಕ ಸಮಸ್ಯೆಯಿಂದ ಲೋಹಿತ್ ಬಳಲುತ್ತಿದ್ದ ಎಂಬುದು ಕಂಡುಬಂದಿದೆ. ವ್ಯಸನಮುಕ್ತಿ ಕೇಂದ್ರಕ್ಕೆ ಅವರ ಪೋಷಕರು ದಾಖಲು ಮಾಡಿದ್ದರು. ಕಳೆದ ತಿಂಗಳು ಅಲ್ಲಿಂದ ಬಿಡುಗಡೆ ಮಾಡಿಕೊಂಡು ಮನೆಗೆ ಕರೆ ತಂದಿದ್ದರು. ಸೆಂಟರ್‌ನಲ್ಲಿ ಇದ್ದಾಗಲೇ ಲೋಹಿತ್ ಆನ್‌ಲೈನ್ ಮೂಲಕ ಸಹಾಯವಾಣಿಗಳ ಸಂಖ್ಯೆ ಪಡೆದಿರುವ ಸಾಧ್ಯತೆಯಿದೆ’ ಎಂದು ಪೊಲೀಸರು ಹೇಳಿದರು.

ಮಾನಸಿಕ ಸಮಸ್ಯೆಗೆ ಚಿಕಿತ್ಸೆ ಕೊಡಿಸಿರುವ ಸಂಬಂಧ ಲೋಹಿತ್ ಪೋಷಕರು, ವೈದ್ಯಕೀಯ ದಾಖಲೆ ಸಲ್ಲಿಸಿದ್ದಾರೆ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಅದರ ವರದಿ ಬಂದ ಬಳಿಕ ಸ್ಪಷ್ಟತೆ ಸಿಗಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮೇ 10ರ ಬೆಳಿಗ್ಗೆ 7.30ರ ಸುಮಾರಿಗೆ ಲೋಹಿತ್ ಕರೆ ಮಾಡಿ ಆರ್ಟ್ ಆಫ್ ಲಿವಿಂಗ್ ಬಳಿಯೇ ಸ್ಫೋಟಕ ವಸ್ತುಗಳನ್ನು ಇಟ್ಟಿರುವುದಾಗಿ ಹೇಳಿದ್ದರು. ಅದರ ಬೆನ್ನಲ್ಲೇ, ನೈಸ್ ರಸ್ತೆಯ ಆಸುಪಾಸಿನಲ್ಲಿ ಪರಿಶೀಲನೆ ನಡೆಸಿದಾಗ ಜಿಲೆಟಿನ್ ಕಡ್ಡಿಗಳು ಸಿಕ್ಕಿರುವುದು ಅನುಮಾನಕ್ಕೆ ಕಾರಣವಾಗಿದೆ’ ಎಂದು ಪೊಲೀಸರು ಹೇಳಿದರು.

ಎನ್‌ಸಿಆರ್‌ಬಿ ವರದಿ: ಬಾಲಕಿಯರು, ಮಹಿಳೆಯರ ಸಂಖ್ಯೆಯೇ ಅಧಿಕ

ಹೆಚ್ಚಿದ ಮಕ್ಕಳ ನಾಪತ್ತೆ ಪ್ರಕರಣ

• ಅಮೃತ್ ಕಿರಣ್ ಬಿ.ಎಂ.

ದಾವಣಗೆರೆ: ಪ್ರೇಮ ಪ್ರಕರಣ, ದುಶ್ಚಟ, ಮಕ್ಕಳ ಕಳ್ಳಸಾಗಣೆ, ಸಾಮಾಜಿಕ ಜಾಲ ತಾಣಗಳ ಪ್ರಭಾವ ಸೇರಿದಂತೆ ಮತ್ತಿತರ ಕಾರಣಗಳಿಂದ ರಾಜ್ಯದಲ್ಲಿ ಪ್ರತಿ ವರ್ಷ ನಾಪತ್ತೆಯಾಗುವ ಮಕ್ಕಳ ಸಂಖ್ಯೆ ಏರಿಕೆ ಯಾಗುತ್ತಿದೆ. ದಿನವೊಂದಕ್ಕೆ ಸರಾಸರಿ ಐವರು ಮಕ್ಕಳು ನಾಪತ್ತೆಯಾಗುತ್ತಿದ್ದಾರೆ ಎಂದು ಈಚೆಗೆ ಬಿಡುಗಡೆಯಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿ-2024ರ ದತ್ತಾಂಶಗಳು ಹೇಳುತ್ತವೆ.

2024ರಲ್ಲಿ 18 ವರ್ಷದೊಳಗಿನ 1,879 ಮಕ್ಕಳು ನಾಪತ್ತೆಯಾಗಿದ್ದರು. ಈ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. 2022ರಲ್ಲಿ 1,110 ಹಾಗೂ 2023ರಲ್ಲಿ 1,349 ಮಕ್ಕಳ ನಾಪತ್ತೆ ಪ್ರಕರಣಗಳು ದಾಖಲಾಗಿದ್ದವು.

ನಾಪತ್ತೆಯಾಗುತ್ತಿರುವವರ ಪೈಕಿ ಬಾಲಕಿಯರ ಸಂಖ್ಯೆ ಅಧಿಕ ಎಂಬ ಅಂಶ ಪಾಲಕರಲ್ಲಿ ಆತಂಕ ಮೂಡಿಸಿದೆ. 2024ರಲ್ಲಿ 895 ಬಾಲಕರು ಹಾಗೂ 984 ಬಾಲಕಿಯರು ಕಾಣೆಯಾಗಿದ್ದರು. 2022ರಲ್ಲಿ 542ರಷ್ಟಿದ್ದ ನಾಪತ್ತೆಯಾದ ಬಾಲಕಿಯರ ಸಂಖ್ಯೆ 2023ರಲ್ಲಿ 406ಕ್ಕೆ ಇಳಿಕೆಯಾಗಿದೆ. 2024ರಲ್ಲಿ ಅಂಥ ಪ್ರಕರಣಗಳು 984ಕ್ಕೆ ಏರಿಕೆಯಾಗಿದೆ.

ವಿವಿಧ ಠಾಣೆಗಳಲ್ಲಿ ದಾಖಲಾದ ನಾಪತ್ತೆ ಪ್ರಕರಣಗಳ ಪತ್ತೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. 2024ರಲ್ಲಿ ಹಳೆಯವೂ ಸೇರಿದಂತೆ ಒಟ್ಟು 2,350 ಪ್ರಕರಣಗಳ ಪೈಕಿ 1,799 ಪ್ರಕರಣಗಳಲ್ಲಿ ಮಕ್ಕಳನ್ನು ಪತ್ತೆ ಹಚ್ಚಲಾಗಿದೆ. ಆದರೆ, ಮಿಕ್ಕ 551 ಮಕ್ಕಳ ಸುಳಿವು ಸಿಕ್ಕಿಲ್ಲ ಎಂದು ವರದಿ ಉಲ್ಲೇಖಿಸಿದೆ.

ಮಹಿಳೆಯರ ಸಂಖ್ಯೆ ಅಧಿಕ: 2024ರಲ್ಲಿ ರಾಜ್ಯದಲ್ಲಿ ಮಕ್ಕಳೂ ಸೇರಿ ಎಲ್ಲ ವಯೋಮಾನದ ಒಟ್ಟು 24,390 ಜನರು ನಾಪತ್ತೆಯಾಗಿದ್ದಾರೆ. ದಿನವೂ ಸರಾಸರಿ 67 ಜನರು ನಾಪತ್ತೆಯಾಗುತ್ತಿದ್ದಾರೆ.

ನಾಪತ್ತೆಯಾದವರ ಪೈಕಿ ಮಹಿಳೆಯರ ಪ್ರಮಾಣವೇ ಶೇ 65ರಷ್ಟಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಪ್ರಕರಣಗಳು ಏರಿಕೆಯ ಹಾದಿಯಲ್ಲಿವೆ. 2022ರಲ್ಲಿ 19,372 ಹಾಗೂ 2023ರಲ್ಲಿ 22,719 ಜನ ನಾಪತ್ತೆಯಾಗಿದ್ದರು. ಈ ಎರಡೂ ವರ್ಷಗಳಲ್ಲೂ ಮಹಿಳೆಯರ ಸಂಖ್ಯೆಯೇ ಅಧಿಕವಿತ್ತು.









‘ಸಡಿಲವಾಗುತ್ತಿವೆ ಕೌಟುಂಬಿಕ ಬಾಂಧವ್ಯ’

ಮಕ್ಕಳ ನಾಪತ್ತೆಗೆ ಹಲವು ಕಾರಣಗಳನ್ನು ತಜ್ಞರು ಗುರುತಿಸುತ್ತಾರೆ. ಹಲವು ಪ್ರಕರಣಗಳಲ್ಲಿ ಹದಿಹರೆಯದವರು ಪ್ರೀತಿ, ಪ್ರೇಮದ ಬಲೆಗೆ ಸಿಲುಕಿ ಮನೆಬಿಟ್ಟು ಹೋಗುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳ ಪ್ರಭಾವವೂ ದೊಡ್ಡದು.

‘ಕೌಟುಂಬಿಕ ಸಂಬಂಧಗಳು ಸಡಿಲವಾಗುತ್ತಿವೆ. ತಂದೆ-ತಾಯಿ ಜಗಳ, ಪಾಲಕರ ವಿಚ್ಛೇದನ ಮಕ್ಕಳ ಮೇಲೆ ಪರಿಣಾಮ ಬೀರುತ್ತಿವೆ. ಮಕ್ಕಳಲ್ಲಿ ಮೂಡುವ ತಪ್ಪು ತಿಳಿವಳಿಕೆ, ವಾತ್ಸಲ್ಯದ ಕೊರತೆಯಿಂದಲೂ ಹೀಗಾಗುತ್ತದೆ. ಮಗು ಶಾಲೆಗೆ ಬರಲಿಲ್ಲ ಅಥವಾ ಶಾಲೆಯಿಂದ ಮನೆಗೆ ವಾಪಸಾಗಲಿಲ್ಲ ಎಂದರೆ ತಕ್ಷಣ ಠಾಣೆಗೆ ದೂರು ನೀಡಬೇಕು’ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಸದಸ್ಯ ಕೆ.ಬಿ. ರೂಪ ನಾಯ್ಕ ಸಲಹೆ ನೀಡುತ್ತಾರೆ.

‘ಕೋವಿಡ್ ನಂತರ ಸಾಮಾಜಿಕ ಜಾಲತಾಣಗಳ ಬಳಕೆಯು ಮಕ್ಕಳಲ್ಲಿ ಗೀಳಾಗಿ ಪರಿಣಮಿಸಿದೆ. ಮಕ್ಕಳ ಆಸಕ್ತಿಯ ವಿಷಯಗಳನ್ನೇ ಅಲ್ಗಾರಿದಂ ಪುನಃ ತೋರಿಸುತ್ತಾ ಅವರಲ್ಲಿ ಪ್ರಚೋದನೆ ಉಂಟುಮಾಡುತ್ತದೆ. ಮಕ್ಕಳು ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಪಾಲಕರು ನಿಗಾ ವಹಿಸುವುದು ಅತಿಮುಖ್ಯ. ಕೌಟುಂಬಿಕ ಸಂಬಂಧಗಳ ಅರಿವು, ಭಾವನೆಗಳನ್ನು ಹಂಚಿಕೊಳ್ಳುವ ವಾತಾವರಣ ಕಲ್ಪಿಸಿದರೆ ಒಂದಿಷ್ಟು ಪ್ರಕರಣಗಳನ್ನು ತಡೆಯಬಹುದು’ ಎಂದು ಅವರು ಅಭಿಪ್ರಾಯಪಡುತ್ತಾರೆ.

> **ಶಾಲೆಗಳಲ್ಲಿ ವಿದ್ಯಾರ್ಥಿಗಳು ಸಮಸ್ಯೆಗಳನ್ನು ಹೇಳಿಕೊಳ್ಳುವ ಮುಕ್ತ ವಾತಾವರಣ ಬೇಕಿದೆ. ಆಪ್ತಸಮಾಲೋಚನೆ ವ್ಯವಸ್ಥೆ ಇದ್ದರೆ ಪ್ರಕರಣಗಳನ್ನು ತಗ್ಗಿಸಬಹುದು**
> **ಕೆ.ಬಿ. ರೂಪ ನಾಯ್ಕ,** ಮಾಜಿ ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ಆಯೋಗ

‘ಹೇಳಿ ಹೋಗು ಕಾರಣ’: ಕೋರ್ಟ್‌ಗೆ ಅಮೆಜಾನ್ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತ ರವಿ ಬೆಳಗೆರೆ ರಚಿಸಿರುವ ‘ಹೇಳಿ ಹೋಗು ಕಾರಣ’ ಪುಸ್ತಕವನ್ನು ನಕಲು ಮಾಡಿ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸುವಂತೆ ಕೋರಿ, ‘ಅಮೆಜಾನ್ ಸೆಲ್ಲರ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿ’ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಕಂಪನಿಯ ಅಧಿಕೃತ ಪ್ರತಿನಿಧಿ ಜಿ.ಎಸ್.ಅರ್ಜುನ ಕುಮಾರ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯು ನ್ಯಾಯಮೂರ್ತಿ ಎಂ.ಜಿ.ಎಸ್ ಕಮಲ್ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು. ಅರ್ಜಿ ಪರಿಶೀಲಿಸಿದ ನ್ಯಾಯಪೀಠ, ಕಚೇರಿ ಆಕ್ಷೇಪಣೆ ಪೂರೈಸುವಂತೆ ಸೂಚಿಸಿ ಒಂದು ವಾರದ ಗಡುವು ನೀಡಿ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?: ‘ಅಮೆಜಾನ್, ಫ್ಲಿಪ್‌ಕಾರ್ಟ್, ಮೀಶೊ... ಕಂಪನಿಗಳ ಹೆಸರಿನಲ್ಲಿ ಕೆಲವರು ‘ಹೇಳಿ ಹೋಗು ಕಾರಣ’ ಪುಸ್ತಕವನ್ನು ನಕಲು ಮಾಡಿದ್ದಾರೆ. ತಮ್ಮ ಆ್ಯಪ್‌ಗಳ ಮೂಲಕ ರಿಯಾಯಿತಿ ಆಮಿಷ ತೋರಿ ಮೂಲ ಬೆಲೆ ₹350ಕ್ಕಿಂತಲೂ ಕಡಿಮೆ ದರದಲ್ಲಿ ಅಂದರೆ ₹149ಕ್ಕೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಲೇಖಕರ ಹಕ್ಕುಗಳಿಗೆ ಧಕ್ಕೆಯಾಗಿದೆ’ ಎಂಬ ದೂರನ್ನು ಆಧರಿಸಿ, ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ಪ್ರವೀಣ್ ಸೂದ್ ಅಧಿಕಾರಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ನಿರ್ದೇಶಕ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯನ್ನು ಒಂದು ವರ್ಷ ವಿಸ್ತರಿಸಿ ಕೇಂದ್ರ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

1986ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿ ಆಗಿರುವ ಸೂದ್ ಅವರ ಅಧಿಕಾರದ ಅವಧಿ 2027ರ ಮೇ 24ರವರೆಗೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೂದ್ ಅವರು 2023ರ ಮೇ ತಿಂಗಳಲ್ಲಿ ಸಿಬಿಐ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ್ದರು. ಎರಡು ವರ್ಷಗಳ ಸೇವಾ ಅವಧಿಯ ಬಳಿಕ ಅವರು 2025ರ ಮೇ ತಿಂಗಳಲ್ಲಿ ನಿವೃತ್ತರಾಗಬೇಕಿತ್ತು. ಆದರೆ, ಸರ್ಕಾರ ಕಳೆದ ವರ್ಷವೂ ಅವರ ಅಧಿಕಾರದ ಅವಧಿಯನ್ನು ಒಂದು ವರ್ಷ ವಿಸ್ತರಿಸಿತ್ತು.

ಸೂಲಿಬೆಲೆ ವಿರುದ್ಧದ ಪ್ರಕರಣಕ್ಕೆ ತಡೆ

ಬೆಂಗಳೂರು: ‘ಮುಸಲ್ಮಾನ ಹುಡುಗಿಯರು ಗಂಡಸರಿಗಿಂತ ಡೇಂಜರ್, ಅವರ ಸ್ನೇಹ ಮಾಡಲೇಬೇಡಿ...’ ಎಂಬ ಪ್ರಚೋದನಕಾರಿ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿ ಚಕ್ರವರ್ತಿ ಸೂಲಿಬೆಲೆ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ನನ್ನ ವಿರುದ್ಧ ಧಾರವಾಡ ಶಹರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ತಡೆ ನೀಡಬೇಕು’ ಎಂದು ಕೋರಿ ಚಕ್ರವರ್ತಿ ಸೂಲಿಬೆಲೆ ಅಲಿಯಾಸ್ ಮಿಥುನ್ ಚಕ್ರವರ್ತಿ ದೇವಿದಾಸ್ ಶೇಟ್ (47) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಸಂಜೀವ್ ಕುಮಾರ್ ಹಂಚಾಟೆ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ (ಧಾರವಾಡ) ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಚಕ್ರವರ್ತಿ ಸೂಲಿಬೆಲೆ ಅಭಿಪ್ರಾಯವು ಸಂವಿಧಾನದ 19ನೇ ವಿಧಿಯ ವ್ಯಾಪ್ತಿಯೊಳಗೇ ಇದೆ. ಭಾರತೀಯ ನ್ಯಾಯ ಸಂಹಿತೆಯ ಕಲಂ 196 ಅನ್ವಯ ಆಗುವುದಿಲ್ಲ. ದೂರು ನೀಡಿರುವ ಪೊಲೀಸ್ ಕಾನ್‌ಸ್ಟೆಬಲ್ ಬಾಧಿತರಲ್ಲ. ಅವರಿಗೆ ಆ ಹಕ್ಕೂ ಇಲ್ಲ’ ಎಂದು ಪ್ರತಿಪಾದಿಸಿದರು. ‘ಇದು ಮೇಲ್ನೋಟಕ್ಕೆ ತಡೆ ನೀಡುವ ಪ್ರಕರಣವಾಗಿದೆ’ ಎಂದ ಪೀಠ ವಿಚಾರಣೆಗೆ ತಡೆ ನೀಡಿತು.

ಪ್ರಕರಣ: ಧಾರವಾಡದ ಸುಭಾಷ್ ರಸ್ತೆಯಲ್ಲಿ ಇದೇ ವರ್ಷದ ಏಪ್ರಿಲ್ 8ರಂದು ನಡೆದಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಚಕ್ರವರ್ತಿ ಸೂಲಿಬೆಲೆ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಧಾರವಾಡ ಶಹರ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮಾದಕ ದ್ರವ್ಯ ಸಾಗಾಟ: ವಿದ್ಯಾರ್ಥಿನಿ ಬಂಧನ

ಸುಹಾನಾ

ಮೂಲ್ಕಿ (ದಕ್ಷಿಣ ಕನ್ನಡ): ನಿಷೇಧಿತ ಮಾದಕ ಪದಾರ್ಥ ಮಾರಾಟಕ್ಕೆ ಯತ್ನಿಸಿದ ಆರೋಪದ ಮೇಲೆ ವಿದ್ಯಾರ್ಥಿನಿಯೊಬ್ಬಳನ್ನು ಮೂಲ್ಕಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆಕೆಯಿಂದ ₹35 ಲಕ್ಷ ಮೌಲ್ಯ 1 ಕೆ.ಜಿ 42 ಗ್ರಾಂ ಹೈಡ್ರೊವೀಡ್ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿವಮೊಗ್ಗದ ಸಾಗರ ತಾಲ್ಲೂಕಿನ ಹುಲಿದೇವರಬನದ ಸುಹಾನಾ (21) ಬಂಧಿತ ಆರೋಪಿ. ಈಕೆ ಉಡುಪಿ ಜಿಲ್ಲೆಯ ಕುಂದಾಪುರ ಕಾಲೇಜೊಂದರಲ್ಲಿ ಅಂತಿಮ ವರ್ಷದ ಬಿಸಿಎ ವಿದ್ಯಾರ್ಥಿನಿ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಸುಹಾನಾ ಚೆನ್ನೈನಿಂದ ಮಾದಕದ್ರವ್ಯ ತರಿಸಿಕೊಂಡಿದ್ದಳು. ಮಂಗಳೂರಿನಲ್ಲಿ ಅಕ್ರಮವಾಗಿ ಮಾರಾಟ ಮಾಡಿ ಹಣ ಗಳಿಸುವ ಉದ್ದೇಶ ಹೊಂದಿದ್ದಳು ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಮಾದಕ ದ್ರವ್ಯ ಮಾರಾಟಕ್ಕೆ ಬಳಸಿದ್ದ ಮೊಬೈಲ್ ಫೋನ್ ಮತ್ತಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಮಾದಕ ಪದಾರ್ಥ ಕಳ್ಳಸಾಗಣೆ ಸಂಬಂಧ ಈಕೆಯ ವಿರುದ್ಧ ಈ ಹಿಂದೆ ಕಾವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳೂ ಆಕೆಯ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅಣಕು ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಮೇಲೆ ಭಯೋತ್ಪಾದಕರು ದಾಳಿ ನಡೆಸಿದರೆ, ಅದನ್ನು ಹೇಗೆ ನಿಭಾಯಿಸಬೇಕು ಎಂಬುದರ ಕುರಿತಾಗಿ ರಾಜ್ಯ ಪೊಲೀಸರು ಮತ್ತು ರಾಷ್ಟ್ರೀಯ ಭದ್ರತಾ ಗುಂಪಿನ (ಎನ್‌ಎಸ್‌ಜಿ) ಕಮಾಂಡೊಗಳು ಅಣಕು ಕಾರ್ಯಾಚರಣೆ ನಡೆಸಿದರು.

ವಿಧಾನಸೌಧಕ್ಕೆ ಬುಧವಾರ ಸಂಜೆ ಹತ್ತಾರು ಭಯೋತ್ಪಾದಕರು ನುಸುಳಿದ್ದರು. ಮುಖಗವಸು ಹಾಕಿದ್ದ ಅವರ ಕೈಗಳಲ್ಲಿ, ಅತ್ಯಾಧುನಿಕ ಬಂದೂಕುಗಳಿದ್ದವು. ಸಂಜೆಯ ವೇಳೆಯಾಗಿದ್ದರಿಂದ ಅವರ ಕೈಗಳಿಗೆ ಯಾವ ಸಾರ್ವಜನಿಕರೂ ಸಿಲುಕಿರಲಿಲ್ಲ. ಎರಡನೇ ಮಹಡಿ, ಮೂರನೇ ಮಹಡಿಯಲ್ಲಿ ಅಡ್ಡಾಡುತ್ತಾ ವಿಧಾನಸೌಧವನ್ನು ವಶಕ್ಕೆ ಪಡೆಯಲು ಯತ್ನಿಸುತ್ತಿದ್ದರು.

ಅದೇ ವೇಳೆಗೆ ಸೇನೆಯ ಹೆಲಿಕಾಪ್ಟರ್‌ನಲ್ಲಿ ಬಂದ ರಾಷ್ಟ್ರೀಯ ಭದ್ರತಾ ಗುಂಪಿನ (ಎನ್‌ಎಸ್‌ಜಿ) ಕಮಾಂಡೊಗಳು, ವಿಧಾನಸೌಧದ ಒಳ ಆವರಣದಲ್ಲಿ ಇಳಿದು, ಕಾರ್ಯಾಚರಣೆ ನಡೆಸಿದರು. ಅವರಿಗೆ ರಾಜ್ಯ ಪೊಲೀಸರು ಜತೆಯಾದರು. ಭಯೋತ್ಪಾದಕರನ್ನು ಸದೆಬಡಿದರು. ಸಂಜೆ 4ರಿಂದ ರಾತ್ರಿ 8ರವರೆಗೆ ಅಣಕು ಕಾರ್ಯಾಚರಣೆ ನಡೆಯಿತು.

ಅಣಕು ಕಾರ್ಯಾಚರಣೆ ವೇಳೆ ಎನ್‌ಎಸ್‌ಜಿ ಕಮಾಂಡೊಗಳು ಹೆಲಿಕಾಪ್ಟರ್‌ನಿಂದ ಹಗ್ಗ ಬಳಸಿಕೊಂಡು, ವಿಧಾನಸೌಧದ ಮೇಲ್ಭಾಗದಲ್ಲಿ ಇಳಿದರು —ಚಿತ್ರ: ರಂಜು ಪಿ

ಬೆಳಗಾವಿ, ಹಾವೇರಿಯಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹಾವೇರಿ: ಬೆಳಗಾವಿ ಮತ್ತು ಹಾವೇರಿ ಜಿಲ್ಲೆಯ ವಿವಿಧೆಡೆ ಬುಧವಾರ ಧಾರಾಕಾರ ಮಳೆಯಾಯಿತು.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ.ಹುಬ್ಬಳ್ಳಿಯಲ್ಲಿ ಬಿರುಗಾಳಿ ಸಹಿತ ಆಲಿಕಲ್ಲು ಮಳೆ ಸುರಿಯಿತು. ಬೈಲಹೊಂಗಲ, ಗೋಕಾಕದಲ್ಲಿ ಗುಡುಗು-ಮಿಂಚು ಸಹಿತ ಬಿರುಸಿನ ಮಳೆಯಾಯಿತು. ಬೆಳಗಾವಿ ನಗರ, ಹಿರೇಬಾಗೇವಾಡಿ, ನಿಪ್ಪಾಣಿ, ಹುಕ್ಕೇರಿ, ಸವದತ್ತಿ, ಮುನವಳ್ಳಿಯಲ್ಲಿ ತುಂತುರು ಮಳೆಯಾಯಿತು.

ಹಾವೇರಿ ನಗರ ಸೇರಿ ಜಿಲ್ಲೆಯ ವಿವಿಧೆಡೆ ಬಿರುಗಾಳಿ ಸಹಿತ ಮಳೆ ಸುರಿಯಿತು. ಜಿಲ್ಲೆಯ ಗುತ್ತಲ-ಅಗಡಿ ರಸ್ತೆಯಲ್ಲಿ ಗಾಳಿಯಿಂದ ಮರವೊಂದು ಬಿದ್ದು, ವಾಹನಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿತು.

ಸಿದ್ದಾಪುರ ವರದಿ: ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಬುಧವಾರ ಸಂಜೆ ಗುಡುಗು ಸಹಿತ ಭಾರಿ ಮಳೆಯಿಂದ ಹಲವೆಡೆ ವಿದ್ಯುತ್ ಕಂಬಗಳು ಧರೆಗುರುಳಿದವು. ಸಿದ್ದಾಪುರ ಉಪಕೇಂದ್ರದ ವ್ಯಾಪ್ತಿಯಲ್ಲಿ 87 ಕಂಬಗಳು ನೆಲಕ್ಕುರಳಿದವು. ವಿದ್ಯುತ್ ಸಂಪರ್ಕ ಕಡಿತಗೊಂಡಿತು. ಕೆಲ ಕಡೆ ಮನೆಗಳ ಸಿಮೆಂಟ್ ಶೀಟು, ಹೆಂಚುಗಳಿಗೆ ಹಾನಿಯಾಗಿದೆ.

ಬೆಳೆ ಹಾಳು, ರಸ್ತೆಗುರುಳಿದ ಮರಗಳು

ಕಲಬುರಗಿ: ಜಿಲ್ಲೆಯ ಚಿತ್ತಾಪುರ, ಕಮಲಾಪುರ ತಾಲ್ಲೂಕಿನಲ್ಲಿ ಸುರಿದ ಬಿರುಗಾಳಿ ಸಹಿತ ಮಳೆಯಿಂದ ತೋಟಗಾರಿಕೆ ಬೆಳೆಗಳಿಗೆ ನಷ್ಟವಾಗಿದ್ದು, ಹೆದ್ದಾರಿಯಲ್ಲಿ ಮರ ಬಿದ್ದು ಕೆಲ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಾರಡಗಿಯಲ್ಲಿ ಬಿರುಗಾಳಿಯಿಂದ ಪಪ್ಪಾಯ ತೋಟ ಹಾಳಾಗಿದೆ. ರೈತ ಮನೋಹರ ಕುಲಕರ್ಣಿಯವರ ಎಂಟು ಎಕರೆ ತೋಟದಲ್ಲಿ ಹುಲುಸಾಗಿ ಬೆಳೆದಿದ್ದ ನೂರಾರು ಪಪ್ಪಾಯಿ ಗಿಡಗಳು ಸಂಪೂರ್ಣ ನೆಲಕಚ್ಚಿವೆ. ಗಿಡದ ತುಂಬಾ ತುಂಬಿಕೊಂಡಿದ್ದ ಪಪ್ಪಾಯಿ ಹಣ್ಣುಗಳ ಸಮೇತ ನೆಲಕ್ಕೆ ಬಿದ್ದಿದೆ.

ಕಮಲಾಪುರ ಪಟ್ಟಣದಲ್ಲಿ ಸಂಜೆ ಬೀಸಿದ ಮಳೆ ಸಹಿತ ಬಿರುಗಾಳಿಗೆ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಹತ್ತಾರು ಮರಗಳು ಧರೆಗುರುಳಿದ್ದು ಹಲವು ಗಂಟೆಗಳ ಕಾಲ ವಾಹನ ಸಂಚಾರಕ್ಕೆ ವ್ಯತ್ಯಯ ಉಂಟಾಯಿತು. ಗುರುದತ್ ಪೆಟ್ರೋಲ್ ಪಂಪ್, ಸಿಎನ್‌ಜಿ ಪಂಪ್ ಬಳಿ ನೀಲಗಿರಿ ಮರಗಳು ರಸ್ತೆಗೆ ಅಡ್ಡಲಾಗಿ ಉರುಳಿದ್ದವು. ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಉತ್ತರ ಪ್ರದೇಶ: 33 ಮಂದಿ ಸಾವು

ಭದೋಹಿ/ಫತೇಹಪುರ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಐದು ಜಿಲ್ಲೆಗಳಲ್ಲಿ ಬುಧವಾರ ಸುರಿದ ಭಾರಿ ಮಳೆ ಹಾಗೂ ಬಿರುಗಾಳಿಯಿಂದಾಗಿ ಸಂಭವಿಸಿದ ಅವಘಡಗಳಲ್ಲಿ ಕನಿಷ್ಠ 33 ಮಂದಿ ಮೃತಪಟ್ಟಿದ್ದಾರೆ.

ಭದೋಹಿ ಜಿಲ್ಲೆಯಲ್ಲಿ ಕನಿಷ್ಠ 16 ಮಂದಿ ಮೃತಪಟ್ಟಿದ್ದರೆ, ಫತೇಹಪುರ ಜಿಲ್ಲೆಯಲ್ಲಿ 9, ಬದೌನ್-5, ಚಂದೌಲಿ-2 ಹಾಗೂ ಸೋನಭದ್ರಾ ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈ ಜಿಲ್ಲೆಗಳಲ್ಲಿ ಮರಗಳು ಧರಾಶಾಹಿಯಾಗಿದ್ದರೆ, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ನೂರಾರು ಮನೆಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯೋಗ ದಿನ: ಆಯುಷ್ ಇಲಾಖೆಯಿಂದ ವಿವಿಧ ಕಾರ್ಯಕ್ರಮ ಆಯೋಜನೆ

‘25 ಲಕ್ಷ ಮಂದಿ ಯೋಗಾಭ್ಯಾಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಆಯುಷ್ ಇಲಾಖೆಯು ಜೂನ್ 21ರಂದು ರಾಜ್ಯದಾದ್ಯಂತ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ 25 ಲಕ್ಷ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಇಲಾಖೆ ಅಂದಾಜಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಯೋಗ ದಿನಾಚರಣೆಯ ಮುಖ್ಯ ಕಾರ್ಯಕ್ರಮ ವಿಧಾನಸೌಧದ ಆವರಣದಲ್ಲಿ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೆ ಸಚಿವರು, ಸಂಸದರು ಭಾಗವಹಿಸುತ್ತಾರೆ. ಕ್ರೀಡಾ ಸಾಧಕರು, ಚಲನಚಿತ್ರ ತಾರೆಯರಿಗೂ ಆಹ್ವಾನ ನೀಡಲಾಗುತ್ತದೆ. 7 ಗಂಟೆಯಿಂದ 7.45ರವರೆಗೆ ಯೋಗ ಪ್ರಾತ್ಯಕ್ಷಿಕೆ ನಡೆಯಲಿದೆ. ವಿಧಾನಸೌಧದ ಆವರಣದಲ್ಲಿ 5 ಸಾವಿರ ಮಂದಿ ಯೋಗಾಭ್ಯಾಸ ಮಾಡುತ್ತಾರೆ’ ಎಂದು ಹೇಳಿದರು.

‘ಯೋಗ ದಿನದಂದು ರಾಜ್ಯದಾದ್ಯಂತ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಾರ್ಯಕ್ರಮಗಳು ನಡೆಯಲಿದ್ದು, 10 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. 360 ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ‘ಗ್ರಾಮೀಣ ಯೋಗ’ ಕಾರ್ಯಕ್ರಮ ನಡೆಯಲಿದ್ದು, ಒಂದು ಲಕ್ಷ ಜನ ಯೋಗಾಭ್ಯಾಸ ಮಾಡಲಿದ್ದಾರೆ’ ಎಂದು ತಿಳಿಸಿದರು.

‘ಜೂನ್ ಮೊದಲ ವಾರ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ‘ವಿಜ್ಞಾನ ಯೋಗ’ ಎಂಬ ಕಾರ್ಯಕ್ರಮವನ್ನು ಆಯೋಜಿಸಿದ್ದು, 500 ವಿಜ್ಞಾನಿಗಳು ಭಾಗವಹಿಸುವ ನಿರೀಕ್ಷೆಯಿದೆ. ಜೂನ್ ಎರಡನೇ ವಾರದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ‘ಕಾರ್ಸಿನೊ ಯೋಗ’ ಹಮ್ಮಿಕೊಳ್ಳಲಾಗಿದೆ’ ಎಂದರು.

ವರ್ಷವಿಡೀ ಯೋಗಾಭ್ಯಾಸ: ‘ಈ ವರ್ಷ ‘ನಿತ್ಯ ಯೋಗ’ ಶೀರ್ಷಿಕೆಯಡಿ ಎಲ್ಲ ಆಯುಷ್ ಸಂಸ್ಥೆಗಳಲ್ಲಿ 365 ದಿನ ವಿಶೇಷ ಯೋಗ ಶಿಬಿರಗಳನ್ನು ಆಯೋಜಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಜೂನ್ ಎರಡನೇ ವಾರದಿಂದ ಜುಲೈ ಎರಡನೇ ವಾರದವರೆಗೆ ವಿದ್ಯಾರ್ಥಿ ಯೋಗ ಕಾರ್ಯಕ್ರಮ ನಡೆಯಲಿದ್ದು, 100 ಶಾಲೆಗಳಲ್ಲಿ ಯೋಗದ ವಿವಿಧ ಸ್ಪರ್ಧೆಗಳನ್ನು ನಡೆಸಲಾಗುತ್ತದೆ’ ಎಂದರು. ಆಯುಷ್ ಇಲಾಖೆ ಆಯುಕ್ತ ಸುನೀಲ್ ಪನ್ವಾರ್ ಉಪಸ್ಥಿತರಿದ್ದರು.

> **ಬದುಕಿನಲ್ಲಿ ಬದಲಾವಣೆ ತರುವ ಶಕ್ತಿ ಯೋಗಕ್ಕಿದ್ದು, ಆರೋಗ್ಯ ವೃದ್ಧಿಗೆ ಸಹಕಾರಿಯಾಗಿದೆ. ಆದ್ದರಿಂದ ಎಲ್ಲರೂ ನಿಯಮಿತವಾಗಿ ಯೋಗಾಭ್ಯಾಸ ಮಾಡಬೇಕು**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ವಿವಿಧ ಸ್ಪರ್ಧೆಗಳ ಆಯೋಜನೆ

ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಆಯುಷ್ ಇಲಾಖೆಯು 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ 12 ವಿಶೇಷ ರಾಷ್ಟ್ರೀಯ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ. ಯುವಜನರಿಗೆ ಯೋಗದ ಮಹತ್ವ ಸಾರಲು ಸಾಮಾಜಿಕ ಜಾಲತಾಣಗಳ ಮೂಲಕ ಸ್ಪರ್ಧೆ ನಡೆಸಲಾಗುತ್ತಿದ್ದು, ಇದರಲ್ಲಿ 1 ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ನಿರೀಕ್ಷೆಯಿದೆ. ಇದೇ ರೀತಿ, ಸರ್ಕಾರಿ ಶಾಲೆಗಳಲ್ಲಿ ಯೋಗ ರಸಪ್ರಶ್ನೆ, ಯೋಗ ರಂಗೋಲಿ, ಯೋಗ ಪ್ರಬಂಧ ಸ್ಪರ್ಧೆ, ಯೋಗ ಚಿತ್ರಪಟ, ಪತಂಜಲಿ ಯೋಗ ಸೂತ್ರ ಪಾರಾಯಣದಂತಹ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

‘ಮೈಸೂರು ಯೋಗ ಹಬ್’

‘ಮೈಸೂರನ್ನು ಯೋಗ ಜಿಲ್ಲೆಯೆಂದು ಘೋಷಿಸಬೇಕೆಂಬ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ₹1 ಕೋಟಿ ಅನುದಾನದಲ್ಲಿ ಯೋಗ ಜಿಲ್ಲೆಯನ್ನಾಗಿ ಪರಿವರ್ತಿಸಿ, ಮನೆ ಮನೆಗೆ ಯೋಗವನ್ನು ತಲುಪಿಸಲಾಗುತ್ತದೆ. ಬೇರೆ ಜಿಲ್ಲೆಗಳಿಗೂ ಯೋಗದ ಚಟುವಟಿಕೆಗಳನ್ನು ವಿಸ್ತರಿಸಲಾಗುತ್ತದೆ’ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ನಿಧನ ವಾರ್ತೆ

ಯಕ್ಷಗಾನ ಭಾಗವತ ಕಪ್ಪೆಕೆರೆ ಸುಬ್ರಾಯ ಹೆಗಡೆ



ಹೊನ್ನಾವರ (ಉತ್ತರ ಕನ್ನಡ): ಬಡಗುತಿಟ್ಟು ಯಕ್ಷಗಾನದ ಭಾಗವತ, ತಾಲ್ಲೂಕಿನ ಕಪ್ಪೆಕೆರೆಯ ಸುಬ್ರಾಯ ಈಶ್ವರ ಹೆಗಡೆ (79) ಬುಧವಾರ ನಿಧನರಾದರು. ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ಲಯಬ್ರಹ್ಮ ಎಂದೇ ಖ್ಯಾತರಾಗಿದ್ದ ಅವರು ಅದ್ಭುತ ತಾಳ, ಲಯದ ಭಾಗವತಿಕೆಯಿಂದ ಯಕ್ಷಗಾನದ ಮುಮ್ಮೇಳದ ಕಲಾವಿದರಿಗೆ ಅಚ್ಚುಮೆಚ್ಚಾಗಿದ್ದರು. ಗುಂಡಬಾಳ, ಇಡಗುಂಜಿ, ಅಮೃತೇಶ್ವರೀ, ಕಮಲಶಿಲೆ, ಸಾಲಿಗ್ರಾಮ, ಬಚ್ಚಗಾರು, ಪಂಚಲಿಂಗ ಮೇಳಗಳಲ್ಲಿ ಐದು ದಶಕ ಕಲಾಸೇವೆ ಮಾಡಿದ್ದರು. ಹೊನ್ನಾವರದ ಹೊಸಾಕುಳಿಯಲ್ಲಿ ತಾಳಮದ್ದಲೆಗಾಗಿಯೇ ಸ್ಥಾಪಿತ ಕಲಾವರ್ಧಕ ಸಂಘದಲ್ಲಿ ನಾಲ್ಕು ದಶಕಗಳಿಂದ ಭಾಗವತರಾಗಿದ್ದರು. ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪುರಸ್ಕಾರಗಳಿಗೆ ಪಾತ್ರರಾಗಿದ್ದರು. ಮಂಗಳೂರು ವಿಶ್ವವಿದ್ಯಾಲಯ ಈಚೆಗೆ ಯಕ್ಷಮಂಗಲ ಪ್ರಶಸ್ತಿ ಪ್ರದಾನ ಮಾಡಿತ್ತು.

ಉಳಿತಾಯ ಮತ್ತು ಹೂಡಿಕೆ ಮಾಡಿದಾಗಲೇ
ಹಣವು ಬೆಳೆಯುತ್ತಾ ಹೋಗುತ್ತದೆ
ಅನಾಮಿಕ

ದುಡ್ಡಿನಂಥಾ ಮಾತು

ಕ್ರೆಡಿಟ್ ವರದಿ: ಏನಿರುತ್ತದೆ, ಅದರ ಅರ್ಥ ಏನು?

ಕಲೆ: ಸಂತೋಷ್ ಸಸಿಹಿತ್ಲು

• ಭೂಷಣ್ ಪಡ್ಕಿಲ್

ಕ್ರೆಡಿಟ್ ಅಂಕವನ್ನು ಹಲವರು ಆಗಾಗ ಪರಿಶೀಲಿಸುತ್ತಾರಾದರೂ, ಕ್ರೆಡಿಟ್ ವರದಿಯನ್ನು ಸಮಗ್ರವಾಗಿ ಓದುವವರ ಸಂಖ್ಯೆ ಕಡಿಮೆ. ಅದನ್ನು ಓದುವುದರ ಅಗತ್ಯ ಎಷ್ಟಿದೆ, ಅದರ ಮಹತ್ವ ಏನು ಎಂಬುದರ ವಿವರ ಇಲ್ಲಿದೆ

ಹಣಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಬಹುತೇಕ ಕುಟುಂಬಗಳಲ್ಲಿ ಬಹಳ ಎಚ್ಚರಿಕೆಯಿಂದಲೇ ತೆಗೆದು ಕೊಳ್ಳಲಾಗುತ್ತದೆ. ಮನೆ ಖರೀದಿ, ಮಕ್ಕಳ ಶಿಕ್ಷಣ, ಉದ್ದಿಮೆ ವಿಸ್ತರಿಸುವ ಯೋಜನೆಗೆ ಸಾಲ ಬೇಕಾದಾಗಲೆಲ್ಲ ಬಹಳ ಅಗತ್ಯವಾಗಿ ಪರಿಗಣನೆಗೆ ಬರುವುದು ಸಾಲ ಕೋರುವ ವ್ಯಕ್ತಿಯ ಕ್ರೆಡಿಟ್ ವಿವರ. ಆ ವ್ಯಕ್ತಿಯ ಕ್ರೆಡಿಟ್ ವರದಿಯು ಈ ವಿವರನ್ನು ಹೊಂದಿರುತ್ತದೆ.

ಕ್ರೆಡಿಟ್ ಸ್ಕೋರ್ ಅಥವಾ ಕ್ರೆಡಿಟ್ ಅಂಕ ಎಂಬ ಪದವನ್ನು ಬಹುತೇಕರು ಕೇಳಿರುತ್ತಾರೆ. ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಕುರಿತ ಮಾತುಗಳ ಸಂದರ್ಭದಲ್ಲಿ ಇದರ ಉಲ್ಲೇಖ ಆಗಿರುತ್ತದೆ. ಕ್ರೆಡಿಟ್ ಅಂಕವನ್ನು ಹೇಳುವ ವರದಿಯು ವಿಸ್ತೃತವಾದ ವಿವರಗಳನ್ನು ಒಳಗೊಂಡಿರುತ್ತದೆ. ಈ ವರದಿಯು ವ್ಯಕ್ತಿಯ ಕ್ರೆಡಿಟ್ ಚಿತ್ರಣವನ್ನು ಒಳಗೊಂಡಿರುತ್ತದೆ, ವ್ಯಕ್ತಿಯು ಪಡೆದ ಸಾಲಗಳ ವಿವರವು ಹಣಕಾಸು ವ್ಯವಸ್ಥೆಯಲ್ಲಿ ಹೇಗೆ ದಾಖಲಾಗಿರುತ್ತದೆ ಎಂಬುದನ್ನು ತಿಳಿಸುತ್ತದೆ.

ಕ್ರೆಡಿಟ್ ವರದಿಯು ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಮಾತ್ರ ಆಸಕ್ತಿ ಮೂಡಿಸುವಂಥದ್ದಲ್ಲ. ಈ ವರದಿಯು ವ್ಯಕ್ತಿಗೆ ತನ್ನ ಹಣಕಾಸಿನ ಇತಿಹಾಸದ ಬಗ್ಗೆ ಹೆಚ್ಚು ತಿಳಿದುಕೊಳ್ಳಲಿಕ್ಕೂ ಸಹಾಯ ಮಾಡುತ್ತದೆ. ವರದಿಯಲ್ಲಿ ಏನಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಂಡ ನಂತರದಲ್ಲಿ ಅದನ್ನು ಓದುವುದು ಸುಲಭವಾಗುತ್ತದೆ. ಅಲ್ಲದೆ, ಆ ವರದಿಯನ್ನು ಹಣಕಾಸಿನ ಯೋಜನೆಗಳನ್ನು ಸಿದ್ಧಪಡಿಸುವಾಗ ಬಳಸಿಕೊಳ್ಳುವುದಕ್ಕೂ ಆಗುತ್ತದೆ.

ಅಂಕದ ಹಿಂದಿನ ಕತೆ: ಕ್ರೆಡಿಟ್ ಅಂಕವು ವ್ಯಕ್ತಿಯ ಸಾಲದ ಚಿತ್ರಣವನ್ನು ಮೂರು ಅಂಕಿಗಳಲ್ಲಿ ಹೇಳುತ್ತದೆ. ಸಾಲಕ್ಕಾಗಿ ವ್ಯಕ್ತಿಯೊಬ್ಬ ಅರ್ಜಿ ಸಲ್ಲಿಸಿದಾಗ ಹಣಕಾಸು ಸಂಸ್ಥೆಗಳು ಅರ್ಜಿಯನ್ನು ಪರಿಶೀಲಿಸುವ ಸಂದರ್ಭದಲ್ಲಿ ಈ ಅಂಕವನ್ನು ಕೂಡ ಪರಿಗಣಿಸುತ್ತವೆ. ಆದರೆ ಅಂಕವು ಎಲ್ಲವನ್ನೂ ಹೇಳುವುದಿಲ್ಲ. ವ್ಯಕ್ತಿಯ ಸಾಲಗಳಿಗೆ ಸಂಬಂಧಿಸಿದ ವಿವರಗಳು ವರದಿಯಲ್ಲಿ ಅಡಕವಾಗಿರುತ್ತವೆ. ವ್ಯಕ್ತಿ ಪಡೆದಿರುವ ಸಾಲದ ಖಾತೆಗಳ ವಿವರ, ಸಾಲದ ಮರುಪಾವತಿ ಹೇಗಿತ್ತು ಎಂಬುದರ ವಿವರ, ವ್ಯಕ್ತಿಯ ಕೆಲವು ವೈಯಕ್ತಿಕ ವಿವರಗಳು, ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಆತ ಎಲ್ಲೆಲ್ಲಿ ವಿಚಾರಿಸಿದ್ದ ಎಂಬುದರ ವಿವರಗಳು ವರದಿಯಲ್ಲಿರುತ್ತವೆ. ಚುಟುಕಾಗಿ ಹೇಳಬೇಕು ಎಂದಾದರೆ, ಕ್ರೆಡಿಟ್ ವರದಿಯು ಪೂರ್ಣ ಚಿತ್ರಣ ನೀಡುತ್ತದೆ, ಕ್ರೆಡಿಟ್ ಅಂಕವು ಆ ಪೂರ್ಣ ಚಿತ್ರಣದ ಒಂದು ನೋಟವನ್ನು ಮಾತ್ರ ಒದಗಿಸುತ್ತದೆ.

ಹೀಗಾಗಿ ವ್ಯಕ್ತಿಗಳು ತಮ್ಮ ಕ್ರೆಡಿಟ್ ಅಂಕವನ್ನು ಗಮನಿಸುವುದು ಮಾತ್ರವಲ್ಲದೆ, ಕ್ರೆಡಿಟ್ ವರದಿಯನ್ನು ಕೂಡ ಓದಿ ಅರ್ಥ ಮಾಡಿಕೊಳ್ಳಬೇಕು. ಹಣಕಾಸು ಸಂಸ್ಥೆಗಳು ವ್ಯಕ್ತಿಯ ಸಾಲಗಳ ಬಗ್ಗೆ ಯಾವ ಬಗೆಯಲ್ಲಿ ವಿವರ ಒದಗಿಸಿವೆ, ದಾಖಲೆಗಳಲ್ಲಿ ಅದು ಹೇಗೆ ಕಾಣಿಸುತ್ತಿದೆ ಎಂಬುದನ್ನು ವರದಿಯು ಒಳಗೊಂಡಿರು-ತ್ತದೆ.

ಕ್ರೆಡಿಟ್ ವರದಿಯಲ್ಲಿ ಮೊದಲ ಭಾಗವು ವ್ಯಕ್ತಿಯ ವೈಯಕ್ತಿಕ ವಿವರಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿಯ ಹೆಸರು, ಜನ್ಮ ದಿನಾಂಕ, ಪ್ಯಾನ್ ವಿವರ, ಪಾಸ್‌ಪೋರ್ಟ್ ಅಥವಾ ಮತದಾರರ ಚೀಟಿಯ ವಿವರಗಳು ಅದರಲ್ಲಿ ಇರಬಹುದು. ವ್ಯಕ್ತಿಯ ಸಂಪರ್ಕ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ವಿಳಾಸವನ್ನೂ ಅದು ಒಳಗೊಂಡಿರಬಹುದು.

ಇವೆಲ್ಲ ಬಹಳ ಮೂಲಭೂತವಾದ ವಿವರಗಳು ಅನ್ನಿಸಬಹುದು. ಆದರೆ ಇವು ಮುಖ್ಯ ಪಾತ್ರ ವಹಿಸುತ್ತವೆ. ವರದಿಯು ಸಂಬಂಧಪಟ್ಟ ವ್ಯಕ್ತಿಗೇ ಸೇರಿದ್ದು, ಆತನ ವಿವರಗಳು ಅದರಲ್ಲಿ ಸರಿಯಾಗಿ ದಾಖಲಾಗಿವೆ ಎಂಬುದನ್ನು ಇವು ತಿಳಿಸುತ್ತವೆ. ವ್ಯಕ್ತಿಯ ವೈಯಕ್ತಿಕ ವಿವರಗಳು ಸರಿಯಾಗಿ ನಮೂದಾಗಿದ್ದರೆ, ಸಾಲ ನೀಡುವ ಸಂಸ್ಥೆಗಳಿಗೆ ವ್ಯಕ್ತಿಯ ವಿವರಗಳನ್ನು ಪರಿಶೀಲಿಸುವುದು, ಆತನ ಸಾಲದ ಇತಿಹಾಸವನ್ನು ಗಮನಿಸುವುದು ಸುಲಭವಾಗುತ್ತದೆ.

ಸಾಲದ ವಿವರಗಳು: ಖಾತೆ ಕುರಿತ ಮಾಹಿತಿ ಇರುವ ಭಾಗವು ಕ್ರೆಡಿಟ್ ವರದಿಯ ಕೇಂದ್ರವಿದ್ದಂತೆ. ಈ ಭಾಗದಲ್ಲಿ ವ್ಯಕ್ತಿಯ ಸಾಲದ ಖಾತೆಗಳ ವಿವರ, ಕ್ರೆಡಿಟ್ ಕಾರ್ಡ್‌ಗಳ ಕುರಿತ ವಿವರವು ಇರುತ್ತದೆ. ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳು ವ್ಯಕ್ತಿಯ ಸಾಲ ಮತ್ತು ಕ್ರೆಡಿಟ್ ಕಾರ್ಡ್‌ಗಳ ಕುರಿತಾಗಿ ಯಾವ ರೀತಿಯಲ್ಲಿ ವಿವರ ಒದಗಿಸುತ್ತವೆಯೋ ಅದಕ್ಕೆ ಅನುಗುಣವಾಗಿ ವಿವರಗಳು ಇಲ್ಲಿ ದಾಖಲಾಗಿರುತ್ತವೆ.

ಸಾಲ ನೀಡಿದ ಸಂಸ್ಥೆಯ ಹೆಸರು, ಸಾಲ ಯಾವ ಬಗೆಯದ್ದು, ಸಾಲದ ಖಾತೆ ತೆರೆದ ದಿನಾಂಕ, ಸಾಲದ ಮೊತ್ತ ಅಥವಾ ಕ್ರೆಡಿಟ್ ಮಿತಿ, ಈಗ ಉಳಿದಿರುವ ಸಾಲ, ಸಾಲದ ಖಾತೆ ಚಾಲ್ತಿಯಲ್ಲಿದೆಯೋ ಅಥವಾ ಅದನ್ನು ಮುಚ್ಚಲಾಗಿದೆಯೋ ಎಂಬ ವಿವರಗಳು ಇಲ್ಲಿ ಇರುತ್ತವೆ. ಗೃಹಸಾಲ, ವಾಹನ ಸಾಲ, ವೈಯಕ್ತಿಕ ಸಾಲ, ಚಿನ್ನಾಭರಣ ಸಾಲ, ಶೈಕ್ಷಣಿಕ ಸಾಲ, ಕ್ರೆಡಿಟ್ ಕಾರ್ಡ್ ವಿವರಗಳು ಇಲ್ಲಿರಬಹುದು.

ವ್ಯಕ್ತಿಯು ಪಡೆದ ಸಾಲಗಳ ವಿವರಗಳೆಲ್ಲ ಹೇಗೆ ದಾಖಲಾಗಿವೆ ಎಂಬುದನ್ನು ಇದು ತಿಳಿಸುತ್ತದೆ. ಯಾವ ಬಗೆಯ ಸಾಲದ ಉತ್ಪನ್ನಗಳು ವ್ಯಕ್ತಿಯ ಹೆಸರಿನೊಂದಿಗೆ ಬೆಸೆದುಕೊಂಡಿವೆ ಎಂಬುದು ಇಲ್ಲಿ ಗೊತ್ತಾಗುತ್ತದೆ. ಅಲ್ಲದೆ, ಹಿಂದಿನ ಹಾಗೂ ಈಗಿನ ಸಾಲದ ಬಾಧ್ಯತೆಗಳು ಎಷ್ಟಿವೆ ಎಂಬುದು ಇಲ್ಲಿ ತಿಳಿಯುತ್ತದೆ.

ಮರುಪಾವತಿ ಇತಿಹಾಸ ಮತ್ತು ಶಿಸ್ತು: ಸಾಲದ ಖಾತೆಗಳು ಹಾಗೂ ಅದಕ್ಕೆ ಸಂಬಂಧಿಸಿದಂತೆ ಇರುವ ಮರುಪಾವತಿ ಇತಿಹಾಸವು ಕ್ರೆಡಿಟ್ ವರದಿಯ ಬಹುಮುಖ್ಯ ಭಾಗಗಳಲ್ಲಿ ಒಂದು. ಎಲ್ಲ ಸಾಲಗಳ ಮರುಪಾವತಿ ಸರಿಯಾದ ಸಮಯದಲ್ಲಿ ಆಗಿದೆಯೇ ಎಂಬುದನ್ನು ಇದು ತಿಳಿಸುತ್ತದೆ. ವ್ಯಕ್ತಿಯೊಬ್ಬ ಸಾಲ ಪಡೆಯಲು ಅರ್ಹನೇ ಎಂಬುದನ್ನು ತೀರ್ಮಾನಿಸುವಾಗ ಸಾಲದಾತ ಸಂಸ್ಥೆಗಳಿಗೆ ಮರುಪಾವತಿ ಇತಿಹಾಸವು ಬಹುಮುಖ್ಯ ಸೂಚಕವಾಗಿ ಕೆಲಸ ಮಾಡುತ್ತದೆ. ವ್ಯಕ್ತಿಗೆ ಇದು ಆತ ಪಾಲಿಸಿಕೊಂಡು ಬಂದಿರುವ ಹಣಕಾಸಿನ ಶಿಸ್ತಿನ ಮಟ್ಟವನ್ನು ತಿಳಿಸುತ್ತದೆ.

ವ್ಯಕ್ತಿಯು ಸಮಯಕ್ಕೆ ಸರಿಯಾಗಿ ಸಾಲದ ಕಂತುಗಳನ್ನು ಪಾವತಿಸುತ್ತಿದ್ದರೆ, ಅದನ್ನು ಕ್ರೆಡಿಟ್ ವರದಿಯು ದಾಖಲಿಸುತ್ತದೆ. ಹೀಗಾಗಿಯೇ ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಬಹಳ ಮುಖ್ಯವಾಗುತ್ತದೆ. ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುವುದು ಸದ್ಯದ ಹಣಕಾಸಿನ ಹೊಣೆಗಳನ್ನು ನಿಭಾಯಿಸಲು ನೆರವಾಗುವುದಷ್ಟೇ ಅಲ್ಲದೆ, ದೀರ್ಘಾವಧಿಯಲ್ಲಿ ಉತ್ತಮ ಕ್ರೆಡಿಟ್ ಚಿತ್ರಣವನ್ನು ಹೊಂದಲು ನೆರವಾಗುತ್ತದೆ.

ಸಾಲಕ್ಕಾಗಿ ವ್ಯಕ್ತಿಯು ಕೋರಿಕೆ ಸಲ್ಲಿಸಿದ ವಿವರಗಳನ್ನು ದಾಖಲಿಸುವ ವಿಭಾಗವು ವರದಿಯ ಇನ್ನೊಂದು ಮುಖ್ಯ ಅಂಶ. ವ್ಯಕ್ತಿಯು ಸಾಲಕ್ಕಾಗಿ ಅಥವಾ ಕ್ರೆಡಿಟ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದಾಗ, ಹಣಕಾಸು ಸಂಸ್ಥೆಯು ಆ ವ್ಯಕ್ತಿಯ ಕ್ರೆಡಿಟ್ ವರದಿಯನ್ನು ಪಡೆದುಕೊಂಡಿದ್ದರ ವಿವರಗಳು ಇಲ್ಲಿ ದಾಖಲಾಗಿರುತ್ತವೆ.

ವ್ಯಕ್ತಿಯು ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಹಣಕಾಸು ಸಂಸ್ಥೆಗಳು ಆ ವ್ಯಕ್ತಿಯ ಕ್ರೆಡಿಟ್ ಇತಿಹಾಸವನ್ನು ಅವಲೋಕಿಸಬಹುದು. ಅದು ವರದಿಯಲ್ಲಿ ದಾಖಲಾಗಬಹುದು. ಈ ವಿಭಾಗವು ವ್ಯಕ್ತಿಯು ಈಚೆಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದರ ವಿವರಗಳನ್ನು ಒಳಗೊಂಡಿರುತ್ತದೆ.

ಲೇಖಕ ಟ್ರಾನ್ಸ್‌ಯೂನಿಯನ್ ಸಿಬಿಲ್‌ನ ಹಿರಿಯ ಉಪಾಧ್ಯಕ್ಷ

ಹಣಕಾಸಿನ ಜಾಗೃತಿಗೆ ಬೇಕು ವರದಿ

ಜನರು ಸಾಮಾನ್ಯವಾಗಿ ತಮ್ಮ ಬ್ಯಾಂಕ್ ಪಾಸ್ ಪುಸ್ತಕದ ವಿವರಗಳನ್ನು, ವಿಮೆಯ ದಾಖಲೆಗಳನ್ನು, ಹೂಡಿಕೆಯ ದಾಖಲೆಗಳನ್ನು ಕಾಲಕಾಲಕ್ಕೆ ಪರಿಶೀಲಿಸುತ್ತ ಇರುತ್ತಾರೆ. ಅದೇ ಬಗೆಯಲ್ಲಿ ಅವರು ತಮ್ಮ ಕ್ರೆಡಿಟ್ ವರದಿಗಳನ್ನು ಕೂಡ ಪರಿಶೀಲಿಸಬೇಕು. ಹೀಗೆ ಪರಿಶೀಲಿಸುವುದರಿಂದ ವ್ಯಕ್ತಿ ತನ್ನ ಕ್ರೆಡಿಟ್ ಚಿತ್ರಣವನ್ನು ಅರಿಯಲು ಹಾಗೂ ತನ್ನ ಹಣಕಾಸಿನ ವಹಿವಾಟುಗಳು ಹೇಗೆ ದಾಖಲಾಗಿವೆ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ.

ಕ್ರೆಡಿಟ್ ವರದಿಯನ್ನು ಕಾಲಕಾಲಕ್ಕೆ ಪರಿಶೀಲಿಸುತ್ತ ಇರುವುದು ಪ್ರಯೋಜನಕಾರಿ ಆಗಬಹುದು. ಇದು ವ್ಯಕ್ತಿಗೆ ಆತನ ಸಾಲಗಳ ಕುರಿತ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಹೊಸದಾಗಿ, ತೀರಾ ಅಗತ್ಯವಾದ ಸಾಲಕ್ಕೆ ಅರ್ಜಿ ಸಲ್ಲಿಸುವ ಮೊದಲು ಬೇಕಿರುವ ತಯಾರಿಗಳನ್ನು ಮಾಡಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಹಣಕಾಸು ವ್ಯವಸ್ಥೆಯ ಜೊತೆ ಮಾತುಕತೆ ನಡೆಸಲು ಅಗತ್ಯವಿರುವ ವಿಶ್ವಾಸವನ್ನು ಇದು ಮೂಡಿಸುತ್ತದೆ.

ನಗರಗಳು, ಪಟ್ಟಣಗಳು, ಸಣ್ಣ ಹಳ್ಳಿಗಳ ಜನರು ಹಣಕಾಸು ವ್ಯವಸ್ಥೆಯಿಂದ ಸಾಲ ಪಡೆಯುವುದು ಹೆಚ್ಚುತ್ತಿರುವ ಹೊತ್ತಿನಲ್ಲಿ ಕ್ರೆಡಿಟ್ ವರದಿಯನ್ನು ಓದುವುದು ಕೂಡ ಮುಖ್ಯ.

ಕ್ರೆಡಿಟ್ ವರದಿ ಎಂಬುದು ವೈಯಕ್ತಿಕ ಹಣಕಾಸು ದಾಖಲೆ. ಇದು ವ್ಯಕ್ತಿಯ ಸಾಲದ ಸಮಗ್ರ ವಿವರವನ್ನು ಒಂದೆಡೆ ಕಲೆಹಾಕುತ್ತದೆ. ಸಾಲ ನೀಡುವ ವ್ಯವಸ್ಥೆಯಲ್ಲಿ ವ್ಯಕ್ತಿಯೊಬ್ಬನನ್ನು ಹೇಗೆ ಗುರುತಿಸಲಾಗಿದೆ, ಆತ ಯಾವೆಲ್ಲ ಸಾಲಗಳನ್ನು ಪಡೆದಿದ್ದಾನೆ, ಅದನ್ನು ಹೇಗೆ ನಿರ್ವಹಿಸಿದ್ದಾನೆ ಎಂಬುದನ್ನು ಅದು ಹೇಳುತ್ತದೆ.

ಕೆಲವರಿಗೆ ಇದು ಹೊಸ ಸಾಲಕ್ಕೆ ಅರ್ಜಿ ಸಲ್ಲಿಸುವ ಮೊದಲು ಪರಿಶೀಲಿಸಬೇಕಾದ ದಾಖಲೆ. ಇನ್ನು ಕೆಲವರಿಗೆ ಇದು ಹಣಕಾಸಿನ ವಿಚಾರದಲ್ಲಿ ಶಿಸ್ತು ಪಾಲಿಸಲು ಯಾವಾಗಲೂ ಬೇಕಿರುವ ದಾಖಲೆ. ವರದಿಯನ್ನು ಈ ಎರಡೂ ಬಗೆಗಳಲ್ಲಿ ಕಂಡರೂ, ಅದನ್ನು ಓದುವ ಕೆಲಸ ಮಹತ್ವದ್ದೇ ಆಗಿರುತ್ತದೆ.

ವೈಯಕ್ತಿಕ ಹಣಕಾಸಿನ ವಿಚಾರಗಳಲ್ಲಿ ಸ್ಪಷ್ಟತೆಯು ಆತ್ಮವಿಶ್ವಾಸಕ್ಕೆ ದಾರಿ ಮಾಡಿಕೊಡುತ್ತದೆ. ಕ್ರೆಡಿಟ್ ವರದಿಯಲ್ಲಿ ಇರುವುದು ಏನು ಎಂಬುದು ಸ್ಪಷ್ಟವಾದಾಗ, ಮಾಹಿತಿ ಪೂರ್ಣವಾದ ತೀರ್ಮಾನಗಳನ್ನು ತೆಗೆದುಕೊಳ್ಳಲು ಆಗುತ್ತದೆ. ಈ ಅರಿವು ಮುಂದಿನ ಹಣಕಾಸಿನ ಮೈಲಿಗಲ್ಲುಗಳನ್ನು ಹೆಚ್ಚಿನ ಸಿದ್ಧತೆಯೊಂದಿಗೆ ದಾಟುವಲ್ಲಿ ನೆರವಾಗುತ್ತದೆ. ಹೀಗಾಗಿ ಕ್ರೆಡಿಟ್ ವರದಿಯು ಅಂಕಪಟ್ಟಿಗಿಂತ ಹೆಚ್ಚಿನದು.

ಸಾಂಪ್ರದಾಯಿಕ ಹೂಡಿಕೆಯಲ್ಲಿ ಒಲವು

ಷೇರುಪೇಟೆ ಹೂಡಿಕೆ ಉತ್ಪನ್ನಕ್ಕಿಂತಲೂ, ಸಾಂಪ್ರದಾಯಿಕ ಹೂಡಿಕೆ ಉತ್ಪನ್ನಗಳತ್ತ ನಗರ ಮತ್ತು ಗ್ರಾಮೀಣ ಭಾಗದ ಕುಟುಂಬಗಳಿಗೆ ಹೆಚ್ಚಿನ ಒಲವಿದೆ.

ಷೇರುಪೇಟೆಯ ಒಂದಾದರೂ ಹೂಡಿಕೆ ಉತ್ಪನ್ನದ ಬಗ್ಗೆ ದೇಶದಲ್ಲಿನ ಶೇ 63ರಷ್ಟು ಕುಟುಂಬಗಳಿಗೆ ಅರಿವು ಇದೆ. ಈ ಪೈಕಿ ನಗರ ಪ್ರದೇಶದಲ್ಲಿನ ಶೇ 74ರಷ್ಟು ಕುಟುಂಬಗಳಿಗೆ ಅರಿವು ಇದ್ದರೆ, ಗ್ರಾಮೀಣ ಭಾಗದಲ್ಲಿನ ಶೇ 56ರಷ್ಟು ಕುಟುಂಬಗಳಿಗೆ ಮಾತ್ರ ಮಾಹಿತಿ ಇದೆ.

ಆದರೆ, ಬ್ಯಾಂಕ್ ಅಥವಾ ಅಂಚೆ ಕಚೇರಿಗಳ ನಿಶ್ಚಿತ ಠೇವಣಿ, ಆರ್‌.ಡಿ ಬಗ್ಗೆ ಒಟ್ಟಾರೆ ಶೇ 98ರಷ್ಟು ಕುಟುಂಬಗಳಿಗೆ ತಿಳಿದಿದೆ. ಈ ಪೈಕಿ ನಗರ ಪ್ರದೇಶದಲ್ಲಿನ ಕುಟುಂಬಗಳಿಗೆ ಶೇ 99ರಷ್ಟು ಮತ್ತು ಗ್ರಾಮೀಣ ಭಾಗದ ಶೇ 98ರಷ್ಟು ಕುಟುಂಬಗಳಿಗೆ ಅರಿವು ಇದೆ.

ನಗರ ಪ್ರದೇಶದಲ್ಲಿನ ಕುಟುಂಬಗಳಿಗಿಂತ ಗ್ರಾಮೀಣ ಪ್ರದೇಶದಲ್ಲಿನ ಕುಟುಂಬಗಳಿಗೆ ಅಂಚೆ ಕಚೇರಿಯ ಉಳಿತಾಯ ಖಾತೆ, ಕಿಸಾನ್ ವಿಕಾಸ್ ಪತ್ರ (ಕೆವಿಪಿ) ಮತ್ತು ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (ಎನ್‌ಎಸ್‌ಸಿ) ಬಗ್ಗೆ ಹೆಚ್ಚಿನ ಒಲವಿದೆ.

ಕರ್ನಾಟಕಕ್ಕೆ ಎರಡನೇ ಸ್ಥಾನ: ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿನ ಶೇ 72ರಷ್ಟು ಕುಟುಂಬಗಳಿಗೆ ಷೇರುಪೇಟೆಯ ಉತ್ಪನ್ನದ ಬಗ್ಗೆ ಅರಿವಿದ್ದು, ಎರಡನೇ ಸ್ಥಾನದಲ್ಲಿದೆ. ತಮಿಳುನಾಡು ಅಗ್ರಸ್ಥಾನದಲ್ಲಿದ್ದು, ಶೇ 76ರಷ್ಟಿದೆ. ಕೇರಳದಲ್ಲಿ ಶೇ 69, ತೆಲಂಗಾಣ ಶೇ 68 ಮತ್ತು ಆಂಧ್ರ ಪ್ರದೇಶದಲ್ಲಿ ಶೇ 50ರಷ್ಟಿದೆ.

ಕೇಂದ್ರಾಡಳಿತ ಪ್ರದೇಶಗಳ ಪೈಕಿ ಚಂಡೀಗಢದಲ್ಲಿನ ಶೇ 100ರಷ್ಟು ಕುಟುಂಬಗಳಿಗೆ ಅರಿವು ಇದೆ. ರಾಜ್ಯಗಳ ಪೈಕಿ ಪಶ್ಚಿಮ ಬಂಗಾಳದಲ್ಲಿ ಶೇ 78ರಷ್ಟು ಇದ್ದು, ಅಗ್ರಸ್ಥಾನದಲ್ಲಿದೆ. ನಾಗಲ್ಯಾಂಡ್‌ನಲ್ಲಿ ಅತಿ ಕಡಿಮೆ ಶೇ 35ರಷ್ಟಿದೆ.

ನಗರ ಮತ್ತು ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಉತ್ಪನ್ನದ ಅರಿವು (ಶೇಕಡವಾರು)

ಉತ್ಪನ್ನಗಳು	ಒಟ್ಟಾರೆ ಅರಿವು	ನಗರ	ಗ್ರಾಮೀಣ
* ಉತ್ಪನ್ನಗಳು	63	74	56
ಮ್ಯೂಚುವಲ್ ಫಂಡ್‌ಗಳು	53	65	45
ಷೇರುಗಳು	49	61	42
ಫ್ಯೂಚರ್ ಆ್ಯಂಡ್ ಆಪ್ಷನ್ಸ್	13	21	7
ಆರ್‌ಇಐಟಿಎಸ್/ಇನ್ವಿಟ್ಸ್	10	13	7
ಕಾರ್ಪೊರೇಟ್ ಸಾಲಪತ್ರಗಳು	10	15	7
ಪರ್ಯಾಯ ಹೂಡಿಕೆ ನಿಧಿ	6	9	5
** ನಿಶ್ಚಿತ ಠೇವಣಿ/ಆರ್‌.ಡಿ	98	99	98
ವಿಮೆ/ಜೀವ ವಿಮೆ	95	97	93
ಅಂಚೆ ಉಳಿತಾಯ ಖಾತೆ/ಕೆವಿಪಿ/ಎನ್‌ಎಸ್‌ಸಿ	75	74	76
ಚಿನ್ನ ಭೌತಿಕ ರೂಪದಲ್ಲಿ / ಸಾವರಿನ್ ಗೋಲ್ಡ್ ಬಾಂಡ್	74	79	70
ರಿಯಲ್ ಎಸ್ಟೇಟ್ ಹೂಡಿಕೆ	46	56	39
ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ	31	35	29
ಚಿಟ್ ಫಂಡ್	31	39	25
ಸಾರ್ವಜನಿಕ ಹೂಡಿಕೆ ನಿಧಿ (ಪಿಪಿಎಫ್)	27	39	18
ಇಪಿಎಫ್/ವಿಪಿಎಫ್	25	31	20
ಕ್ರಿಪ್ಟೋಕರೆನ್ಸಿ	15	20	12

* ಷೇರುಪೇಟೆಯ ಹೂಡಿಕೆ ಉತ್ಪನ್ನಗಳು. ** ಸಾಂಪ್ರದಾಯಿಕ ಹೂಡಿಕೆ ಉತ್ಪನ್ನಗಳು

ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್

ಬ್ರೋಕರೇಜ್ ಮಾತು

ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್ ಷೇರಿನ ಬೆಲೆ ₹1,980 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಎಕ್ಸಿಸ್ ಮ್ಯಾಕ್ಸ್ ಲೈಫ್ ಇನ್ಶೂರೆನ್ಸ್‌ನಲ್ಲಿ (ಮ್ಯಾಕ್ಸ್‌ಲೈಫ್) ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್ ಮತ್ತು ಎಕ್ಸಿಸ್ ಬ್ಯಾಂಕ್ ಜಂಟಿ ಪಾಲುದಾರಿಕೆ ಹೊಂದಿವೆ.

ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾ-ಸಿಕದಲ್ಲಿ ಎಕ್ಸಿಸ್ ಮ್ಯಾಕ್ಸ್ ಲೈಫ್ ಇನ್ಶೂರೆನ್ಸ್‌ನ ಕಾರ್ಯಾಚರಣೆ ಉತ್ತಮವಾಗಿದ್ದು, ಎಪಿಇ ಶೇ 18ರಷ್ಟು ಹೆಚ್ಚಳವಾಗಿ ₹3,590 ಕೋಟಿಯಷ್ಟಾಗಿದೆ. ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಎಪಿಇ ಶೇ 20ರಷ್ಟು ಬೆಳವಣಿಗೆ ದಾಖಲಿಸಿದೆ.

ಕಂಪನಿಯ ಹೊಸ ವ್ಯವಹಾರ ಮೌಲ್ಯವು (ವಿಎನ್‌ಬಿ) ಶೇ 19ರಷ್ಟು ಏರಿಕೆಯಾಗಿದ್ದು, ₹1,010 ಕೋಟಿಯಷ್ಟಾಗಿದೆ. ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಇದು ಶೇ 26ರಷ್ಟು ಹೆಚ್ಚಳವಾಗಿದ್ದು, ₹2,650 ಕೋಟಿಯಷ್ಟಾಗಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್‌ನ ಷೇರಿನ ಬೆಲೆ ₹1,598.55 ಆಗಿದೆ.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-1 Prose : A Hero

30. How was Swami honoured by his classmates, teacher and headmaster?

Ans: Congratulations were showered on Swami. His classmates looked him with respect and teacher patted his back. The headmaster said he is a true scout. (The Police Inspector invited him to join the police.)

31. Why did father want Swami to sleep alone in the office room?

Ans: Swami's father wanted him sleep alone in the office room to prove that he is a courageous boy as despite being in second form, he was habituated to sleep beside his granny. Father wanted him become independent person.

32. Who do you think was wiser, Swami or his father? Justify your preference.

Ans: Swami's father was wiser as he used a comment by Swami about a news report to improve his personality by showing courage of sleeping alone in office room and make him independent person.

33. Why did Swami feel relieved at the end?

Ans: Swami's father wanted him to continue sleep independently without being at granny's side. But clever Swami slept beside granny before father returned home. Swami's mother expressed anger at his father for not letting him sleep wherever he likes and asked him not to risk Swami's life again.

34. Suppose you are the Swami of the story. Write a brief letter to your friend describing how you helped to catch a burglar in your house

Ans:

My Dear ………..

Hope you are doing fine and have received my last mail.? I am eagerly waiting for your reply. Meanwhile something exciting happened with me and hence this mail.

My father and I had a difference of opinion on the news report as to whether courage or strength is important to fight a tiger. I said it is strength and my father said that it is courage. Then he challenged me to sleep alone in the office room without even a light and with the door closed to prove my courage. I had a nightmare, then in the dark I saw some creature approaching me. I held it tightly and bit it with such a force that it screamed with pain. Everyone at home rushed to see what happened. To my astonishment you know what, I had helped the police in catching one of the most notorious house-breakers of the district. The Next day, after I got up, I was showered with congratulations. The headmaster called me a true scout and police inspector invited me to join the police! I am happy that I have proved my courage.

Please reply soon to both the mails.

Thank you

Yours sincerely

……………...

35. Some words describing the characters of the story 'A Hero' are given in brackets: (Caring, protective, innocent, tricky, authoritative, disciplined, helpless, and nervous). Put them in appropriate columns

Swami's father	Mother	Granny	Swami

Ans:

Swami's father	Mother	Granny	Swami
Authoritative, Disciplined	Caring, Protective	Helpless	Innocent, Nervous, Tricky

Enrich your vocabulary

Task 1: Homophones: Homophones are the words that sound same but have different meanings and different spellings. Fill in the blanks with appropriate word.

1) We had …………many apples to carry. (too/two)
2) I …………a horse at Marina beach. (road/rode)
3) Did you have a ……..……..for lunch? (pear/pair)
4) The books are over……..on the shelf. (their/there)

Answer: (1) too, (2) rode, (3) pear, (4) there

Task 2: Fill in the blanks with choosing the appropriate word and complete the story.

This is a 1 (Storey/Story) told by a 2 (night/knight). Once he received a letter. When he 3 (red/read) it 4 (through/ threw), he could not believe his own eyes. 5 . (Far/For), it was written 6 (buy/by) none other than Queen of the land. She asked him to meet her 7 (at/yet) a secret place. The knight was in a fix. But he thought 8 (of/off) a plan to tide over this problem. He 9 (vent/went) to the meeting place, not alone, but along with his 10 (fair/fare) wife. Can you guess what happened then?

Ans:- 1. story, 2. knight, 3. read, 4. through, 5. for, 6. by, 7. at, 8. of, 9. went, 10. fair

Task 3: Scramble the letters to form words. See the meaning clues in brackets

1. atrtefl………………..(praise),
2. boudt………………..(suspect),
3. ragtedy………………(unhappy ending),
4. ragfenmt……………..(a piece),
5. raetl…………………..(careful),
6. cacsriyt………………(short supply),
7. ymtsathpeic……………(not cruel)

Answer: 1. Flatter, 2. Doubt, 3. Tragedy, 4. Fragment, 5. Alert, 6. Scarcity, 7. Sympathetic

Dialogue writing:

Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Accepting:

a) That's a very good idea. Thank you.
b) Of course! I didn't think of it that. Many thanks.
c) Thank you for suggesting it. I think I will.
d) I think I must do that
e) Yes, I will. It's very good of you to make the offer.
f) That's very kind of you. I will. (Contd….)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Biology

REPRODUCTION
Reproduction in flowering plants

3. What is Autogamy?

Ans:- Autogamy is a type of self pollination which occurs between anther and stigma of the same flower. It occurs in all those intersexual or perfect flowers which either remain closed or where anthers/pollen come in contact with stigma by gravity and mechanical means.

4. Mention the different types of Autogamy?

Ans:- The different types of Autogamy are –
a) Homogamy b) Cleistogamy
c) Bud formation
d) Non-dehiscence of Anther
e) Fail safe device

5. Mention some of the advantages of the self pollination.

Ans:- Some of the advantages of the self pollination are It is a sure and economical method of pollination.
a) It is employed as fail-safe device.
b) It produces homozygous progeny.
c) It is used to maintain pure lines.
d) It maintains the superiority of the race indefinitely.
e) The plants need not produce large number of pollen grains.
f) Flowers do not develop attractants for favouring external agencies.
g) Harmful and useless characters are eliminated naturally.

6. Mention some of the differences between the Chasmogamy and Cleistogamy.

Ans:-

Chasmogamy	*Cleistogamy*
It is a condition of opening of mature flowers.	It is a condition of keeping the flowers closed throughout.
The flowers are conspicuous.	The flowers are small and inconspicuous.
Both self and cross pollination can occur.	Only self-pollination is possible.
Both external and internal factors are involved in effecting pollination.	Only internal factors take part in pollination.
It is normal condition.	It is a fail safe device.

7. Mention some of the disadvantages of the self pollination.

Ans:- Some of the disadvantages of the self pollination are
a) No new traits are introduced.
b) It decreases variability and adaptability to changes in environment.
c) Disease resistance decreases with time.
d) Recessive traits appear regularly as self pollination introduces homozygosity.
e) There is no way to eliminate defective traits.
f) Yield decreases with time due to reduction in vigour and vitality.

8. Identify the type of flowers shown in A and B. Which of the two will produce an assured seed set.

Ans:- **A – Chasmogamous flower.**
B- Cleistogamous flowers

Cleistogamous flowers produce assured seed as they do not depend upon external agency for pollination.

9. Draw a labelled diagram of the sectional view of a mature pollen grain of angiosperms. Explain the functions of any two of its parts.

Ans:-



Functions-

(i) Exine – Made of most resistant biological substance sporopollenin, it provides protection to pollen grain.

(ii) Intine - Made of cellulose and pectin, it later grows to form pollen tube.

(iii) Generative cell – It gives rise to two male gametes.

(iv) Vegetative or Tube cell – It stores food and later grows to form cytoplasmic contents of the pollen tube.

10. In the adjacent figure of a typical dicot embryo, label the parts (1), (2) and (3). State the function of each of the labelled part.



Ans:- (1) Plumule, (2) Cotyledons, (3) Radicle

Functions:- Plumule – To form shoot system
Radicle - To form root system
Cotyledons (seed layers) – storage of food

‘ಹಿಂದೂಗಳು ದೇಗುಲಕ್ಕೆ ಹೋಗುವುದು ಕಡ್ಡಾಯವಲ್ಲ’

ನವದೆಹಲಿ (ಪಿಟಿಐ): ‘ಹಿಂದುತ್ವ ಎಂಬುದು ಜೀವನ ವಿಧಾನ. ಈ ನಂಬಿಕೆಯನ್ನು ಸಾಬೀತು ಪಡಿಸಲು ದೇವಸ್ಥಾನಕ್ಕೆ ಹೋಗಲೇಬೇಕೆಂದಿಲ್ಲ; ಮನೆಯೊಳಗೆ ದೀಪ ಹಚ್ಚಿದರೂ ಸಾಕು’ ಎಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠವು ಶಬರಿಮಲೆ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿತು.

ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದ್ರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಅಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ.ವರಾಳೆ, ಆರ್.ಮಹದೇವನ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರನ್ನು ನ್ಯಾಯಪೀಠವು ಒಳಗೊಂಡಿದೆ.

ಅರ್ಜಿ ವಿಚಾರಣೆ ಸಂದರ್ಭದಲ್ಲಿ ನ್ಯಾ.ನಾಗರತ್ನ ಅವರು, ‘ಹಿಂದೂಗಳು ಸಂಪ್ರದಾಯವಾದಿ ಆಗಬೇಕೆಂದಿಲ್ಲ’ ಎಂದು ಹೇಳಿದರು.

ಇದಕ್ಕೂ ಮುನ್ನ, ‘ಪ್ರತಿಯೊಂದು ಧಾರ್ಮಿಕ ಆಚರಣೆ ಅಥವಾ ಧಾರ್ಮಿಕ ವಿಚಾರದ ಬಗ್ಗೆ ನ್ಯಾಯಾಲಯಗಳಲ್ಲಿ ಪ್ರಶ್ನಿಸುತ್ತಾ ಹೋದರೆ ನೂರಾರು ಅರ್ಜಿಗಳ ವಿಚಾರಣೆ ನಡೆಸಬೇಕಾಗುತ್ತದೆ. ಇದರಿಂದಲೇ ಪ್ರತಿಯೊಂದು ಧರ್ಮವು ‘ವಿಭಜನೆ’ಯಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಬಂಡಿ ಸಂಜಯ್ ಪುತ್ರ ವಿಚಾರಣೆಗೆ ಗೈರು

ಪ್ರಜಾವಾಣಿ ವಾರ್ತೆ

ಪೋಕ್ಸೊ ಪ್ರಕರಣ

ಹೈದರಾಬಾದ್: ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಅವರ ಪುತ್ರ ಬಂಡಿ ಭಗೀರಥ ಅವರು ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ ಬುಧವಾರ ಗೈರಾಗಿದ್ದಾರೆ.

ಅವರನ್ನು ಪತ್ತೆಹಚ್ಚಲು ಸಹಕರಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡುವಂಥ ಪೋಸ್ಟರ್‌ಗಳು ಹೈದರಾಬಾದ್‌ನ ವಿವಿಧ ಪ್ರದೇಶಗಳಲ್ಲಿ ಕಂಡುಬಂದಿದ್ದು, ರಾಜಕೀಯ ಚರ್ಚೆಗೂ ಗ್ರಾಸವಾಗಿದೆ.

ಬುಧವಾರ ಮಧ್ಯಾಹ್ನ 2 ಗಂಟೆಗೆ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಿ ಪೇಟ್ ಬಷೀರಾಬಾದ್ ಠಾಣೆಯ ಪೊಲೀಸರು ಭಗೀರಥ ಅವರಿಗೆ ನೋಟಿಸ್ ನೀಡಿದ್ದರು. ಆದಾಗ್ಯೂ, ಭಗೀರಥ ವಿಚಾರಣೆಗೆ ಹಾಜರಾಗಿಲ್ಲ.

ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿ ಭಗೀರಥ ಅವರು ಸಲ್ಲಿಸಿರುವ ಅರ್ಜಿಯನ್ನು ತೆಲಂಗಾಣ ಹೈಕೋರ್ಟ್ ಗುರುವಾರ ವಿಚಾರಣೆ ನಡೆಸಲಿದೆ.

ವಿಚಾರಣೆಗೆ ಹಾಜರಾಗದೇ ಭಗೀರಥ ತಲೆಮರೆಸಿಕೊಂಡಿರುವ ಬಗ್ಗೆ ಹಲವು ರಾಜಕೀಯ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದು, ತಕ್ಷಣವೇ ಅವರನ್ನು ಬಂಧಿಸುವಂತೆ ಪೊಲೀಸರನ್ನು ಆಗ್ರಹಿಸಿವೆ. ಪೊಲೀಸರು, ಭಗೀರಥ ವಿರುದ್ಧದ ಪ್ರಕರಣದಲ್ಲಿನ ಸೆಕ್ಷನ್‌ಗಳನ್ನು ಪರಿಷ್ಕರಿಸಿದ್ದಾರೆ.

ತೆಲಂಗಾಣ ರಕ್ಷಣಾ ಸೇನಾದ ಮುಖ್ಯಸ್ಥೆ ಕೆ.ಕವಿತಾ ಅವರೂ ಈ ಕುರಿತು ಮಾತನಾಡಿ, ‘ಇಂಥ ಆರೋಪಗಳನ್ನು ಹೊತ್ತ ವ್ಯಕ್ತಿಗಳು ದೇಶದಿಂದ ಪರಾರಿಯಾಗಲು ಆಸ್ಪದ ನೀಡುವುದರಲ್ಲಿ ಬಿಜೆಪಿಗರು ನಿಸ್ಸೀಮರು. ಹೀಗಾಗಿ ತಕ್ಷಣವೇ ಭಗೀರಥ ಅವರ ವಿರುದ್ಧ ಲುಕ್ ಔಟ್ ನೋಟಿಸ್ ಜಾರಿಗೊಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಸಿಬಿಎಸ್‌ಇ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿ ಪರೀಕ್ಷಾ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಶೇ. 85ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಫಲಿತಾಂಶ ಶೇ 3ರಷ್ಟು ಕುಸಿದಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುಮಾರು 94,028 ವಿದ್ಯಾರ್ಥಿಗಳು ಶೇ 90ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ. 17,113 ವಿದ್ಯಾರ್ಥಿಗಳು ಶೇ 95ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕರಾದ ಸಾನ್ಯಂ ಭಾರದ್ವಾಜ್ ಅವರು ತಿಳಿಸಿದ್ದಾರೆ.

ಈ ಬಾರಿಯೂ ಬಾಲಕಿಯರು ಮೇಲುಗೈ ಸಾಧಿಸಿದ್ದು, ಶೇ 88ರಷ್ಟು ಉತ್ತೀರ್ಣರಾಗಿದ್ದಾರೆ. ಬಾಲಕರು ಶೇ 82ರಷ್ಟು ತೇರ್ಗಡೆಯಾಗಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾಂತರು ಶೇ 100ರಷ್ಟು ತೇರ್ಗಡೆಯಾಗಿದ್ದಾರೆ. 19,967 ಶಾಲೆಗಳು ಮತ್ತು 7,573 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ಸುಮಾರು 5.06 ಲಕ್ಷ ಮೇಲ್ವಿಚಾರಕರನ್ನು ನಿಯೋಜಿಸಲಾಗಿತ್ತು.

ಜುಲೈ 15ರಂದು ಪೂರಕ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸಲು ಜೂನ್ 2ರವರೆಗೆ ಅವಕಾಶವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ICMR- National Institute of NCD Epidemiology (ICMR-NINE), Bengaluru (Erstwhile ICMR-NCDIR)
Dept. of Health Research, MH&FW, Govt. of India,
Nirmal Bhawan-ICMR Complex (II Floor), Poojanahalli,
Kannamangala Post, Bengaluru–562 110, Telephone: 080-22176400

Advt. No. ICMR/NINE/Recruitment/2025-26 14-05-2026

NOTIFICATION FOR WALK-IN-INTERVIEW

Applications are invited for Temporary/Contractual positions of Young Professional-I (AI/ML)–1 post, Young Professional-II (Public Policy & Evidance Translation)–1 post and Young Professional-II (Scientific Communication & Media)–1 post at ICMR-NINE, Bengaluru. Detailed advertisement can be downloaded from the websites **https://icmrnine.org/www.icmr.nic.in.** Please note that corrigendum / addendum / further information, if any, in respect of this advertisement will be published on our websites only.

Sd/- Director

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, 1ನೇ ವಿಭಾಗ
ನಂ.55, ನೆಲಮಹಡಿ, ಅಭಯ ಸಂಕೀರ್ಣ ಭವನ, ರಿಸಲ್ದಾರ್‌ರಸ್ತೆ,
ಶೇಷಾದ್ರಿಪುರಂ, ಬೆಂಗಳೂರು–560020

No.KSDB/EE/No 1.div/Rental space/2026-27 Date:13.05.2026

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರಿನ ಶೇಷಾದ್ರಿಪುರಂ ನಲ್ಲಿರುವ ಅಭಯ ಸಂಕೀರ್ಣ ಭವನದ 2ನೇ ಮಹಡಿಯಲ್ಲಿ ಖಾಲಿ ಇರುವ 5000 ಚ.ಅಡಿ ಮತ್ತು 4ನೇ ಮಹಡಿಯಲ್ಲಿ ಖಾಲಿ ಇರುವ 1500 ಚ.ಅಡಿ (ಒಟ್ಟು 6500 ಚ.ಅಡಿ) ಜಾಗವು ವಾಣಿಜ್ಯ ಉದ್ದೇಶಗಳಿಗೆ ಬಾಡಿಗೆಗೆ ಲಭ್ಯವಿದೆ. ಬಾಡಿಗೆ ದರ ರೂ.60.10 ಪ್ರತಿ ಚ.ಅಡಿಗೆ+ರೂ.2.00 ನಿರ್ವಹಣೆ+18% ಜಿ.ಎಸ್.ಟಿ. ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಸಂಸ್ಥೆಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಮೊ :8884492432, ಇ–ಮೇಲ್ : ksdbeeno.1@gmail.com

ಸಹಿ/–
ಕಾರ್ಯಪಾಲಕ ಅಭಿಯಂತರರು,
ನಂ.1ನೇ ವಿಭಾಗ, ಕಕೊಅಮ, ಬೆಂಗಳೂರು

DIPR/CP/629/Zen/2026-27

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕೆಪಿಐಡಿಎಫ್‌ಇ ವಂಚನೆ ಪ್ರಕರಣಗಳು)
3 ಮತ್ತು 4ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.
ಇ–ಮೇಲ್ : splocaima21@gmail.com ದೂರವಾಣಿ : 080–29565353/29604556/29566556

No. SPLOCA/ADM/PROC-03/22/2025-26 Date: 12-05-2026

Tender Notice

Special Officer & Competent Authority for IMA & other KPIDFE Cases intends to hire vehicles (including drivers) on monthly rental basis for office use for one year at an estimated cost of Rs 30 lakh.
Calender of Events:

Commencement of download of e-Tender document from website- **https://kppp.karnataka.gov.in/**	**13/05/2026**
Last Date of Queries on or before	**15/05/2026 till 5:00 p.m.**
Pre-Bid Meeting on	**16/05/2026 at 3.00 p.m**
Last Date for Uploading of Tender in e-procurement platform on or before	**21/05/2026 till 5:00 p.m.**
Opening of Technical Bid	**22/05/2026 at 12:00 p.m.**
Date of Original Document Verification	Will be done on the uploaded documents at e-portal on **27/05/2026**
Opening of Financial Bid	**29/05/2026 at 11:00 am**
Approximate value of tender	**Rs. 30.00 Lakhs**

The Tender Inviting Authority reserves the right to reject any or all the tender offers without assigning any reason. Amendment, if any, will be published only on the e procurement portal **https://kppp.karnataka.gov.in/#/portal/portal-home.**

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ, (ಐ.ಎಂ.ಎ ಹಾಗೂ ಇತರೆ ಕೆಪಿಐಡಿಎಫ್‌ಇ ವಂಚನೆ ಪ್ರಕರಣಗಳು) ಬೆಂಗಳೂರು.

DIPR/CP/646/Zen/2025-26

ಕರ್ನಾಟಕ ಸರ್ಕಾರ
ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560001

ಸಂ. ಇಡಿ/56/ಯುಬಿವಿ/2026 (ಭಾಗ–1) ದಿನಾಂಕ: 13–05–2026

ಸಾರ್ವಜನಿಕ ಪ್ರಕಟಣೆ
ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿ

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಇವರಿಂದ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಪ್ರಕರಣ 14 (2) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಅರ್ಹತೆಯುಳ್ಳ ಪ್ರಾಧ್ಯಾಪಕರು / ಶಿಕ್ಷಣ ತಜ್ಞರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಈ ಜಾಹೀರಾತು ಪ್ರಕಟಣೆಯಾದ 30 ದಿನಗಳ ಒಳಗೆ (ಸಾರ್ವತ್ರಿಕ ರಜಾ ದಿನಗಳನ್ನು ಒಳಗೊಂಡಂತೆ) ಸ್ವೀಕೃತವಾಗುವಂತೆ "ಸರಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6ನೆ ಮಹಡಿ, ಗೇಟ್ ಸಂಖ್ಯೆ 03, ಕೊಠಡಿ ಸಂಖ್ಯೆ 601, (ಸ್ವೀಕೃತಿ ಮತ್ತು ರವಾನೆ ಶಾಖೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001" ಇವರಿಗೆ ಸಲ್ಲಿಸತಕ್ಕದ್ದು. ಪಿ ಡಿ ಎಫ್ ರೂಪದ ವಿದ್ಯುನ್ಮಾನ ಅರ್ಜಿಗಳನ್ನು ಏಕ ಪ್ರತಿಯಲ್ಲಿ ಇಮೇಲ್ **busearchcommittee2026@gmail.com** ಗೆ ಕಳುಹಿಸತಕ್ಕದ್ದು. ವಿವರವಾದ ಅರ್ಜಿಗಳು ಮತ್ತು ಇತರೆ ವಿವರಗಳು ಉನ್ನತ ಶಿಕ್ಷಣ ಇಲಾಖೆಯ ವೆಬ್ ಸೈಟ್ **https://hed.karnataka.gov.in.** ನಲ್ಲಿ ಪಡೆಯಬಹುದು.

ಸಹಿ/–
ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ

DIPR/CP/630/Zen/2026-27

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ.
Phone- 08182-222983 e-mail - acfwlshimoga@gmail.com
ಸಂಖ್ಯೆ/ಸಅಸಂ/ವಉವಿಶಿ/ಸಿಆರ್– /2026–27 ದಿನಾಂಕ: 12.05.2026

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ

2026–27ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ, ಸಕ್ರೆಬೈಲು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಆನೆಗಳಿಗೆ ಆಹಾರ 01/04/2026 ರಿಂದ 31/03/2027ರವರೆಗೆ ವಿವಿಧ ಪಡಿತರ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಕೆಳಕಂಡ ದಿನಾಂಕದಂದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ.ಸಂ. 01. ಕೆಲಸದ ವಿವರ: ಸಕ್ರೆಬೈಲು ವನ್ಯಜೀವಿ ವಲಯ, ಗಾಜನೂರು ಆನೆ ಶಿಬಿರದ ಇಲಾಖಾ ಆನೆಗಳಿಗೆ ಪಡಿತರ ಸರಬರಾಜು (CALL-2) **ಅಂದಾಜು ಮೊತ್ತ ಎಲ್ಲಾ ತೆರಿಗೆ ಸೇರಿ (ರೂ.ಲಕ್ಷಗಳಲ್ಲಿ):** 97.93315

ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಯನ್ನು ಸರ್ಕಾರದಿಂದ ನಿಗಧಿಪಡಿಸುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20/05/2026 ಅಪರಾಹ್ನ 16:30 ಗಂಟೆವರೆಗೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/48/05/216

“ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101”

ಜಿನಕೊಬ / ಡಿ.ಎಮ್.ಎಫ್ / ಹೊರಗುತ್ತಿಗೆ / 2026/ 01/01 ದಿನಾಂಕ: 08.05.2026

ಟೆಂಡರ್ ಅವಧಿ ವಿಸ್ತರಣಾ ಪ್ರಕಟಣೆ (CORRIGENDUM)

ಬಳ್ಳಾರಿ ಜಿಲ್ಲೆಯ ಡಿ.ಎಂ.ಎಫ್ (DMF) ಕೋಶಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯನ್ವಯ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜುಗಳ ಪ್ರಕಾರ ಈಗಾಗಲೇ ಕೆ.ಪಿ.ಪಿ ಪೋರ್ಟಲ್ (KPPP Portal) ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು.

ಆದರೆ, ತಾಂತ್ರಿಕ ಕಾರಣಗಳಿಂದಾಗಿ ಈ ಪ್ರಕಟಣೆಯು ಪತ್ರಿಕೆಗಳಲ್ಲಿ ಸಕಾಲಕ್ಕೆ ಪ್ರಕಟವಾಗದೇ ಇರುವುದರಿಂದ, ಆಸಕ್ತ ಬಿಡ್ದಾರರಿಗೆ ಹೆಚ್ಚಿನ ಕಾಲಾವಕಾಶ ನೀಡಲು ಟೆಂಡರ್ ಸಲ್ಲಿಕೆಯ ಅವಧಿಯನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ:

ಪ್ಯಾಕೇಜ್ ಕಾಮಗಾರಿ ವಿವರ: Providing Manpower Services on outsource basis for DMF Cell of Ballari District. DMA/2025-26/SE7481. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 90.50. **EMD (Rs):** 1,81,000/–

ವಿವರಗಳು ದಿನಾಂಕ ಮತ್ತು ಸಮಯ

ಟೆಂಡರ್ ಕುರಿತು ವಿಚಾರಣೆ/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: **16.05.2026, ಸಂಜೆ 4:30 ರವರೆಗೆ.** ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **19.05.2026, ಸಂಜೆ 4:30 ರವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **20.05.2026, ಸಂಜೆ 5:00 ಗಂಟೆಗೆ.** ಆರ್ಥಿಕ ಬಿಡ್ (Financial Bid) ತೆರೆಯುವ ದಿನಾಂಕ: **22.05.2026, ಬೆಳಿಗ್ಗೆ 11:00 ಗಂಟೆಗೆ**

ಪ್ರಮುಖ ಸೂಚನೆಗಳು: 1)ಮೇಲೆ ತಿಳಿಸಿದ ದಿನಾಂಕಗಳಂದು ಸಾರ್ವಜನಿಕ ರಜೆ ಘೋಷಣೆಯಾದಲ್ಲಿ, ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.2) ಆಸಕ್ತರು ಹೆಚ್ಚಿನ ವಿವರಗಳು ಮತ್ತು ನಿಬಂಧನೆಗಳಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ಪೋರ್ಟಲ್ **https://kppp.karnataka.gov.in/** ನಲ್ಲಿ ಲಾಗಿನ್ ಆಗಿ ಮಾಹಿತಿ ಪಡೆಯಬಹುದು.3)ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ (ದೂರವಾಣಿ ಸಂಖ್ಯೆ: 7760848568) ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಒ.ಸಂಖ್ಯೆ/139

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹಾಲಕ್ಷ್ಮಿಪುರಂ ವಿಭಾಗ, 12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಪನಪಾ, ಬೆಂಗಳೂರು.

ಸಂಖ್ಯೆ: ಕಾಅ/ಎಂಎಲ್‌ಪಿ/ಟೆಂಡರ್/ಇ–ಪ್ರೊಕ್/03/2026–27 ದಿನಾಂಕ: 13–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಬೆಂಪನ ಪಾಲಿಕೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ಬಿಬಿಎಂಪಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ –ಕೆಡಬ್ಲ್ಯೂ–4**)

ಕ್ರ. ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ. 47 ರಲ್ಲಿನ ವೃಷಭಾವತಿನಗರದಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 247.93, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 3.72**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **18–05–2026 ರಂದು 16.30 ಗಂಟೆಯ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **21–05–2026 ರಂದು 15.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **21–05–2026 ರಂದು 15.30 ಗಂಟೆಗೆ.** 4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **29–05–2026 ರಂದು 16.00 ಗಂಟೆವರೆಗೆ.** 5) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ: **30–05–2026 ರಂದು 16.30 ಗಂಟೆಯ ನಂತರ ಕೆ.ಪಿ.ಪಿ. ಪೋರ್ಟಲ್ ಮೂಲಕ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮಿಪುರಂ ವಿಭಾಗ, ಬೆಂಪನಪಾ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–3&4/ಇ–ಟೆಂಡರ್ ಪ್ರಕಟಣೆ/2026–27/ 339, ದಿನಾಂಕ: 12.05.2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1, 2 & 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ ಸಿಎಂಐಡಿಪಿ ಯೋಜನೆ ಮತ್ತು 8443 ಠೇವಣಿ ವಂತಿಕೆ (ಐಟಿಐ ಕಾಲೇಜು ದುರಸ್ತಿ) ಹಾಗೂ 4202 ಶಿಕ್ಷಣ ಇಲಾಖೆ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ತಾಲೂಕಿನ (1)32708, 2)36102 ಮತ್ತು 3)36107 ಒಟ್ಟು 03 (ಮೂರು) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.14.50 ಲಕ್ಷಗಳು ಹಾಗೂ ಗರಿಷ್ಠ ರೂ:425.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 18.05.2026 (11.30 ಗಂಟೆ ನಂತರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 20.05.2026 (13.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 22.05.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 25.05.2026 (11.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 27.05.2026 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ

11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,

ವಾ.ಸಾ.ಸಂ.ಇ/ಯಾದಗಿರಿ/68/ಕೆ.ಎಸ್.ಎಂ.ಸಿ.&ಎ/2026–27 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/05/2026–27 ದಿನಾಂಕ: 08/05/2026

ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಕೆಳಕಂಡ ಐಟಂ ಅನ್ನು ಸರಬರಾಜು ಮಾಡಲು ಭಾರತೀಯ ರೈಲ್ವೆ ಇ–ಪೋರ್ಟಲ್ www.ireps.gov.in ಮೂಲಕ ಅನುಭವಿ ಓಇಎಂ/ಅಧಿಕೃತ ಏಜೆಂಟ್‌ಗಳಿಂದ ಎಲೆಕ್ಟ್ರಾನಿಕ್ ಮುಕ್ತ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ ಹಾಗೂ ಸಂಕ್ಷಿಪ್ತ ಐಟಂ ವಿವರ: ಪಿ2256302ಎ, ಆರ್‌ಡಬ್ಲ್ಯೂಎಫ್ ವೈಶಿಷ್ಟ್ಯತೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಇಎಲ್/ಪಿ/2025–26/05 ಪ್ರಕಾರ ಹೊಸ ಹೊರಾಂಗಣ ಮಾದರಿ 1600ಕೆವಿಎ, 11ಕೆವಿ/433ವೋಲ್ಟ್ಸ್, 3 ಫೇಸ್, 50 ಹೆಚ್‌ಜಡ್, ಲೆವೆಲ್–3 ಇಂಧನ ಸಾಮರ್ಥ್ಯದ / ಬಿಇಇ ಸ್ಟಾರ್ ಕ್ರಮಾಂಕ–3 ವಿತರಣಾ ಪರಿವರ್ತಕದ ಮತ್ತು ಹೊಸ ಜಿಎಫ್‌ಎಂ ಉಪ–ಕೇಂದ್ರದಲ್ಲಿ ಸಂಬಂಧಿತ ಕಾಮಗಾರಿಗಳೊಂದಿಗೆ ಎಲ್‌ಟಿ ಬಸ್ ಡಕ್ಟ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು. **ಪ್ರಮಾಣ:** 1 ಸೆಟ್. **ಟೆಂಡರ್‌ನ ಕೊನೆಯ ದಿನಾಂಕ ಮತ್ತು ಸಮಯ:** 01.06.2026 ರಂದು 14:00 ಗಂಟೆಯವರೆಗೆ.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ2/06/2026–27 ದಿನಾಂಕ: 13/05/2026

ಟೆಂಡರ್ ಸಂಖ್ಯೆ ಹಾಗೂ ಸಂಕ್ಷಿಪ್ತ ಐಟಂ ವಿವರ: ಪಿ3265025 ಅಲ್ಲೆನ್ ಬ್ರಾಡ್‌ಲೇ (ರಾಕ್‌ವೆಲ್ ಆಟೋಮೇಷನ್) ತಯಾರಿಕೆಯ ಬಿಡಿ ಭಾಗಗಳು (4 ಐಟಂಗಳು). 1. 5069–ಎಲ್306ಇಆರ್ ಕಾಂಪ್ಯಾಕ್ಟ್ ಲಾಗಿಕ್ಸ್ 600ಕೆಬಿ ಇನೆಟ್ ಕಂಟ್ರೋಲರ್. **ಪ್ರಮಾಣ:** 08 ಸಂಖ್ಯೆಗಳು. 2. 5069–ಐಎ16 ಡಿಜಿಟಲ್ 16–ಪಾಯಿಂಟ್ ಎಸಿ ಇನ್‌ಪುಟ್ ಮಾಡ್ಯೂಲ್. **ಪ್ರಮಾಣ:** 36 ಸಂಖ್ಯೆಗಳು. 3. 5069–ಓಎ16 ಡಿಜಿಟಲ್ 16–ಪಾಯಿಂಟ್ ಔಟ್‌ಪುಟ್ ಮಾಡ್ಯುಲ್, 120 ಮತ್ತು 240ವೋಗಳ ಎರಡು ಎಸಿ ಸಿಗ್ನಲ್‌ಗಳನ್ನು ಬೆಂಬಲಿಸಬೇಕು. **ಪ್ರಮಾಣ:** 21 ಸಂಖ್ಯೆಗಳು. 4. 5069–ಎಇಎನ್‌ಟಿಆರ್ ಎತರ್‌ನೆಟ್/ಐಪಿ ಅಡಾಪ್ಟರ್. **ಪ್ರಮಾಣ:** 18 ಸಂಖ್ಯೆಗಳು. **ಟೆಂಡರ್‌ನ ಕೊನೆಯ ದಿನಾಂಕ ಮತ್ತು ಸಮಯ:** 09.06.2026 ರಂದು 14:00 ಗಂಟೆಯವರೆಗೆ.

ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ಅಥವಾ www.ireps.gov.in ನಲ್ಲಿ ನೋಡಬಹುದು. ಟೆಂಡರ್ ದಾಖಲಾತಿಗಳು ಮತ್ತು ಟೆಂಡರ್‌ನ ತಿದ್ದುಪಡಿ ಯಾವುದೇ ಇದ್ದಲ್ಲಿ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುವುದು.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಕರ್ನಾಟಕ ಸರ್ಕಾರ
ಕರ್ನಾಟಕ ಸರ್ಕಾರದ ಸಚಿವಾಲಯ
ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ–ಆರ್‌ಡಿ 185 ಜಿಆರ್‌ಸಿ 2025 ದಿನಾಂಕ: 26.03.2026

ಅಧಿಸೂಚನೆ

ಆರಕ್ಷಕ ನಿರೀಕ್ಷಕರು, ಸಿ ಟಿ ಮಾರುಕಟ್ಟೆ ಪೊಲೀಸ್ ಠಾಣೆ, ಬೆಂಗಳೂರು ನಗರ ಜಿಲ್ಲೆ, ಇವರ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ ಅಪರೇಟಿವ್ ಲಿಮಿಟೆಡ್, ಬೆಂಗಳೂರು ಇವರು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ ಅಪರೇಟಿವ್ ಲಿಮಿಟೆಡ್, ಬೆಂಗಳೂರು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ ಅಪರೇಟಿವ್ ಲಿಮಿಟೆಡ್, ಬೆಂಗಳೂರು ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ದ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ ಅಪರೇಟಿವ್ ಲಿಮಿಟೆಡ್, ಬೆಂಗಳೂರು ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಆರಕ್ಷಕ ನಿರೀಕ್ಷಕರು, ಸಿ ಟಿ ಮಾರುಕಟ್ಟೆ ಪೊಲೀಸ್ ಠಾಣೆ, ಬೆಂಗಳೂರು ನಗರ ಜಿಲ್ಲೆ ಇವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005)ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

“ಆದೇಶ”

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲೆ ನಿರೂಪಿಸಲಾದ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗೆ ಸೇರಿದೆ ಎನ್ನಲಾದ ಸ್ಥಿರ ಮತ್ತು ಚರಾಸ್ತಿಗಳನ್ನು ಜಪ್ತಿ ಮಾಡುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪರ್ಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಶ್ರೀ ಪಂಚ ಐಶ್ವರ್ಯ ಮಲ್ಟಿಪರ್ಪಸ್ ಸೌಹಾರ್ದ ಕೋ ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗೆ ಸೇರಿದೆ ಎನ್ನಲಾದ ಸ್ಥಿರ ಸ್ವತ್ತುಗಳನ್ನು ಮತ್ತು ಬೆಂಗಳೂರು ಸಂಸ್ಥೆಯು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಆರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧ ರಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಸ್ಥಿರಾ ಸ್ವತ್ತುಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರ ಸ್ವತ್ತುಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ
(ಸೇವೆಗಳು–1, ಭೂಮಾಪನ ಮತ್ತು ವಿಶೇಷ ಕೋಶ)

ಅನುಬಂಧ

ಕ್ರ ಸಂ.	ಸ್ವತ್ತಿನ ವಿವರ (ಚಕ್ಕುಬಂದಿ ಒಳಗೊಂಡಂತೆ)	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲಿಕ	ದಾಖಲಾತಿ ವಿವರ	ಖರೀದಿ ದರ (ರೂ.ಗಳಲ್ಲಿ)	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಷರಾ
01	The Residential Apartment bearing No. 302 on the western side in the Second Floor of the Apartment Building Known as “SURASA ENCLAVE”, Constructed on the Schedule 'A' Property with a super built-up area measuring 3200 Square Feet (Which is inclusive of balconies and proportionate share in common areas, etc.,) along with Two Car Parking Spaces No. 302 and Two Scooter Parking Space No. 302 in the Stilt Floor. SITUATED AT Bengaluru South Taluk, Basavanagudi. Bounded by: East by: Puttanna Road West by: Private Property North by: Private Property South by: Private Property	1) K.N. Roopa w/o M. A. Satheesha 2) M.A. Satheesha s/o K.R. Narasimha shettey	This property is registered at Office of the Sub Registrar, Basavanagudi, Bengaluru vide sale deed No. CMP-1-01230/2019-20, dated:24-05-2019	1,90,00,000/–	****	**** ಮೌಲ್ಯಮಾಪನ ಸಮಯದಲಿ ಅಧಿಕೃತ ಮೌಲ್ಯ ಮಾಪಕರಿಂದ ಪಡೆಯಲಾಗುವುದು.
02	The Residential Flat Bearing No. 3 measuring to an extent of 1080 sqfts in First Floor rear portion including common area. of the Building Known as “Sheshadri Apartments”, Constructed on the Schedule 'D' Property (Which is inclusive of stair cases, lobby areas, lift, lift rooms, electric rooms and pump room) along with one Car Parking Space and Two wheeler in the basement. Situated at Bengaluru North, Malleshwaram. Bounded by: East by: Venkatanga Iyngar Road,(Now Sampige road) West by: Consevency Road North by: Vacant Land belonging to Municipality and now occupied by water works quarters. South by: Late Ramanaswamaiah's Residence.	1) K.N. Roopa w/o M. A. Satheesha 2) M.A. Satheesha s/o K.R. Narasimha shettey	This property is registered at Office of the Sub Registrar, Gandhinagar, Bengaluru vide sale deed No. GAN-1-06917/2018-19, dated:01-03-2019	96,00,000/–	****	**** ಮೌಲ್ಯಮಾಪನ ಸಮಯದಲಿ ಅಧಿಕೃತ ಮೌಲ್ಯ ಮಾಪಕರಿಂದ ಪಡೆಯಲಾಗುವುದು.

ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1, ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/ಜಿ.ಪಿ/649/2026–27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ಅಕ್ಷರಜ್ಞಾನವೆಂಬುದು ಸದ್ಯಕ್ಕೆ ಸಹಿ ಹಾಕುವುದಷ್ಟಕ್ಕೇ ಮೀಸಲಾಗಿದೆ. ಅದು ಶಿಕ್ಷಣವಾಗಬೇಕು; ವಿದ್ಯೆಯಾಗಬೇಕು.

–ಹಾ.ಮಾ. ನಾಯಕ

ಸಂಪಾದಕೀಯ

ನೀಟ್ ಹೆಸರಲ್ಲಿ ಅವ್ಯವಸ್ಥೆ–ಕ್ರೌರ್ಯ 'ಎನ್‌ಟಿಎ' ವಿಶ್ವಾಸಾರ್ಹತೆಗೆ ಧಕ್ಕೆ

ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 3ರಂದು ನಡೆದಿದ್ದ 'ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ'ಯನ್ನು (ನೀಟ್–ಯುಜಿ) 'ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ' (ಎನ್‌ಟಿಎ) ರದ್ದುಗೊಳಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಗೊಳಿಸಿರುವ ಕ್ರಮ, 'ಎನ್‌ಟಿಎ' ಇತಿಹಾಸದಲ್ಲಿನ ಮತ್ತೊಂದು ಕಪ್ಪುಚುಕ್ಕೆಯಾಗಿದೆ. ನೀಟ್ ಸೇರಿದಂತೆ ದೇಶದ ಕೆಲವು ಪ್ರಮುಖ ಪರೀಕ್ಷೆಗಳನ್ನು ನಡೆಸುವ ಹೊಣೆಗಾರಿಕೆ ಈ ಸಂಸ್ಥೆಯದಾಗಿದೆ. ಕೃಪಾಂಕಗಳ ಕಾರಣದಿಂದಾಗಿ ವಿವಾದಕ್ಕೆ ಒಳಗಾಗಿದ್ದ ವಿದ್ಯಾರ್ಥಿಗಳಿಗೆ 2024ರಲ್ಲಿ ಮರು ಪರೀಕ್ಷೆ ನಡೆಸಲಾಗಿತ್ತು. ಆದರೆ, ಈಗಿನ ಅಕ್ರಮಗಳು ಅತ್ಯಂತ ಗಂಭೀರ ಸ್ವರೂಪದ್ದಾಗಿವೆ. ಸಂಭಾವ್ಯ ಪ್ರಶ್ನೆಪತ್ರಿಕೆಯಲ್ಲಿನ ಅನೇಕ ಪ್ರಶ್ನೆಗಳು ಮೇ 3ರಂದು ನಡೆದ ಪರೀಕ್ಷೆಯಲ್ಲಿ ಕಂಡುಬಂದಿರುವುದರ ಹಿನ್ನೆಲೆಯಲ್ಲಿ ಆ ದಿನ ನಡೆದ ಪರೀಕ್ಷೆಯನ್ನು ರದ್ದುಗೊಳಿಸಿ, ಮರು ಪರೀಕ್ಷೆ ನಡೆಸಲು 'ಎನ್‌ಟಿಎ' ನಿರ್ಧರಿಸಿದೆ. ಕೈಬರಹದಲ್ಲಿನ ಸಂಭಾವ್ಯ ಪ್ರಶ್ನೆಪತ್ರಿಕೆ ವಿವಿಧ ರಾಜ್ಯಗಳಲ್ಲಿನ ಸಾವಿರಾರು ಅಭ್ಯರ್ಥಿಗಳ ಕೈಸೇರಿದೆ ಎಂದು ಹೇಳಲಾಗುತ್ತಿದೆ. ಪರೀಕ್ಷೆ ನಡೆದು ಒಂದು ವಾರವಾದ ಬಳಿಕ ಅಚಾತುರ್ಯ ಬೆಳಕಿಗೆ ಬಂದಿದ್ದು, 2024ರ ಪರಿಸ್ಥಿತಿಯೇ ಈಗಲೂ ಮುಂದುವರಿದಿರುವುದನ್ನು ಈ ಬೆಳವಣಿಗೆ ಸೂಚಿಸುವಂತಿದೆ. ಈ ಹಿಂದೆಯೂ ಇಂತಹ ಸೋರಿಕೆಗಳು ನಡೆದು, ಪತ್ತೆಯಾಗದೆ ಉಳಿದಿರಬಹುದೇ ಎನ್ನುವ ಗಂಭೀರ ಪ್ರಶ್ನೆಗೂ ಪ್ರಸಕ್ತ ಘಟನೆ ಕಾರಣವಾಗಿದೆ. ಮರು ಪರೀಕ್ಷೆಯಿಂದಾಗಿ ಕೌನ್ಸೆಲಿಂಗ್, ಪ್ರವೇಶ ಪ್ರಕ್ರಿಯೆ ಹಾಗೂ ತರಗತಿಗಳ ಆರಂಭದ ವೇಳಾಪಟ್ಟಿಯಲ್ಲಿ ವ್ಯತ್ಯಯವಾಗಲಿದೆ.

'ನೀಟ್' ಪರೀಕ್ಷೆಯ ಮೂಲಕ ಎಂಬಿಬಿಎಸ್ ಪದವಿಗೆ 1.3 ಲಕ್ಷ ಪ್ರವೇಶಗಳು ದೇಶದೆಲ್ಲೆಡೆ ದೊರೆಯಲಿದ್ದು, ಸುಮಾರು 22 ಲಕ್ಷ ವಿದ್ಯಾರ್ಥಿಗಳು ಪ್ರವೇಶ ಬಯಸಿ ಪರೀಕ್ಷೆ ತೆಗೆದುಕೊಂಡಿದ್ದಾರೆ. ಈ ವಿದ್ಯಾರ್ಥಿಗಳು ತಿಂಗಳುಗಳ ಕಾಲ ಕಠಿಣ ಪರಿಶ್ರಮದ ಸಿದ್ಧತೆ ನಡೆಸಿದ್ದಾರೆ. ದೈಹಿಕ ಮತ್ತು ಮಾನಸಿಕ ಪರಿಶ್ರಮದೊಂದಿಗೆ ಹಣಕಾಸಿನ ಸಂಗತಿಯೂ ಈ ಸಿದ್ಧತೆಯ ಭಾಗವಾಗಿದೆ. ಪರೀಕ್ಷೆ ರದ್ದುಗೊಳಿಸಿ, ಮತ್ತೆ ಹೊಸದಾಗಿ ನಡೆಸುವುದು ವಿದ್ಯಾರ್ಥಿಗಳಿಗೆ ಆಘಾತ ಉಂಟುಮಾಡುವಂತಿದೆ, ಅವರ ಮೇಲೆ ಎಸಗುತ್ತಿರುವ ಕ್ರೌರ್ಯವಾಗಿದೆ; ಈ ಪ್ರಕ್ರಿಯೆ ಸಂಪನ್ಮೂಲಗಳ ಅಪವ್ಯಯಕ್ಕೂ ಅವಕಾಶ ಕಲ್ಪಿಸುತ್ತಿದೆ. ಪರೀಕ್ಷಾ ಪದ್ಧತಿಯ ಸುಧಾರಣೆಯೊಂದಿಗೆ, ರಾಜ್ಯಮಟ್ಟದ ಪ್ರವೇಶ ಪ್ರಕ್ರಿಯೆಗಳಲ್ಲಿದ್ದ ಅಸಮಾನತೆಗಳನ್ನು ಹೋಗಲಾಡಿಸಿ ರಾಷ್ಟ್ರೀಯ ವೇದಿಕೆಯನ್ನು ರೂಪಿಸುವ ಉದ್ದೇಶದಿಂದ 2017ರಲ್ಲಿ 'ಎನ್‌ಟಿಎ' ರೂಪುಗೊಂಡಿತು. ಆದರೆ, ಪ್ರಶ್ನೆಪತ್ರಿಕೆ ಸೋರಿಕೆ, ರ‍್ಯಾಂಕಿಂಗ್ ವಿವಾದಗಳು ಹಾಗೂ ಕೃಪಾಂಕಗಳಿಗೆ ಸಂಬಂಧಿಸಿದ ವಿವಾದಗಳನ್ನೂ, ಅಸಮರ್ಪಕ ಕಾರ್ಯವಿಧಾನದ ಆರೋಪಗಳನ್ನೂ 'ಎನ್‌ಟಿಎ' ಆರಂಭದಿಂದಲೂ ಎದುರಿಸುತ್ತಿದೆ. ಪರೀಕ್ಷಾ ಪ್ರಕ್ರಿಯೆ ಬಲಪಡಿಸುವುದಾಗಿ ಮತ್ತು ಉತ್ತಮ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡುತ್ತಲೇ ಇದೆ. ಆದರೆ, ಈಗಿನ ಸೋರಿಕೆ ಪ್ರಕರಣವು ಹಳೆಯ ತಪ್ಪುಗಳಿಂದ 'ಎನ್‌ಟಿಎ' ಹಾಗೂ ಸರ್ಕಾರ ಯಾವುದೇ ಪಾಠ ಕಲಿತಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುವಂತಿದೆ.

ತಪ್ಪುಗಳಿಂದ ಪಾಠ ಕಲಿಯದ 'ಎನ್‌ಟಿಎ' ವಿದ್ಯಾರ್ಥಿಗಳನ್ನು ಆಟಿಕೆಗಳಂತೆ ನಡೆಸಿಕೊಳ್ಳುತ್ತಿದೆ. ನಡೆದ ಪರೀಕ್ಷೆ ರದ್ದುಗೊಳಿಸಿ, ಮರು ಪರೀಕ್ಷೆ ನಡೆಸುವುದು ವಿದ್ಯಾರ್ಥಿಗಳ ಮೇಲೆ ಎಸಗುವ ಕ್ರೌರ್ಯ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲಾಗಿದ್ದು, ಈಗಾಗಲೇ ಕೆಲವರ ಬಂಧನ ನಡೆದಿದೆ. ಸೋರಿಕೆ ಎಲ್ಲಿ ಮತ್ತು ಹೇಗೆ ನಡೆಯಿತು? ಸುರಕ್ಷತಾ ಕ್ರಮಗಳು ವಿಫಲವಾದುದು ಹೇಗೆ? ಎನ್ನುವುದು ಸೇರಿದಂತೆ ಹಲವು ಪ್ರಶ್ನೆಗಳಿಗೆ ಉತ್ತರವಿನ್ನೂ ದೊರೆಯಬೇಕಾಗಿದೆ. 2024ರ ಹಗರಣದ ಸಂದರ್ಭದಲ್ಲಿ, 'ನೀಟ್' ವ್ಯವಸ್ಥೆಯನ್ನು ಸುಧಾರಿಸುವ ಬಗ್ಗೆ ಸಲಹೆಗಳನ್ನು ನೀಡುವುದಕ್ಕಾಗಿ ಇಸ್ರೊದ ಮಾಜಿ ಅಧ್ಯಕ್ಷ ಕೆ. ರಾಧಾಕೃಷ್ಣನ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಆ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲಾಗಿದೆಯೆ? ನೀಟ್ ಪರೀಕ್ಷೆಯಲ್ಲಿನ ವೈಫಲ್ಯಕ್ಕೆ ಎಲ್ಲಾ ಹಂತಗಳಲ್ಲಿಯೂ ಹೊಣೆಗಾರಿಕೆಯನ್ನು ನಿಗದಿಪಡಿಸಿ, ಹಗರಣದಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರ ವಿರುದ್ಧವೂ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಕೂಡ ಈ ವೈಫಲ್ಯದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. 550ಕ್ಕೂ ಹೆಚ್ಚು ನಗರಗಳಲ್ಲಿನ 5,500 ಕೇಂದ್ರಗಳಲ್ಲಿ ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸುವುದು 'ಎನ್‌ಟಿಎ'ಗೆ ಸವಾಲಾಗಿದೆ. ಇದಕ್ಕೆ ಅಗತ್ಯವಾದ ತಾಂತ್ರಿಕ ಹಾಗೂ ಮೂಲ ಸೌಕರ್ಯಗಳನ್ನು ದೇಶ ಹೊಂದಿದೆ. ಸಮಸ್ಯೆ ಇರುವುದು ವ್ಯಕ್ತಿಗಳ ಭಾಗವಹಿಸುವಿಕೆಯ ಹಂತದಲ್ಲಿ. ಆ ಲೋಪವನ್ನು ತುರ್ತಾಗಿ ಸರಿಪಡಿಸುವ ಹಾಗೂ 'ಎನ್‌ಟಿಎ' ಪರೀಕ್ಷೆಗಳ ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸುವ ಸವಾಲು ಸರ್ಕಾರದ ಮುಂದಿದೆ.

ಪ್ರಹಸನಕ್ಕೆ ಯಾರು ಹೊಣೆ?

ಶೃಂಗೇರಿ ಮತ ಎಣಿಕೆ, ಮರು ಮತ ಎಣಿಕೆ ಮತ್ತು ಶಾಸಕರ ನಿರಂತರ ಬದಲಾವಣೆಯು ಚುನಾವಣಾ ಆಯೋಗದ ಸಾಂಸ್ಥಿಕ ಕುಸಿತವನ್ನೂ, ಪ್ರಜಾಪ್ರಭುತ್ವದ ಅವಸಾನವನ್ನೂ ಒಟ್ಟಿಗೇ ಸಂಕೇತಿಸುತ್ತದೆ. ಈ ಪ್ರಹಸನಗಳಿಗೆ ಯಾರು ಹೊಣೆಗಾರರೇ ಇಲ್ಲವೇ?

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

'ನೀಟ್' ಪರೀಕ್ಷೆ ನಡೆಸುವಲ್ಲಿ ಕೇಂದ್ರ ಸರ್ಕಾರ ವಿಶ್ವಾಸಾರ್ಹತೆ ಕಾಯ್ದುಕೊಂಡಿಲ್ಲ. ವಿಶ್ವಾಸಾರ್ಹವಾಗಿ ಪರೀಕ್ಷೆ ನಡೆಸಲು ವಿಫಲವಾಗಿರುವ ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು. ಹಗರಣಗಳ ಅಡ್ಡೆಯಾಗಿರುವ ದೋಷಪೂರಿತ 'ನೀಟ್' ಪದ್ಧತಿಯನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕಿದೆ.

ದಿನೇಶ್ ಗುಂಡೂರಾವ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ
ಸೋಮವಾರ, 14-5-2001

• ಜಯಲಲಿತಾ ಪ್ರಚಂಡ ವಿಜಯ: ಬಂಗಾಳ ಮತ್ತೆ ಎಡರಂಗಕ್ಕೆ

ನವದೆಹಲಿ, ಮೇ 13 (ಪಿಟಿಐ, ಯುಎನ್‌ಐ)– ನಾಲ್ಕು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಹೀನಾಯ ಸೋಲುಂಟಾಗಿದೆ. ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ರಂಗವನ್ನು ದೂಳೀಪಟ ಮಾಡಿರುವ ಜಯಲಲಿತಾ ನೇತೃತ್ವದ ಎಐಎಡಿಎಂಕೆ ಪ್ರಚಂಡ ಗೆಲುವು ಸಾಧಿಸಿದೆ, ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಜಯಭೇರಿ ಬಾರಿಸಿದೆ. ತೃಣಮೂಲ ಕಾಂಗ್ರೆಸ್ ಅಬ್ಬರವನ್ನು ಹುಸಿ ಮಾಡಿ ಪಶ್ಚಿಮ ಬಂಗಾಳದಲ್ಲಿ ಮತ್ತೆ ಎಡರಂಗವು (ಆರನೇ ಬಾರಿಗೆ) ಅಧಿಕಾರಕ್ಕೆ ಮರಳುವ ಮೂಲಕ ರಾಜಕೀಯ ಲೆಕ್ಕಾಚಾರ ತಲೆಕೆಳಗು ಮಾಡಿದೆ. ಅಸ್ಸಾಂನಲ್ಲಿ ಕೊನೆಗಳಿಗೆಯಲ್ಲಿ ಬಿಜೆಪಿ ಜತೆ ಕೈಜೋಡಿಸಿದ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ್ ಮಹಂತ ನೇತೃತ್ವದ ಅಸ್ಸಾಂ ಗಣ ಪರಿಷದ್ ಮತ್ತು ಬಿಜೆಪಿ ಮೈತ್ರಿಕೂಟಕ್ಕೆ ಭಾರಿ ಹಿನ್ನಡೆ ಉಂಟಾಗಿದೆ.

75 ವರ್ಷಗಳ ಹಿಂದೆ
ಸೋಮವಾರ, 14-5-1951

• ತಟಸ್ಥ ವ್ಯಕ್ತಿಯ ನಿರ್ದೇಶನದ ಜನಮತಗಣನೆಗೆ ಕಾಶ್ಮೀರ ಸಿದ್ಧ: ಷೇಕ್ ಅಬ್ದುಲ್ಲಾ

ಶ್ರೀನಗರ, ಮೇ 13– ಜನಮತಗಣನೆಗೆ ಕಾಶ್ಮೀರ ಸಿದ್ಧವಾಗಿ ಇದೆ. ಆದರೆ, ಅದನ್ನು ನಡೆಸುವವರು ನಿಜವಾಗಿ ತಟಸ್ಥರಾಗಿದ್ದು, ಕಾಶ್ಮೀರದ ಪ್ರಜಾ ಬದ್ಧ ಸರ್ಕಾರದಿಂದ ಅಧಿಕಾರ ಪಡೆದವರಾಗಿರಬೇಕಲ್ಲದೆ ಕಾಶ್ಮೀರದ ಪೂರ್ಣ ಪ್ರದೇಶವನ್ನು ಕ್ರಮಬದ್ಧ ಸರ್ಕಾರದ ಅಧೀನಕ್ಕೆ ವಹಿಸಬೇಕು ಎಂದು ಕಾಶ್ಮೀರದ ಪ್ರಧಾನಿ ಷೇಕ್ ಮಹಮದ್ ಅಬ್ದುಲ್ಲಾರವರು, ಕಾಶ್ಮೀರದಲ್ಲಿ ಪ್ರವಾಸ ಮಾಡುತ್ತಿರುವ ಮುಂಬೈನ ವಿದ್ಯಾರ್ಥಿಗಳ ಗುಂಪೊಂದು ಹಾಕಿದ ಪ್ರಶ್ನೆಗಳಿಗೆ ಉತ್ತರವಾಗಿ ಈ ದಿನ ಹೇಳಿದರು. ವಿಶ್ವಸಂಸ್ಥೆಯ ಕಾಶ್ಮೀರ ವಿವಾದದ ಹೊಸ ಪ್ರತಿನಿಧಿ ಡಾ. ಫ್ರಾಂಕ್ ಗ್ರಹಾಮ್ ಬಗ್ಗೆ ಹಾಕಿದ ಪ್ರಶ್ನೆಗೆ ನೇರವಾಗಿ ಉತ್ತರ ಕೊಡದೆ, ತಮ್ಮ ವಿದೇಶಾಂಗ ವ್ಯವಹಾರಗಳನ್ನು ಒಪ್ಪಿಸಿರುವ ಪ್ರಧಾನಿ ನೆಹರೂರವರಲ್ಲಿ ಕಾಶ್ಮೀರಿಗಳಿಗೆ ಅಚಲ ನಂಬಿಕೆಯಿದೆ ಎಂದು ಹೇಳಿ ಅಬ್ದುಲ್ಲಾ ಅವರು ಸುಮ್ಮನಾದರು.

ಅಶ್ವಿನಿ, ಭಾವಿನಿ, ಆಕಾಶಗಾಮಿನಿ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಈ ಕಡೆ ಐದು ರಾಜ್ಯಗಳ ಚುನಾವಣಾ ಗಲಾಟೆ; ಆ ಕಡೆ ಹೊರ್ಮುಜ್ ಜಲಸಂಧಿಯಲ್ಲಿ ಟ್ರಂಪ್ ತರಾಟೆ. ಈ ನಡುವೆ ಯುವಜನರ ಮೊಬೈಲ್‌ಗಳಲ್ಲಿ ಐಪಿಎಲ್ ಭರಾಟೆ. ತಿಂಗಳಿಂದ ಸುತ್ತುತ್ತಿದ್ದ ಇಂಥ ಸುದ್ದಿಸುಳಿಗಳ ಮಧ್ಯೆ ಮಲೆನಾಡಿನಲ್ಲಿ ಬೇರೆಯದೇ ಕತೆಯ ಕೊಳ್ಳಿ ಹೊತ್ತಿಕೊಂಡಿತ್ತು. ಅಲ್ಲಿನ ನೀರವ ಹಳ್ಳಿಗಳಲ್ಲಿ ವಿಮಾನಗಳ ಸದ್ದು ದಿನದಿನಕ್ಕೆ ಜೋರಾಗತೊಡಗಿತ್ತು. ಆಕಾಶದಲ್ಲೇ ನೇಗಿಲ ಉಳುಮೆ ಮಾಡುವಂತೆ, ಅದೂ ಅಡಿಕೆ ಮರಗಳನ್ನೇ ಸವರಿಕೊಂಡು ಹೋಗುವಷ್ಟು ಸಮೀಪದಲ್ಲಿ, ವಿಮಾನಗಳು ಪದೇ ಪದೇ ಹಾರಾಟ ನಡೆಸುತ್ತಿದ್ದವು.

ಆತಂಕದಲ್ಲಿದ್ದ ಜನರ ಮೇಲೆ ಸುದ್ದಿಯ ಬಾಂಬೂ ಬಿತ್ತು: ಹೆಗ್ಗೋಡಿನ ಸಮೀಪ ಬೇಸೂರು ಎಂಬ ಹಳ್ಳಿಯ ಬಳಿ ಪರಮಾಣು ಸ್ಥಾವರವೊಂದರ ನಿರ್ಮಾಣಕ್ಕೆ ಜಾಗ ಆಯ್ಕೆ ಆಗಿದೆ ಎಂಬ ವರದಿಗಳು ಏಪ್ರಿಲ್ ಕೊನೆಯ ವಾರದಲ್ಲಿ ಪತ್ರಿಕೆಗಳಲ್ಲಿ ಬಂದವು. ಲಿಂಗನಮಕ್ಕಿ ಜಲಾಶಯದ ಹಿನ್ನೀರಿನ ಅಂಚಿನ ಅರಣ್ಯದ ಮಧ್ಯೆ 900 ಎಕರೆ ಭೂಮಿಯನ್ನು ಪರಮಾಣು ವಿದ್ಯುತ್ ಯೋಜನೆಗೆ ಬಿಟ್ಟುಕೊಡ್ತೀರಾ ಎಂದು ಕೇಳಿ ಕೋಳೂರು ಗ್ರಾಮ ಪಂಚಾಯ್ತಿಗೆ ಔಪಚಾರಿಕ ಸರ್ಕಾರಿ ಪತ್ರ ಬಂದಿದ್ದೂ ಖಚಿತವಾಯಿತು. ತಲೆಯ ಮೇಲೆ ವಿಮಾನ ಹಾರಾಟ, ಕೊಲ್ಲಿ ಯುದ್ಧದಿಂದಾಗಿ ಇಂಧನ ಬಿಕ್ಕಟ್ಟು, ಪರಮಾಣು ವಿದ್ಯುತ್ ಯೋಜನೆಯ ಪ್ರಸ್ತಾವ, ಎಲ್ಲವೂ ಒಟ್ಟೊಟ್ಟಾಗಿ ಬಂದಿದ್ದರಿಂದ ಜನರು ದಿಕ್ಕೆಟ್ಟು ಕೂತರು. ಅಲ್ಲಿಂದ 80 ಕಿ.ಮೀ. ದೂರದಲ್ಲಿರುವ ಕೈಗಾ ಪರಮಾಣು ಸ್ಥಾವರದ ಕಥಿತ ಪರಿಣಾಮಗಳನ್ನು ಕೇಳಿದವರು ಸಾಗರದ ಪ್ರತಿಭಟನಾ ಕಾರ್ಯಕ್ರಮಗಳಲ್ಲೂ ಪಾಲ್ಗೊಂಡರು.

ಜನರನ್ನು ಕತ್ತಲಲ್ಲಿಟ್ಟೇ ಕಾರ್ಯಾಚರಣೆಗೆ ಇಳಿಯುವ ಅಧಿಕಾರಶಾಹಿ ಧೋರಣೆಗೆ ಇದು ತಾಜಾ ಉದಾಹರಣೆ ಎನಿಸಿತು. ಇಲ್ಲಿ 1960ರಲ್ಲಿ ಕಟ್ಟಿದ ಲಿಂಗನಮಕ್ಕಿ ಅಣೆಕಟ್ಟಿನ ಲಾಭ–ನಷ್ಟದ ಬಗ್ಗೆ ಸರ್ಕಾರಿ ವರದಿ ಇದುವರೆಗೂ ಇಲ್ಲ; ಪರಿಹಾರ–ಪುನರ್ವಸತಿ ಏನೂ ಇಲ್ಲದೆ ಕತ್ತಲ ತ್ರಿಶಂಕುಗಳಲ್ಲಿ ಬದುಕಿರುವ ಮತದಾರರ ಬಗ್ಗೆ ಇಂದಿಗೂ ಸಮೀಕ್ಷೆ ನಡೆದಿಲ್ಲ. ಮುಳುಗಡೆಯ ಹೆಸರಿನಲ್ಲಿ ಹೆಚ್ಚುವರಿ ಅರಣ್ಯವನ್ನು ಕಡಿದು ಮಾರಿದ ಜಾಗದಲ್ಲಿ ಅಕೇಶಿಯಾ ಬಿಟ್ಟು ಬೇರೇನು ನೆಟ್ಟಿದ್ದೇವೆಂಬ ವರದಿ ಇಲ್ಲ. ವಿವಾದದ ಬಿರುಗಾಳಿ ಎಬ್ಬಿಸಿಹೋದ ಗಾಡ್ಗೀಳ್–ಕಸ್ತೂರಿ ರಂಗನ್ ವರದಿಗಳ ಸಾರ ಏನಿತ್ತೆಂಬುದನ್ನು ಕನ್ನಡದಲ್ಲಿ ಕೊನೆಗೂ ಸರ್ಕಾರ ಕೊಟ್ಟಿಲ್ಲ. ಅಲ್ಲೇ ಪಕ್ಕದ ಪಂಪ್ಡ್ ಸ್ಟೋರೇಜ್ ನಿರ್ಮಾಣದ ವಿಸ್ತೃತ ಯೋಜನಾ ವರದಿಯನ್ನೂ (ಡಿಪಿಆರ್) ವಿದ್ಯುತ್ ನಿಗಮ ಇದುವರೆಗೆ ಬಿಡುಗಡೆ ಮಾಡಿಲ್ಲ.

ಈಗಿನ ಸಂದರ್ಭವಂತೂ ಇನ್ನೂ ಘನಗೋಜಲು. ವಾಸ್ತವ ಏನೆಂದರೆ, ವಿಮಾನ ಹಾರಾಟಕ್ಕೂ ಕೊಲ್ಲಿ ಯುದ್ಧಕ್ಕೂ ಪರಮಾಣು ಯೋಜನೆಗೂ ಪರಸ್ಪರ ಸಂಬಂಧ ಇಲ್ಲ. ನ್ಯೂಕ್ಲಿಯರ್ ಸ್ಥಾವರಕ್ಕೆ ಸ್ಥಳ ನಿಗದಿಗೆಂದು ವೈಮಾನಿಕ ಸಮೀಕ್ಷೆಯ ಅಗತ್ಯವಿಲ್ಲ. ಅದಕ್ಕೆ ಬೇಕಾದುದು ನೀರಿನ ಲಭ್ಯತೆ, ನಿರ್ಜನ ಪ್ರದೇಶದ ವಿಸ್ತೀರ್ಣ ಇಷ್ಟೆ. ಅವೆರಡನ್ನೂ ಗೂಗಲ್ ನಕ್ಷೆಯಲ್ಲಿ ನಾವೂ ನೋಡಬಹುದು. ನೆಲದೊಳಗಿನ ಶಿಲಾರಚನೆ ಎಂಥದ್ದಿದ್ದರೂ ನಡೆದೀತು. ಹಾಗಿದ್ದರೆ ವಿಮಾನ ಸಮೀಕ್ಷೆಯ ಉದ್ದೇಶ ಏನು? ಅದರ ಕತೆ ಬೇರೆಯೇ ಇದೆ; ತುಸು ಉದ್ದ ಇದೆ. ಇಂದಿನ ಎಐ ಯುಗ, ಕ್ವಾಂಟಮ್ ಯುಗ, ಹೊಸ ಶಕ್ತಿಮೂಲಗಳ ಯುಗಕ್ಕೆ ಹೊಸ ಹೊಸ ಧಾತುಗಳು ಬೇಕು. ಚಿನ್ನಕ್ಕಿಂತ ಹೆಚ್ಚು ಬೆಲೆಬಾಳುವ, ಆದರೆ ಅತ್ಯಲ್ಪ ಪ್ರಮಾಣದಲ್ಲಿ ಸಿಗುವ ಅದೆಷ್ಟೊ ಅಪರೂಪದ ಲೋಹಗಳಿಗೆ ಭಾರೀ ಬೇಡಿಕೆ ಬರುತ್ತಿದೆ. ಇಲೆಕ್ಟ್ರಿಕ್ ವಾಹನ, ಗಾಳಿಯಂತ್ರ, ಸೋಲಾರ್ ಬಿಲ್ಲೆ, ಕಂಪ್ಯೂಟರ್ ಚಿಪ್, ಮತ್ತು ಮಿಲಿಟರಿ ಹೈಟೆಕ್ ಸಾಧನಗಳಿಗೆಲ್ಲ ಟರ್ಬಿಯಮ್, ಸ್ಕ್ಯಾಂಡಿಯಮ್, ಲುಟೆಟಿಯಂ, ಯುರೋಪಿಯಂ, ನಿಯೊಡೈಮಿಯಂ ಮುಂತಾದ ದುರ್ಲಭ ದ್ರವ್ಯಗಳು ಬೇಕು. ಹಾಗಾಗಿ ಎಲ್ಲ ಸುಧಾರಿತ ದೇಶಗಳೂ ತಮ್ಮಲ್ಲಿರುವ ನಿಕ್ಷೇಪವನ್ನು ಶೋಧಿಸಿ, ಶೇಖರಿಸಿ, ಬಚ್ಚಿಟ್ಟುಕೊಳ್ಳುವ ಅಥವಾ ಬೇರೆ ದೇಶದಲ್ಲಿದ್ದರೆ ವಶಪಡಿಸಿಕೊಳ್ಳುವ ಹಪಹಪಿಯಲ್ಲಿವೆ. ನಾವು ಅವನ್ನು ನಮ್ಮ ನೆಲದಲ್ಲೇ ಹುಡುಕಬೇಕಿದೆ.

ಸಾಗರದ ಸಮೀಪದ ದಟ್ಟ ಕಾಡಿನ ಬೇಸೂರು ಎಂಬಲ್ಲಿ ಕೈಗಾ ಮಾದರಿಯ ಹೊಸ ಪರಮಾಣು ಸಂಕೀರ್ಣಕ್ಕೆ ಸ್ಥಳ ಸಮೀಕ್ಷೆ ನಡೆದಿದೆ. ನಿರಂತರ ವಿಮಾನಗಳ ಹಾರಾಟ ನಡೆದಿದೆ. ಕತ್ತಲಲ್ಲಿ ಕೊಳ್ಳಿದೆವ್ವ ಕಂಡಂತೆ ಜನ ಕಂಗಾಲಾಗಿದ್ದಾರೆ. ವಾಸ್ತವ ಏನು?

ಪಶ್ಚಿಮಘಟ್ಟಗಳಲ್ಲಿ 250 ಕೋಟಿ ವರ್ಷಗಳ ಹಳೇ ಶಿಲಾಪದರಗಳಲ್ಲಿ ಅಂಥ ರೇಕುಗಳಿವೆಯೇ ಶೋಧ ಮಾಡೋಣವೆಂದರೆ ಅದು ದುರ್ಗಮ ನಿಸರ್ಗ. ವಿಮಾನದ ಮೂಲಕವೇ ಸ್ಕ್ಯಾನ್ ಮಾಡಬೇಕು. ಭೂಮಿಯ ಆಳಕ್ಕೆ ಸಿಗ್ನಲ್ ಕಳಿಸಿ ಅದರ ಸ್ಪಷ್ಟ ಪ್ರತಿಫಲನ ಪಡೆಯಬೇಕೆಂದರೆ ನೆಲಕ್ಕೆ ಆದಷ್ಟು ಸಮೀಪದಲ್ಲೇ ಹಾರಾಟ ನಡೆಸಬೇಕು. ಇಲ್ಲಾಂದರೆ ಅಲ್ಲಿನ ದಟ್ಟ ಗಿಡಮರಗಳು ಗುಟ್ಟು ಬಿಟ್ಟುಕೊಡೋದಿಲ್ಲ. ಅದಕ್ಕೇ ಅಂಥ ವಿಶೇಷ ನಿಕ್ಷೇಪಗಳ ಪತ್ತೆಗೆ ಅತಿಸೂಕ್ಷ್ಮ ಸ್ಕ್ಯಾನರ್ ಯಂತ್ರಗಳನ್ನು ಹೊತ್ತ, ಅತಿ ಚಾಣಾಕ್ಷ ಪೈಲಟ್ ಇರುವ ವಿಮಾನಗಳೇ ಬೇಕು. ಮುಂಬೈಯ 'ಎಕ್ಸ್‌ಕ್ಯಾಲಿಬರ್' ಕಂಪನಿಗೆ ಹೀಗೆ ವೈಮಾನಿಕ ಸ್ಕ್ಯಾನಿಂಗ್ ಮಾಡುವ ಗುತ್ತಿಗೆ ನೀಡಲಾಗಿದೆ. ಇದು ರಾಷ್ಟ್ರೀಯ ಭದ್ರತಾ ಕಾರ್ಯಾಚರಣೆ.

ಇನ್ನು ಪರಮಾಣು ಸ್ಥಾವರಕ್ಕೆ ಜಾಗ ಹುಡುಕುವ ಪ್ರಶ್ನೆ. ದುರ್ಲಭ ನಿಕ್ಷೇಪಗಳ ಶೋಧದ ಹಾಗೇ ಇದೂ ರಾಷ್ಟ್ರದ ಭದ್ರತೆಯ ಕಾರ್ಯಾಚರಣೆ ಎಂದೇ ಹಣೆಪಟ್ಟಿ ಪಡೆದಿದೆ. ಕಲ್ಲಿದ್ದಲು, ಪೆಟ್ರೋಲಿಯಂನಂಥ ಕೊಳಕು ಇಂಧನಗಳ ಬದಲಿಗೆ ಬಿಸಿಲು, ಗಾಳಿಯಂಥ ಶುದ್ಧ ಶಕ್ತಿಮೂಲಗಳ ಬಳಕೆಗೆ ಎಲ್ಲೆಡೆ ಆದ್ಯತೆ ಹೆಚ್ಚುತ್ತಿದೆ. ಪರಮಾಣು ಇಂಧನವನ್ನು ಉರಿಸಿದರೆ ಹೊಗೆ ಬರುವುದಿಲ್ಲ ಎಂಬ ಕಾರಣಕ್ಕೆ ಅದನ್ನೂ 'ಶುದ್ಧ ಶಕ್ತಿಮೂಲ'ಗಳ ಸಾಲಿಗೇ ಸೇರಿಸಲಾಗಿದೆ (ಅದಕ್ಕೆಂದು ಯುರೇನಿಯಂ ಗಣಿ ಅಗೆತ, ಸ್ಥಾವರ ನಿರ್ಮಾಣಕ್ಕೆಂದು ಹೆದ್ದಾರಿ ನಿರ್ಮಾಣ, ಕಲ್ಲುಬಂಡೆ ಸಾಗಾಟ, ಉಕ್ಕು–ಸಿಮೆಂಟ್, ಯಂತ್ರೋಪಕರಣಗಳ ಬಳಕೆ, ಆಮೇಲೆ ಅಪಾಯಕಾರಿ ಪರಮಾಣು ತ್ಯಾಜ್ಯ ವಿಲೇವಾರಿಗೆ ಖರ್ಚಾಗುವ ಶಕ್ತಿ ಇವೆಲ್ಲವುಗಳ ಲೆಕ್ಕಾಚಾರ – ಅದು ಮುಂದಿನ ತಲೆಮಾರಿಗೆ ಬಿಟ್ಟ ವಿಚಾರ). ವಿಷಯ ಏನೆಂದರೆ, ಭಾರತಕ್ಕೆ ಪರಮಾಣು ವಿದ್ಯುತ್ ತೀರಾ ಅಗತ್ಯವಿದೆಯೆಂದೂ, ಅದಕ್ಕೆ ಬೇಕಿದ್ದ ತಂತ್ರಜ್ಞಾನವನ್ನು ತಾನು ಕೊಡುತ್ತೇನೆಂದೂ ಅಮೆರಿಕ ನಮ್ಮ ಮೇಲೆ ಒತ್ತಾಯ ಹೇರುತ್ತ ಬಂದಿದೆ. ಆ ಒತ್ತಾಯಕ್ಕೆ ಮಣಿದು ಪರಮಾಣು ತಂತ್ರಜ್ಞಾನದ ವಿಷಯದಲ್ಲಿ ವಿದೇಶೀ ಮತ್ತು ಖಾಸಗೀ ನೆರವು ಪಡೆಯಲೆಂದೇ ಈಚೆಗೆ ಹೊಸದಾಗಿ 'ಶಕ್ತಿ' ಕಾನೂನನ್ನು ರೂಪಿಸಿ ಜಗತ್ತಿಗೆ ಘೋಷಿಸಲಾಗಿದೆ. ಐವತ್ತು ವರ್ಷಗಳ ಇತಿಹಾಸದಲ್ಲಿ ಕೇವಲ ಎಂಟು ಗಿಗಾವಾಟ್ ಪರಮಾಣು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದ ಭಾರತ ಇನ್ನು 20 ವರ್ಷಗಳಲ್ಲಿ 100 ಗಿಗಾವಾಟ್‌ಗೆ ಏರಿಸುವ ಗುರಿಯನ್ನು ಇಟ್ಟುಕೊಂಡಿದೆ. ಎದ್ದುಬಿದ್ದು ತೆವಳುತ್ತಿದ್ದ ಬೇಬಿ ಸೀದಾ ಹೈಜಂಪ್‌ಗೆ ಸಜ್ಜಾಗಬೇಕು! ಅದಕ್ಕೆ ಅವಸರದಲ್ಲಿ 'ಶಕ್ತಿ'ಯನ್ನು ತುಂಬಬೇಕು. ಪ್ರತಿ ರಾಜ್ಯದಲ್ಲೂ ಹೊಸ ನ್ಯೂಕ್ಲಿಯರ್ ಸ್ಥಾವರಗಳಿಗೆಂದು ತುರ್ತಾಗಿ ನಿವೇಶನಗಳ ಆಯ್ಕೆ ಮಾಡಬೇಕು. ಅಭಿವೃದ್ಧಿಯ ಈ ಬುಲ್‌ಡೋಝರ್‌ಗೆ ಗಿಡಮರ, ಪಶುಪಕ್ಷಿ, ಶ್ರಮಿಕ ಸಮುದಾಯ, ಇಕಾಲಜಿ ಈ ಯಾವುದೂ ಲೆಕ್ಕಕ್ಕಿಲ್ಲ. ಗ್ರೇಟ್ ನಿಕೋಬಾರ್ ಮಹಾಯೋಜನೆ ಗೊತ್ತಲ್ಲ?

'ಶಕ್ತಿ'ಯ ಹೊಸ ಅವತಾರಕ್ಕೆಂದೇ ಈಗಿರುವ ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಮತ್ತು ನ್ಯಾಶನಲ್ ಥರ್ಮಲ್ ಪವರ್ ಕಾರ್ಪೊರೇಶನ್ ಎರಡನ್ನೂ ಸೇರಿಸಿ 'ಅಣು ಶಕ್ತಿ ವಿದ್ಯುತ್ ನಿಗಮ್ ಲಿಮಿಟೆಡ್' ('ಅಶ್ವಿನಿ') ಹೆಸರಿನ ಹೊಸ ಜಂಟಿ ನಿಗಮವನ್ನು ರಚಿಸಲಾಗಿದೆ. ಬಿಡಿಬಿಡಿ ಜೋಡಿಸಬಹುದಾದ 'ಮಾಡ್ಯೂಲರ್' ಪರಮಾಣು ಸ್ಥಾವರಗಳ ಅಮೆರಿಕನ್ ಮಾದರಿ ನಮ್ಮಲ್ಲೂ ಬಂದೀತು. ಅದಕ್ಕಿಂತ ಚಿಕ್ಕದಾದ, ಕಳಚಿ ಎತ್ತೊಯ್ಯಬಹುದಾದ 'ಮೈಕ್ರೊ ನ್ಯೂಕ್ಲಿಯರ್ ಪ್ಲಾಂಟ್' ಒಂದನ್ನು ಅಮೆರಿಕದ ವಾಯುಸೇನೆ ನಿರ್ಮಿಸುತ್ತಿದೆ. ಚಂದ್ರನ ಮೇಲೂ ಕೂರಿಸಬಹುದಾದ ನ್ಯಾನೊ ನ್ಯೂಕ್ಲಿಯರ್ ಪ್ಲಾಂಟ್ ಕೂಡ ತಯಾರಾಗುತ್ತಿದೆ.

ಈ ನಡುವೆ ತಮಿಳುನಾಡಿನಲ್ಲಿ ಈಚೆಗಷ್ಟೇ ಒಂದು ಹೊಸ ಶಕ್ತಿಕೇಂದ್ರ ಕಾರ್ಯಾರಂಭ ಮಾಡಿದೆ. ಜೋಸೆಫ್ ವಿಜಯ್ ಮುಖ್ಯಮಂತ್ರಿಯಾದ ಕತೆಯಲ್ಲ, ಇದು ಬೇರೆ! ಮಹಾಬಲಿಪುರಂ ಬಳಿಯ ಕಲ್ಪಾಕ್ಕಮ್ ಎಂಬಲ್ಲಿ 'ಭಾವಿನಿ' (ಭಾರತೀಯ ನಾಭಿಕೀಯ ವಿದ್ಯುತ್ ನಿಗಮ) ಹೆಸರಿನ ಪರಮಾಣು ಸಂಸ್ಥೆ ಇದೆ. ಅಲ್ಲಿ ಯುರೇನಿಯಂ ಮತ್ತು ಅದರ ಬೂದಿ ಎನ್ನಬಹುದಾದ ಪ್ಲುಟೋನಿಯಂ ಎರಡನ್ನೂ ಸೇರಿಸಿದ ಮಿಶ್ರ ಇಂಧನದ 'ಫಾಸ್ಟ್ ಬ್ರೀಡರ್' ಎಂಬ ಪರಮಾಣು ರಿಯಾಕ್ಟರ್ ಈಚೆಗಷ್ಟೆ ಚಾಲೂ ಆಗಿದೆ. ರಷ್ಯ ಒಂದನ್ನು ಬಿಟ್ಟರೆ ಜರ್ಮನಿ, ಜಪಾನ್, ಅಮೆರಿಕ, ಫ್ರಾನ್ಸ್ ಎಲ್ಲವೂ ಅಪಾರ ಹಣ ಸುರಿದು, ಅಪಾಯಕಾರಿ ಎಂದು ಕೈಬಿಟ್ಟ ತಂತ್ರಜ್ಞಾನ ಇದು. ನಮ್ಮ ಎಂಜಿನಿಯರ್‌ಗಳು ಕಳೆದ 16 ವರ್ಷಗಳ ಕಾಲ ಯತ್ನಿಸಿ ಕೊನೆಗೂ ಅಲ್ಲಿ ನ್ಯೂಕ್ಲಿಯರ್ ಅಗ್ನಿಯನ್ನು ಸೃಷ್ಟಿಸಿದ್ದಾರೆ. ರಷ್ಯದ ಮಾದರಿಗಿಂತ ತುಸು ಭಿನ್ನವಾದ ಈ ತಾಂತ್ರಿಕತೆ ಜಗತ್ತಿನಲ್ಲೇ ಮೊದಲನೆಯದು ಎನ್ನಲಾಗುತ್ತಿದೆ. ಇದಕ್ಕೆ ಪೂರ್ಣ ಚಾಲನೆ ಸಿಕ್ಕ ಮೇಲೆ 500 ಮೆಗಾವಾಟ್ ವಿದ್ಯುತ್ ಶಕ್ತಿ ಉತ್ಪಾದನೆ ಆಗುತ್ತಿರುತ್ತದೆ. ತಾನು ಉರಿಸಿದ್ದಕ್ಕಿಂತ ತುಸು ಹೆಚ್ಚು (ಶೇ 16ರಷ್ಟು) ಇಂಧನವನ್ನೂ ಹೊರ ಹಾಕುತ್ತದೆಂಬ ಅಗ್ಗಳಿಕೆ ಇದಕ್ಕೆ ಸಂದಿದೆ. ಅಂತೂ ಗಜಪ್ರಸವದ ಹೊಸ ಬೇಬಿ ಹೊಸ ಉತ್ಸಾಹ ತಂದಿತು.

ಅವೆಲ್ಲ ಅತ್ತಾಗಿರಲಿ; ಬೇಸೂರಿನ ಕತೆ ಏನು? 'ಅಶ್ವಿನಿ' ರಿಯಾಕ್ಟರ್ ಅಲ್ಲಿಗೆ ಬರುವುದೇ ನಿಕ್ಕಿ ಆದರೆ ಅದರ ವಿರುದ್ಧ ಹೋರಾಟದ ಕರೆ, ನ್ಯಾಯಾಲಯ ಮೊರೆ ಯಾವುದೂ ವರ್ಕ್ ಆಗುವುದಿಲ್ಲ. ಕೈಗಾ, ಕೂಡಂಕುಲಮ್ ಹೋರಾಟಗಳು ನೆನಪಿವೆಯೆ? 'ರಾಷ್ಟ್ರೀಯ ಭದ್ರತೆಗೆ' ಸಂಬಂಧಿಸಿದ ಯಾವ ಯೋಜನೆಗೂ ಯಾರೂ ಅಡ್ಡಿ ಮಾಡುವಂತಿಲ್ಲ. ರಿಯಾಕ್ಟರ್ ನಿಜಕ್ಕೂ ತಲೆಯೆತ್ತಿದರೆ ವಿಕಿರಣದಿಂದ ಬಚಾವಾಗುವ ವಿಧಾನವನ್ನಷ್ಟೆ ಗ್ರಾಮವಾಸಿಗಳು ಹುಡುಕಬೇಕು. ತ್ಯಾಜ್ಯ ವಿಲೇವಾರಿ ಬಗ್ಗೆ ಚಿಂತಿಸಬೇಕಿಲ್ಲ. ನಮ್ಮದು 'ಬಯಲು ಶೌಚಮುಕ್ತ' ದೇಶ ಆಗಿರುವುದರಿಂದ ಪರಮಾಣು ತ್ಯಾಜ್ಯಗಳನ್ನೂ ಅಲ್ಲಲ್ಲೇ ಹೂತಿಟ್ಟುಕೊಂಡಾರೆ ವಿನಾ ಲಿಂಗನಮಕ್ಕಿ ಜಲಾಶಯಕ್ಕೆ ಬಿಡಲಿಕ್ಕಿಲ್ಲ. ಆದರೆ ಹೊರಕ್ಕೆ ಸೂಸುವ ವಿಕಿರಣ? ಅದರ ನಿಗ್ರಹಕ್ಕೂ ಆಶಾಕಿರಣ ಇದೆ! 'ಹರ್ ಘರ್ ಜಲ್' ಯೋಜನೆಯಡಿ ರಾಷ್ಟ್ರಾದ್ಯಂತ ಒಣ ನಲ್ಲಿಗಳ ಜಾಲವನ್ನೇ ಬಿಚ್ಚಿ ಜೈಕಾರ ಗಿಟ್ಟಿಸಿದ ದೇಶ ಇದು. ಸಹಸ್ರಾರು ಕೋಟಿ ಹಣದಲ್ಲಿ ಪರಮಾಣುಗುಮ್ಮಟ ಎದ್ದು ನಿಂತರೂ ಅದರಲ್ಲಿ ಇಂಧನ ಉರಿಸಿದರೆ ತಾನೆ ವಿಕಿರಣಗಳ ಗುಮ್ಮ ಏಳೋದು?

ವಾಚಕರ ವಾಣಿ

ನೀಟ್: ಕೇಂದ್ರದ ಲೊಳಲೊಟ್ಟೆ ಬಯಲು

ನೀಟ್ ರದ್ದಾಗಿರುವುದು ವಿದ್ಯಾರ್ಥಿಗಳಿಗೆ ಬಗೆದ ದ್ರೋಹ. ಎರಡು ವರ್ಷಗಳ ನಿರಂತರ ಅಧ್ಯಯನ ಮಾಡಿದ್ದ ವಿದ್ಯಾರ್ಥಿಗಳ ಕನಸುಗಳಿಗೆ ಕೇಂದ್ರ ಸರ್ಕಾರ ಒಂದೇ ಏಟಿಗೆ ಕೊಳ್ಳಿ ಇಟ್ಟಿದೆ. ಚುನಾವಣೆ ನಡೆಸುವುದು, ಸಭೆ, ಸಮಾರಂಭ ನಡೆಸಿ ಸಾಧನೆಗಳ ಬಗ್ಗೆ ಡಂಗುರ ಸಾರುವುದಷ್ಟೇ ಆಳುವ ಸರ್ಕಾರದ ಬದ್ಧತೆಯಲ್ಲ; ಪಾರದರ್ಶಕವಾಗಿ ಪರೀಕ್ಷೆ ನಡೆಸುವುದೂ ಬದ್ಧತೆಯಾಗಿದೆ. ಮರುಪರೀಕ್ಷೆಗೆ ಆದೇಶ ಮಾಡುವುದು ಸುಲಭ. ಆದರೆ, ವಿದ್ಯಾರ್ಥಿಗಳು ಮತ್ತೆ ಪರೀಕ್ಷೆಗೆ ಮಾನಸಿಕವಾಗಿ ಸಿದ್ಧರಾಗುವುದು ಅಷ್ಟು ಸುಲಭವಲ್ಲ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯು ಇದೇ ಮೊದಲೂ ಅಲ್ಲ. ಮುಂಜಾಗ್ರತಾಕ್ರಮ ವಹಿಸದಿರುವುದು ಸರ್ಕಾರದ ಲೋಪ; ವಿದ್ಯಾರ್ಥಿಗಳ ಬದುಕಿನೊಂದಿಗೆ ಚೆಲ್ಲಾಟವಾಗುವುದು ಶೋಭೆ ತರುವುದಿಲ್ಲ.

ಶಿವರಾಮ ಮಿಡಿಗೇಶಿ, ಬೆಂಗಳೂರು

'ಅತಿಥಿ'ಗಳಿಗೆ ಘನತೆಯ ಬದುಕು ಬೇಡವೆ?

ಖಾಸಗಿ ಶಾಲೆ–ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ಸಾವಿರಾರು ಅತಿಥಿ ಶಿಕ್ಷಕರು–ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಸರ್ಕಾರ ನಿಗದಿಪಡಿಸಿರುವ ಗೌರವಧನ ಸಿಗುತ್ತಿದೆ. ಆದರೆ ಭವಿಷ್ಯನಿಧಿ, ಇಎಸ್‌ಐ ಸೌಲಭ್ಯ ದೊರೆಯುತ್ತಿಲ್ಲ. ಸಣ್ಣ ಕಂಪನಿಯ ನೌಕರನಿಗೆ ಸಿಗುವ ಸಾಮಾಜಿಕ ಭದ್ರತೆ ಇವರಿಗೇಕಿಲ್ಲ? ಇಪಿಎಫ್ ಮತ್ತು ಇಎಸ್‌ಐ ಕಾನೂನುಗಳನ್ನು ಉಲ್ಲಂಘಿಸಲಾಗುತ್ತಿದೆ. ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ಖಂಡನೀಯ. ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಅತಿಥಿ ಶಿಕ್ಷಕರು, ಉಪನ್ಯಾಸಕರಿಗೂ ಸಾಮಾಜಿಕ ಭದ್ರತಾ ಸೌಲಭ್ಯ ಕಲ್ಪಿಸಬೇಕಿದೆ. ಅವರಿಗೆ ಘನತೆಯಿಂದ ಬದುಕಲು ಅವಕಾಶ ನೀಡಬೇಕಿದೆ.

ಎಸ್. ನಾಗರಾಜ ನಾಗೂರ, ಬಾಗಲಕೋಟೆ

ಅಗ್ನಿವೀರರ ತ್ಯಾಗ ಮಣ್ಣುಪಾಲಾಗದಿರಲಿ

ಅಗ್ನಿವೀರರು ಸಾಮಾನ್ಯ ಯೋಧರ ಸಮಾನ ಸ್ಥಾನಮಾನ ಹೊಂದಿಲ್ಲ; ಕರ್ತವ್ಯದ ವೇಳೆ ಮೃತಪಟ್ಟರೆ ಅವರ ಕುಟುಂಬಕ್ಕೆ ಸಾಮಾನ್ಯ ಯೋಧರಿಗೆ ನೀಡುವಂತೆ ಪಿಂಚಣಿ ಸೌಲಭ್ಯ ನೀಡಲಾಗದು ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಹೇಳಿಕೆಯು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ವೀರರನ್ನು ಕುಚೋದ್ಯ ಮಾಡಿದಂತಿದೆ. ಉಳಿದ ಸಂದರ್ಭಗಳಲ್ಲಿ ಅರೆಕಾಲಿಕ ಅಗ್ನಿವೀರರನ್ನು ಸಾಮಾನ್ಯ ಯೋಧರಂತೆ ನೋಡಲಾಗದಿದ್ದರೂ, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದಾಗ ಅವರನ್ನು ಗೌರವದಿಂದ ಕಾಣಬೇಕು. ವೀರಯೋಧರು ಎಂದೇ ಪರಿಗಣಿಸಿ ಅವರ ಕುಟುಂಬಸ್ಥರಿಗೆ ಸಾಮಾನ್ಯ ಯೋಧನಿಗೆ ಸಿಗುವಂತೆ ಪಿಂಚಣಿ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಬೇಕು.

ರವಿಕಿರಣ್ ಶೇಖರ್, ಬೆಂಗಳೂರು

ಪೊಲೀಸರ ಭ್ರಷ್ಟಾಚಾರ: ಬೇಕಿದೆ ಸರ್ಜರಿ

ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಮಾನತು ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಸರ್ಕಾರ ಮತ್ತು ಪೊಲೀಸ್ ಇಲಾಖೆಯ ಅವಲೋಕನಕ್ಕೆ ಇದು ಸಕಾಲ. ಗುರುತರ ಆರೋಪಗಳಲ್ಲಿ ಅಮಾನತು ಆದವರ ಸಂಖ್ಯೆಯಲ್ಲಿನ ಹೆಚ್ಚಳವು ಇಲಾಖೆಯ ಬಗ್ಗೆ ಸಾರ್ವಜನಿಕರಲ್ಲಿ ತಾತ್ಸಾರದ ಮನೋಭಾವ ಮೂಡಿಸುತ್ತದೆ. ಪರೋಕ್ಷವಾಗಿ ಇದು ಸರ್ಕಾರಕ್ಕೂ ಕೆಟ್ಟ ಹೆಸರು ತರುತ್ತದೆ. ಪೊಲೀಸರ ವರ್ಗಾವಣೆಯಲ್ಲಿ ಭ್ರಷ್ಟಾಚಾರ ಬೇರುಬಿಟ್ಟಿದೆ. ವರ್ಗಾವಣೆಗೆ ಹಣ ನೀಡುವ ಅಧಿಕಾರಿಗಳು ತಾವು ಪಾವತಿಸಿದ ಹಣದ ದುಪ್ಪಟ್ಟು ದುಡಿಯುವುದನ್ನೇ ಕಾಯಕ ಮಾಡಿಕೊಳ್ಳುತ್ತಾರೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವುದು ಉನ್ನತ ಅಧಿಕಾರಿಗಳ ಜವಾಬ್ದಾರಿ. ಉದಾಸೀನ ತಳೆದರೆ ಅವರು ಕೂಡ ಸಿಬ್ಬಂದಿಯ ಕುಕೃತ್ಯಗಳಲ್ಲಿ ಪಾಲುದಾರರು ಎಂಬ ಅನುಮಾನ ಮೂಡದಿರದು. ಸರ್ಕಾರವು ಎಚ್ಚೆತ್ತುಕೊಂಡು ಪೊಲೀಸ್ ಇಲಾಖೆಗೆ ಸರಿಯಾದ ಸರ್ಜರಿ ಮಾಡಬೇಕಿದೆ. ಇಲ್ಲದಿದ್ದರೆ ರಾಜ್ಯದ ಸ್ಥಿತಿ ಮತ್ತಷ್ಟು ಹದಗೆಡಲಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

'ಮಿತವ್ಯಯ' ಎನ್ನುವ ಭಾರತೀಯ ಮೌಲ್ಯ

ಭಾರತದ ಅತಿಹೆಚ್ಚು ವಿದೇಶಿ ವಿನಿಮಯವು ಇಂಧನಕ್ಕಾಗಿ ಖರ್ಚಾಗುತ್ತದೆ. ಜೊತೆಗೆ ಬಂಗಾರ, ವಿದೇಶಿ ಪ್ರವಾಸದಂತಹ ಐಷಾರಾಮಿ ಸಂಗತಿಗಳು ವಿದೇಶಿ ವಿನಿಮಯದ ಖೋತಾಕ್ಕೆ ಪ್ರಮುಖ ಕಾರಣವಾಗಿವೆ. ಯಾವಾಗ ಆಮದು ಹೆಚ್ಚಾಗುತ್ತಾ ನಿರ್ಯಾತ ಕಡಿಮೆಯಾಗುತ್ತ ಸಾಗುತ್ತದೆಯೋ ಆಗ ರೂಪಾಯಿ ಮೌಲ್ಯ ಕಡಿಮೆಯಾಗುತ್ತದೆ. ಪ್ರಧಾನಿ ಮೋದಿಯವರು ಹೇಳಿದ ಮಿತವ್ಯಯ ಹೊಸದೇನೂ ಅಲ್ಲ. ನಲವತ್ತು ವರ್ಷದಿಂದಲೂ ಪರಿಸರವಾದಿಗಳು, ಆರ್ಥಿಕ ತಜ್ಞರು ಇದನ್ನೇ ಹೇಳುತ್ತಿದ್ದಾರೆ. ಅಲ್ಲದೆ, ಮಿತವ್ಯಯ ಭಾರತೀಯರ ಮೌಲ್ಯವೇ ಆಗಿದೆ. ಈಗ ಶಂಖದಿಂದಲೇ ಉಪದೇಶ ಬಂದಿದೆಯಷ್ಟೆ. ಸರ್ಕಾರ ಶಂಖ ಊದಿದರೆ ಸಾಲದು. ನೋಂದಣಿಯಾಗುವ ವಾಹನಗಳ ಸಂಖ್ಯೆ ನಿಯಂತ್ರಿಸಬೇಕು. ಪ್ರತಿಯೊಬ್ಬರು ಹೊಂದುವ ಬಂಗಾರದ ಮೇಲೆ ನಿಯಂತ್ರಣ ಬೇಕು. ಇದಕ್ಕಾಗಿ ಕಾನೂನಿನ ಮೂಗುದಾರ ಹಾಕಬೇಕು.

ಶಶಿಧರ ಪಾಟೀಲ, ಬಾಗಲಕೋಟೆ

ಎಕ್ಸ್‌ಪ್ರೆಸ್ ರೈಲು ದಿನವೂ ಸಂಚರಿಸಲಿ

ಬೆಂಗಳೂರು(ದಂಡು)–ಕಲಬುರಗಿ ವಾರದ ಎಕ್ಸ್‌ಪ್ರೆಸ್ ವಿಶೇಷ ರೈಲು ಕಾಯಂ ರೈಲಾಗಿ ಓಡಾಡಲಿದೆ. ಕಲಬುರಗಿ–ಬೆಂಗಳೂರು ನಡುವಿನ ಪ್ರಯಾಣಿಕರ ಸಾಂದ್ರತೆಗನುಗುಣವಾಗಿ ಬೇಡಿಕೆ ಪೂರೈಸುವಲ್ಲಿ ಇದೊಂದು ಸ್ವಾಗತಾರ್ಹ ಕ್ರಮ. ಆದರೆ, ಬೆಂಗಳೂರಿನಿಂದ ರಾತ್ರಿ 10ಕ್ಕೆ ಹೊರಟು ಭಾನುವಾರ ಬೆಳಗ್ಗೆ 10.20ಕ್ಕೆ ತಲಪುವ ಈ ರೈಲು, ಪುನಃ ಬೆಂಗಳೂರಿನೆಡೆಗೆ ಪಯಣ ಬೆಳೆಸುವುದು ಬೆಳಗ್ಗೆ 11.20ಕ್ಕೆ. ಇದು ಇಲಾಖೆಯ ಎಡವಟ್ಟಿನ ನಿರ್ಧಾರ ಎಂದೇ ಹೇಳಬೇಕಾಗುತ್ತದೆ. ಹಗಲಿನ ಪ್ರಯಾಣದ ಕಾರಣ ರೈಲು ಶೇ 25ರಷ್ಟು ಭರ್ತಿಯಾಗುವುದಿಲ್ಲ. ಇದೇ, ರೈಲನ್ನು ಸಂಜೆ 7ಕ್ಕೆ ಕಲಬುರಗಿ ಬಿಡುವಂತೆ ಮಾಡಬೇಕು. ಜೊತೆಗೆ, ನಿತ್ಯವೂ ಓಡಾಡುವ ಹಾಗೆ ರೈಲ್ವೆ ಮಂಡಳಿ ಅನುಮೋದಿಸಬೇಕು.

ವೆಂಕಟೇಶ್ ಮುದಗಲ್, ಕಲಬುರಗಿ

ಚುರುಮುರಿ

ದೇಶದ್ರೋಹಿ ಗಂಡ!

• ಗುರು ಪಿ.ಎಸ್.

'ರೀ, ನಾಳೆ ನನ್ ಬರ್ತ್ ಡೇ, ನೆನಪಿದೆ ತಾನೆ' ಹೊಸದೊಂದು ಅಪ್ಲಿಕೇಷನ್ ಹಾಕುವಂತೆ ಹೇಳಿದಳು ಹೆಂಡತಿ.

'ನೆನಪಿದೆ, ನೆನಪಿದೆ' ಎಂದು ಮುಖ ನೋಡದೆ ತಲೆ ಅಲ್ಲಾಡಿಸಿದೆ.

'ಮುಂದಿನ ವರ್ಷ ನಿನ್ನ ಬರ್ತ್ ಡೇಗೆ ಗೋಲ್ಡ್ ಚೈನ್ ಕೊಡಿಸ್ತೀನಿ ಅಂತ ಕಳೆದ ಸಲ ಹೇಳಿದ್ರಿ' ರಾಗ ಎಳೆದಳು.

'ಏನೂ ಅಂತ ಮಾತಾಡ್ತಿದೀಯ ನೀನು, ನನ್ನನ್ನ ದೇಶದ್ರೋಹಿ ಮಾಡಬೇಕಂತಿದೀಯೇನು' ಗಡುಸಾಗಿಯೇ ಕೇಳಿದೆ.

'ಅಯ್ಯಯ್ಯ, ಗಿಫ್ಟ್ ಕೊಡಿಸಿದ್ರೆ ಅದು ಹೆಂಗ್ ರೀ ದೇಶದ್ರೋಹಿ ಆಗ್ತೀರಿ' ಎಂದಳು ಆಶ್ಚರ್ಯದಿಂದ.

'ಬೇರೆ ಗಿಫ್ಟ್ ಕೊಡಿಸಿದ್ರೆ ಆಗಲ್ಲ, ಗೋಲ್ಡ್ ಗಿಫ್ಟ್ ಕೊಡಿಸಿದ್ರೆ ದೇಶದ್ರೋಹಿ ಆಗ್ತೀನಿ'.

'ಓಹೋ, ನಮ್ಮ ಪ್ರಧಾನಮಂತ್ರಿಗಳು ಹೇಳಿದ್ರು ಅಂತ ನೀವೀಗ ಚಿನ್ನ ಕೊಡಿಸಲ್ಲ ಅಂತಿದೀರಿ?'

'ಎಷ್ಟು ಬೇಗ ಅರ್ಥ ಮಾಡಿಕೊಂಡಲ್ಯಮ್ಮ, ಗುಡ್ ಗುಡ್' ಎನ್ನುತ್ತಾ, 'ಸಂಜೆಯಾಯ್ತು, ತಿನ್ನೋದಕ್ಕೆ ಈರುಳ್ಳಿ ಬಜ್ಜಿ ಮಾಡಿಕೊಡು. ನಿನ್ನ ಕೈಯಲ್ಲಿ ಈರುಳ್ಳಿ ಬಜ್ಜಿ ತಿನ್ನೋದೇ ಪರಮಾನಂದ' ಪೂಸಿ ಹೊಡೆಯುವವನಂತೆ ಹೇಳಿದೆ.

'ನೀವು ದೇಶಪ್ರೇಮಿ ಆಗಬೇಕು, ನಾನು ಮಾತ್ರ ದೇಶದ್ರೋಹಿ ಆಗಬೇಕೇನು?'

'ಇದೇನಮ್ಮ, ಎರಡು ಕನಸು ಕಲ್ಪನಾ ಥರ ಹೇಳ್ತಿದೀಯ?'

'ಹೂಂ ಮತ್ತೆ, ಎಣ್ಣೆ ಪದಾರ್ಥ ಹೆಚ್ಚು ಬಳಸಬೇಡಿ ಅಂತ ಮೋದಿ ಸಾಹೇಬ್ರು ಹೇಳಿಲ್ವ, ಇನ್ನೇನಿದ್ದರೂ ನಿಮಗೆ ಅನ್ನ, ಮಜ್ಜಿಗೇನೆ ಗತಿ'.

'ನನ್ನ ಬಾಣ ನನಗೇ ತಿರುಗಿಸ್ತಿದೀಯ, ಇರಲಿ. ಸ್ವಲ್ಪ ಹೊರಗೆ ಹೋಗಿ ಬರ್ತೀನಿ' ಎಂದು ಬೈಕ್ ಕೀ ಕೈಗೆತ್ತಿಕೊಂಡೆ.

'ಮತ್ತೆ ಮತ್ತೆ ದೇಶದ್ರೋಹದ ಕೆಲಸ ಮಾಡ್ತಿದೀರಲ್ರೀ, ಬೈಕ್ ಬಿಟ್ಟು ನಡೆದುಕೊಂಡು ಹೋಗಿ' ಪಟ್ಟು ಬಿಡದವಳಂತೆ ಹೇಳಿದಳು.

ಪೇಪರ್ ಓದುತ್ತಾ ಕೂತೆ. 'ನೋಡಿಲ್ಲಿ, ನೀಟ್ ಎಕ್ಸಾಂ ಕ್ಯಾನ್ಸಲ್ ಅಂತೆ. ಮಗಳು ಮತ್ತೆ ಪರೀಕ್ಷೆ ಬರೆಯಬೇಕು' ಬೇಸರದಲ್ಲಿ ಹೇಳಿದೆ.

'ಮಗಳು ನೀಟ್‌ಗೆ ಓದೋ ಬದಲು ಜ್ಯೋತಿಷ ಶಾಸ್ತ್ರವಾದರೂ ಕಲಿಯಬೇಕಿತ್ತು'.

'ಏಕೆ?'

'ಯಾವುದಾದರೂ ರಾಜ್ಯದ ಗವರ್ನ್‌ಮೆಂಟ್‌ನಲ್ಲಿ ವಿಶೇಷ ಅಧಿಕಾರಿಯಾದರೂ ಆಗ್ತಿದ್ಲು' ಎಂದಳು.

ಸಂಗತ

ಶ್ರೀರಕ್ಷೆಯ ನಿರೀಕ್ಷೆಯಲ್ಲಿ ಶ್ರೀಗಂಧದ ರೈತರು

ಶ್ರೀಗಂಧದ ಮರ ಕರ್ನಾಟಕದ ರಾಜ್ಯವೃಕ್ಷ. ಶ್ರೀಗಂಧದ ಉತ್ಪಾದನೆಯಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ಬೆಳೆಗಾರರ ಬದುಕಿನಲ್ಲಿ ಮಾತ್ರ ಗಂಧದ ಪರಿಮಳ ಇಲ್ಲ.

• ಉಮೇಶಭಟ್ಟ ಪಿ.ಎಚ್.

ದೇಶದಲ್ಲಿಯೇ ಅತಿಹೆಚ್ಚು ಹಾಗೂ ಗುಣಮಟ್ಟದ ಶ್ರೀಗಂಧ ಉತ್ಪಾದಿಸುವ ರಾಜ್ಯ ಕರ್ನಾಟಕ. ಶ್ರೀಗಂಧದ ಬೆಳೆಗೆ ಇರಬೇಕಾದ ಹವಾಮಾನ, ಮಣ್ಣಿನ ಗುಣಮಟ್ಟ, ಪರಿಸರ ಇಲ್ಲಿದೆ. ಕರ್ನಾಟಕದ ಶ್ರೀಗಂಧದಲ್ಲಿ ಮೃದುತ್ವದ ಜೊತೆಗೆ ಎಣ್ಣೆಯ ಅಂಶವೂ ಹೆಚ್ಚಾಗಿದೆ.

2001ರಲ್ಲಿ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿ ಇದ್ದಾಗ, ಆಗಿನ ಅರಣ್ಯ ಸಚಿವ ಕೆ.ಎಚ್. ರಂಗನಾಥ್ ಅವರ ಆಸಕ್ತಿಯ ಫಲವಾಗಿ ಅಂದಿನ ಸರ್ಕಾರ 'ಶ್ರೀಗಂಧದ ನೀತಿ' ಪ್ರಕಟಿಸಿತು; ಶ್ರೀಗಂಧ ಬೆಳೆಯುವುದಕ್ಕೆ ಹಾಗೂ ಮಾರಾಟ ಮಾಡುವುದಕ್ಕೆ ಇದ್ದ ನಿಯಮಗಳನ್ನು ಸರಳಗೊಳಿಸಿತು. ನಂತರದ ಎರಡೂವರೆ ದಶಕದಲ್ಲಿ ಶ್ರೀಗಂಧದ ಬೆಳೆ ಹಲವು ಜಿಲ್ಲೆಗಳಿಗೆ ಹಬ್ಬಿದೆ. ಹೊಸದಾಗಿ ಶ್ರೀಗಂಧ ಬೆಳೆಯುವವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿ, 40 ಸಾವಿರ ಎಕರೆ ಭೂಮಿಗೆ ಬೆಳೆ ವಿಸ್ತರಣೆಗೊಂಡಿದೆ. ಆದರೆ, ಬೆಳೆಗಾರರಿಗೆ ಸಮಾಧಾನವಿಲ್ಲ.

ಕಷ್ಟಪಟ್ಟು ಬೆಳೆದ ಶ್ರೀಗಂಧದ ಮರಗಳು ಕಳ್ಳರು, ಮಧ್ಯವರ್ತಿಗಳ ಪಾಲಾಗುತ್ತಿವೆ. ರೈತರೇ ಭದ್ರತೆ ಮಾಡಿಕೊಂಡು ಮರ ಉಳಿಸಿಕೊಂಡರೂ ಸರಿಯಾದ ದರ ಸಿಗುತ್ತಿಲ್ಲ. ಶ್ರೀಗಂಧ ಖರೀದಿಗೆ ಸೂಕ್ತ ವ್ಯವಸ್ಥೆಯನ್ನು ಅರಣ್ಯ ಇಲಾಖೆ ರೂಪಿಸಿಲ್ಲ. ಖರೀದಿ ದರವನ್ನೂ ಏರಿಸುತ್ತಿಲ್ಲ.



ನಾವು ಬೆಳೆದ ಶ್ರೀಗಂಧದ ಹೆಚ್ಚಿನ ಲಾಭ ನಮಗೆ ಸಿಗದೇ ಬೇರೆ ಯಾರದೋ ಪಾಲಾಗುತ್ತಿದೆ. ಮಾಫಿಯಾ ರೀತಿಯಲ್ಲಿ ಶ್ರೀಗಂಧದ ಕಳ್ಳತನ, ಮಾರಾಟ ಜಾಲ ಬೆಳೆಯುತ್ತಿದ್ದರೂ ಅರಣ್ಯ ಇಲಾಖೆ ಎಚ್ಚೆತ್ತಿಲ್ಲ ಎಂದು ಶ್ರೀಗಂಧದ ಬೆಳೆಗಾರರು ಒಂದು ದಶಕದಿಂದ ಹೇಳುತ್ತಲೇ ಇದ್ದರೂ, ಇಲಾಖೆ ಚುರುಕಾಗಿಲ್ಲ.

ಅರಣ್ಯ ಇಲಾಖೆಯು ರೈತರಿಂದ ಖರೀದಿಸಿದ ಹಾಗೂ ಕಳ್ಳತನದ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಶ್ರೀಗಂಧವನ್ನು ಹರಾಜು ಹಾಕಿ, ಮಾರಾಟದಿಂದ ಬಂದ ಆದಾಯವನ್ನು ರೈತರಿಗೆ ಹಸ್ತಾಂತರಿಸುತ್ತದೆ. ರೈತರು ನೇರವಾಗಿ ಡಿಪೊಗಳಿಗೆ ಶ್ರೀಗಂಧ ಸಾಗಣೆ ಮಾಡಿ ಮಾರಾಟ ಮಾಡಲೂ ಇಲಾಖೆ ಅನುವು ಮಾಡಿಕೊಡುತ್ತದೆ. ಐದು ವರ್ಷದಲ್ಲಿ ಪ್ರತಿ ಕೆ.ಜಿ. ಶ್ರೀಗಂಧದ ದರ ₹3 ಸಾವಿರದಿಂದ ₹4 ಸಾವಿರದವರೆಗೆ ಏರಿಕೆಯಾಗಿದೆ. ಸದ್ಯ ಪ್ರತಿ ಕೆ.ಜಿ.ಗೆ ₹13 ಸಾವಿರಕ್ಕೂ ಹೆಚ್ಚಿನ ದರವಿದೆ. ಖರೀದಿ ದರ ಹೆಚ್ಚಾದರೆ ಹೆಚ್ಚಿನ ಆದಾಯವೂ ರೈತರಿಗೆ ಸಿಗಲಿದೆ. ತಮಿಳುನಾಡು ರಾಜ್ಯದಲ್ಲಿ ಪ್ರತಿ ವರ್ಷ ದರ ಪರಿಷ್ಕರಣೆ ಮಾಡುತ್ತಿರುವಾಗ ಕರ್ನಾಟಕದಲ್ಲಿ ಮಾತ್ರ ದರ ಪರಿಷ್ಕರಣೆಗೆ ಹಿಂದೆ ಮುಂದೆ ನೋಡಲಾಗುತ್ತಿದೆ ಎನ್ನುವುದು ರೈತರ ಅಸಮಾಧಾನ.

ಕರ್ನಾಟಕ ಅರಣ್ಯ ನಿಯಮಗಳು 1969ರ ಸೆಕ್ಷನ್ 108(6)ರ ಪ್ರಕಾರ, ಪ್ರತಿ ಹಣಕಾಸು ವರ್ಷದಲ್ಲಿ ಶ್ರೀಗಂಧ ಮರದ ದರವನ್ನು ನಿಗದಿಪಡಿಸಬೇಕು. ಅದನ್ನು ಮಾಡದೆ, ಸರಾಸರಿ ದರ ಆಧರಿಸಿ ಆಗಾಗ ಹರಾಜು ಪ್ರಕ್ರಿಯೆ ನಡೆಸಲಾಗುತ್ತಿದೆ. ಕೆಲವೊಮ್ಮೆ ನೆರೆಯ ತಮಿಳುನಾಡಿನಲ್ಲಿ ನಡೆಸಲಾದ ಹರಾಜಿನ ಬೆಲೆಯನ್ನು ಪರಿಗಣಿಸಿ ಇಲ್ಲಿಯೂ ಅದನ್ನೇ ಬಳಸಬಹುದು ಎನ್ನುವ ಸೂಚನೆಯನ್ನು ಅರಣ್ಯ ಇಲಾಖೆ ನೀಡಿದೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ ಸಂಸ್ಥೆ, ಮೈಸೂರು ಸ್ಯಾಂಡಲ್ ಸೋಪು, ಇತರೆ ಉತ್ಪನ್ನಗಳನ್ನು ಉತ್ಪಾದಿಸಲು ಶ್ರೀಗಂಧವನ್ನೇ ಅವಲಂಬಿಸಿದೆ. ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಯು ರಾಜ್ಯದ ರೈತರಿಂದ 174.5 ಟನ್ ಶ್ರೀಗಂಧ ಖರೀದಿಸಿದೆ. ಇದೊಂದು ಆಶಾದಾಯಕ ಬೆಳವಣಿಗೆಯಾದರೂ, ಶ್ರೀಗಂಧದ ಮೌಲ್ಯವರ್ಧನೆಗೆ ಅರಣ್ಯ ಇಲಾಖೆಯು ಹೆಚ್ಚಿನ ಮುತುವರ್ಜಿ ವಹಿಸಬೇಕು. ವಿಳಂಬ ಮಾಡದೆ ಹೊಸ ನೀತಿ ಜಾರಿಗೊಳಿಸಬೇಕು.

'ಅರಣ್ಯ ಪ್ರೋತ್ಸಾಹ ಯೋಜನೆಯಡಿ ಶ್ರೀಗಂಧದ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ಧನ ನೀಡಬೇಕು. ಶ್ರೀಗಂಧದ ಮರಗಳನ್ನು ಖರೀದಿಸಿದ 24 ಗಂಟೆಗಳಲ್ಲಿ, ನಿಗದಿತ ಬೆಲೆಯ ಶೇ 33ರಷ್ಟು ಮೊತ್ತವನ್ನು ರೈತರಿಗೆ ಪಾವತಿ ಮಾಡಬೇಕು. 12 ತಿಂಗಳಲ್ಲಿ ಉಳಿದ ಮೊತ್ತ ರೈತರಿಗೆ ಪಾವತಿಸಬೇಕು. ಪ್ರತಿ ವರ್ಷ ₹250 ಕೋಟಿಯನ್ನು ಶ್ರೀಗಂಧದ ಸಂಶೋಧನೆ, ವಿಸ್ತರಣೆ ಹಾಗೂ ವಿಮೆಗೆ ಮೀಸಲಿಡಬೇಕು' ಎಂದು ಅರಣ್ಯ ಇಲಾಖೆಯ ನಿವೃತ್ತ ಕಾರ್ಯದರ್ಶಿ ಎ.ಸಿ. ಲಕ್ಷ್ಮಣ ಅವರು ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯರಾದ ಡಾ. ಸಿ.ಎನ್. ಮಂಜುನಾಥ್ ಅವರು, ಕಾಫಿ, ರೇಷ್ಮೆ, ಮಸಾಲೆ ಉತ್ಪನ್ನಗಳ ರೀತಿಯಲ್ಲಿ ಶ್ರೀಗಂಧಕ್ಕೂ ಪ್ರತ್ಯೇಕ ಮಂಡಳಿ ರಚಿಸಿ ಎನ್ನುವ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದರು. ಕರ್ನಾಟಕ ಸರ್ಕಾರವಾದರೂ ಮಂಡಳಿ ಸ್ಥಾಪಿಸಿದರೆ, ಶ್ರೀಗಂಧದ ಬೆಳೆಗಾರರ ದಶಕಗಳ ಬೇಡಿಕೆಗೆ ಬೆಲೆ ಬರಲಿದೆ.

'ಶ್ರೀಗಂಧದ ನೀತಿ' ಸರಳೀಕರಿಸಿ ಶೀಘ್ರವೇ ಅಧಿಸೂಚನೆ ಹೊರಡಿಸಲಾಗುವುದು ಎಂದು ಕಳೆದ ಜೂನ್‌ನಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಹೇಳಿದ್ದರು. ಪ್ರಸ್ತುತ ಹೊಸ ನೀತಿಯ ಕರಡು ಸಚಿವರ ಮುಂದಿದೆ. ಅದರ ಜಾರಿಗಾಗಿ ರೈತರು ಕಾಯುತ್ತಿದ್ದಾರೆ.

ಹೊಸ ನೀತಿ ಜಾರಿ, ಶ್ರೀಗಂಧ ಮಂಡಳಿ ಸ್ಥಾಪನೆ, ತಂತ್ರಜ್ಞಾನ ಆಧರಿತ ಬೆಳೆ ಸುರಕ್ಷತೆ ಹಾಗೂ ಶ್ರೀಗಂಧದ ಎಣ್ಣೆ ಕಿರು ಘಟಕ ಸ್ಥಾಪನೆಗೆ ಸರ್ಕಾರ ಒತ್ತು ನೀಡಿದರೆ ಕರುನಾಡು ಶ್ರೀಗಂಧದ ಬೀಡಾಗಿ ಮುಂದುವರಿಯಲಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ದೇಶದಲ್ಲಿ 'ನೀಟ್' ಜಾರಿಯಾದ ನಂತರ ಮೊದಲ ಬಾರಿಗೆ ಮರುಪರೀಕ್ಷೆ ನಡೆಯುತ್ತಿದೆ. ಅಪಾರ ಒತ್ತಡ ಭರಿಸಿ, ಹಣ ವ್ಯಯಿಸಿ, ಪರೀಕ್ಷೆ ಬರೆದಿದ್ದ ಲಕ್ಷಾಂತರ ವಿದ್ಯಾರ್ಥಿಗಳ ಕನಸಿನ ಗೋಪುರ ಕುಸಿದಿದ್ದು, ಭರವಸೆಗೆ ಭಂಗ ಉಂಟಾಗಿದೆ. ಇದು ದೇಶದ ಪರೀಕ್ಷಾ ವ್ಯವಸ್ಥೆಯ ಬಗ್ಗೆಯೇ ವಿದ್ಯಾರ್ಥಿಗಳು ಭ್ರಮನಿರಸನಗೊಳ್ಳುವಂತೆ ಮಾಡಿದೆ. ವಿದ್ಯಾರ್ಥಿಗಳ ಬದುಕು ಬದಲಿಸುವ ಪರೀಕ್ಷೆಯನ್ನು ಸಮರ್ಪಕವಾಗಿ ನಿಭಾಯಿಸಲಾಗದ ಎನ್‌ಟಿಎ ಅನ್ನು ರದ್ದು ಮಾಡಬೇಕು ಎನ್ನುವ ಒತ್ತಾಯವೂ ಕೇಳಿಬಂದಿದೆ. ಜತೆಗೆ, ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳ ಬಗ್ಗೆಯೂ ಮರುಚಿಂತನೆ ಮಾಡುವ ಅಗತ್ಯ ಸೃಷ್ಟಿಸಿದೆ

ನೀಟ್ ಪಾರದರ್ಶಕತೆ ಮರೀಚಿಕೆ

ಎನ್‌ಟಿಎ ವಿರುದ್ಧ ವಿದ್ಯಾರ್ಥಿಗಳ ಹೋರಾಟ

ಪ್ರಜಾವಾಣಿ ವಾರ್ತೆ

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಯುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಮೊದಲ ಬಾರಿಗೆ ನಡೆದದ್ದು 2013ರಲ್ಲಿ. ಅದಕ್ಕೂ ಮುಂಚಿನಿಂದ ಮತ್ತು ನಂತರವೂ ನೀಟ್ ಬಗ್ಗೆ ಹಲವು ರೀತಿಯ ಆಕ್ಷೇಪಣೆ, ವಿರೋಧಗಳು ವ್ಯಕ್ತವಾಗುತ್ತಲೇ ಇವೆ. ಈಗ ಪ್ರಶ್ನೆಪತ್ರಿಕೆ ಸೋರಿಕೆಯ ಕಾರಣದಿಂದ ಮೊಟ್ಟಮೊದಲ ಬಾರಿಗೆ ನೀಟ್ ಅನ್ನು ರದ್ದು ಮಾಡಲಾಗಿದ್ದು, ಮರುಪರೀಕ್ಷೆ ನಡೆಸುವುದಾಗಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಘೋಷಿಸಿರುವುದು ವ್ಯವಸ್ಥೆಯ ಹುಳುಕುಗಳನ್ನು ಬಯಲು ಮಾಡಿದೆ.

ನೀಟ್ ವ್ಯವಸ್ಥೆ ಜಾರಿಗೆ ಬರುವುದಕ್ಕೆ ಮುಂಚೆ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಜ್ಯಗಳ ಮಟ್ಟದಲ್ಲಿಯೇ ಪ್ರವೇಶ ಪರೀಕ್ಷೆಗಳು ನಡೆಯುತ್ತಿದ್ದವು. ಏಮ್ಸ್‌ನಂಥ ರಾಷ್ಟ್ರ ಮಟ್ಟದ ಪ್ರತಿಷ್ಠಿತ ಕಾಲೇಜುಗಳು ಅವುಗಳದ್ದೇ ಆದ ಸ್ವಂತ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಿದ್ದವು. ಕರ್ನಾಟಕದಲ್ಲಿ ಜಾರಿಯಲ್ಲಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ದೇಶದಲ್ಲಿಯೇ ಅತ್ಯುತ್ತಮ ವ್ಯವಸ್ಥೆ ಎನ್ನುವ ಹೆಸರು ಪಡೆದಿತ್ತು. ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ದೇಶದಾದ್ಯಂತ ಏಕರೂಪದ ಪರೀಕ್ಷೆ ನಡೆಸುವ ಪ್ರಯತ್ನ ಸಫಲವಾಗಿದ್ದು 2013ರಲ್ಲಿ.

80ರ ದಶಕದಿಂದ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸುತ್ತಿದ್ದ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ), ಬದಲಿಗೆ ನೀಟ್ ಅನ್ನು 2019ರಲ್ಲಿ ಕೇಂದ್ರ ಸರ್ಕಾರ ರಚಿಸಿದ ಎನ್‌ಟಿಎ (ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ) ಕೈಗೆ ಕೊಡಲಾಯಿತು. ನೀಟ್ ವ್ಯವಸ್ಥೆಯ ಮೇಲೆ ಕೇಂದ್ರ ಸರ್ಕಾರವು ಪರೋಕ್ಷ ಹಿಡಿತ ಸಾಧಿಸುತ್ತಿದೆ ಎಂದು ಆಗಲೇ ಹಲವರು ಆಕ್ಷೇಪ ಎತ್ತಿದ್ದರು. ಜತೆಗೆ, ಪರೀಕ್ಷೆ ಸ್ವರೂಪ, ಪಠ್ಯ ಮತ್ತು ಇತರ ವಿಚಾರಗಳ ಬಗ್ಗೆ ಹಲವು ರಾಜ್ಯಗಳು ತಕರಾರು ತೆಗೆದಿದ್ದವು.

ದೇಶದಲ್ಲಿ ಕೇಂದ್ರೀಕೃತವಾದ ಪ್ರವೇಶ ಪರೀಕ್ಷೆ ಜಾರಿಗೆ ಬಂದ ನಂತರ ದೇಶದಾದ್ಯಂತ ಭಾರಿ ಪ್ರಮಾಣದಲ್ಲಿ ಕೋಚಿಂಗ್ ಸೆಂಟರ್‌ಗಳು ಹುಟ್ಟಿಕೊಂಡವು. ಇವುಗಳಲ್ಲಿ ತರಬೇತಿ ಪಡೆದವರೇ ಹೆಚ್ಚು ಮಂದಿ ಆಯ್ಕೆಯಾಗತೊಡಗಿದರು. ನೀಟ್ ಜಾರಿಗೆ ಬಂದ ನಂತರ ವೈದ್ಯಕೀಯಕ್ಕೆ ಪ್ರವೇಶ ಪಡೆಯುತ್ತಿರುವ ಹೆಚ್ಚಿನ ವಿದ್ಯಾರ್ಥಿಗಳು ಶ್ರೀಮಂತರು, ನಗರ ಪ್ರದೇಶದವರು ಮತ್ತು ಪ್ರಬಲ ಜಾತಿಗಳಿಗೆ ಸೇರಿದವರಾಗಿದ್ದಾರೆ ಎಂದು ಅಧ್ಯಯನ ವರದಿಯೊಂದು ಹೇಳಿದೆ. ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಯಿತೆಂದರೆ, ಈ ಕೋಚಿಂಗ್ ಸೆಂಟರ್‌ಗಳೇ ನೀಟ್ ವ್ಯವಸ್ಥೆಯನ್ನು ನಿಯಂತ್ರಿಸುತ್ತಿವೆ ಎನ್ನುವ ಆರೋಪಗಳು ಬಂದವು.

ನೀಟ್‌ಗೆ ಸಂಬಂಧಿಸಿದಂತೆ 2024ರಲ್ಲಿ ನಡೆದ ಪ್ರಕರಣ ಭಾರಿ ಸದ್ದು ಮಾಡಿತ್ತು. ಪ್ರತಿವರ್ಷ ಒಬ್ಬಿಬ್ಬರು ಪರೀಕ್ಷೆಯಲ್ಲಿ 720ಕ್ಕೆ 720 ಅಂಕ ಗಳಿಸುತ್ತಿದ್ದರು. 2024ರಲ್ಲಿ 67 ಮಂದಿ ಪೂರ್ಣ ಅಂಕಗಳನ್ನು ಗಳಿಸಿದ್ದರು. ಅವರಲ್ಲಿ 50 ಮಂದಿಗೆ ಹೆಚ್ಚು ಕೃಪಾಂಕಗಳನ್ನು ನೀಡಲಾಗಿತ್ತು. ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿದೆ, ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ ಎನ್ನುವಂಥ ಆರೋಪಗಳೂ ಬಂದವು. ಕೇಂದ್ರ ಸರ್ಕಾರ ಅವ್ಯವಹಾರ ನಡೆದಿರುವುದನ್ನು ಒಪ್ಪಿಕೊಂಡಿತು. ಕೊನೆಗೆ, ಹೆಚ್ಚು ಅಂಕ ಬಂದಿದ್ದ 1,563 ಮಂದಿಗೆ ಎನ್‌ಟಿಎ ಮರುಪರೀಕ್ಷೆ ನಡೆಸಿತು.

ಹಲವು ಬಾರಿ ನೀಟ್ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ. ಹಲವು ರಾಜ್ಯಗಳಲ್ಲಿ ಬಂಧನ, ವಿಚಾರಣೆಗಳು ನಡೆದಿವೆ. ಹಲವು ಪ್ರಕರಣಗಳ ಬಗ್ಗೆ ಕೋರ್ಟ್‌ನಲ್ಲಿ ವಿಚಾರಣೆ ನಡೆದಿದೆ. ಆದರೂ, ನೀಟ್ ವ್ಯವಸ್ಥೆಯಲ್ಲಿನ ಲೋಪಗಳು ಹಾಗೆಯೇ ಉಳಿದಿವೆ, ಹೆಚ್ಚಾಗುತ್ತಲೂ ಇವೆ. ಅದರ ಫಲವೇ ಈ ಬಾರಿಯ ಮರುಪರೀಕ್ಷೆ. ಯಾರೋ ಮಾಡಿದ ತಪ್ಪಿಗೆ ವಿದ್ಯಾರ್ಥಿಗಳಿಗೆ ಶಿಕ್ಷೆ ನೀಡಿದಂತಾಗಿದೆ.

ಚೀನಾದ ರಾಷ್ಟ್ರೀಯ ಪ್ರವೇಶ ಪರೀಕ್ಷೆ (ಗಾವೊಕಾವೊ) ಮತ್ತು ಭಾರತದ ನೀಟ್ ಜಾಗತಿಕ ಮಟ್ಟದಲ್ಲಿ ಅತ್ಯಂತ ಕಠಿಣ ಶೈಕ್ಷಣಿಕ ಪ್ರವೇಶ ಪರೀಕ್ಷೆಗಳೆಂದು ಹೆಸರು ಪಡೆದಿವೆ. ಚೀನಾದಲ್ಲಿ ಪ್ರವೇಶ ಪರೀಕ್ಷೆಯನ್ನು ಒಂದು ರಾಷ್ಟ್ರೀಯ ವಿದ್ಯಮಾನ ಎನ್ನುವಂತೆ ಪರಿಗಣಿಸಲಾಗುತ್ತದೆ. ಅದಕ್ಕಾಗಿ ಭಾರಿ ಸಿದ್ಧತೆ ನಡೆಸಲಾಗುತ್ತದೆ ಮತ್ತು ಕಟ್ಟೆಚ್ಚರ ವಹಿಸಲಾಗುತ್ತದೆ. ಭಾರತದಲ್ಲಿ ನೀಟ್ ಬರೆಯಲು ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಸರ್ವಶಕ್ತಿ, ಹಣವನ್ನು ಒತ್ತೆಯಿಟ್ಟು ತಯಾರಿ ನಡೆಸುತ್ತಾರೆ. ಪೋಷಕರು ಕಷ್ಟನಷ್ಟ ಅನುಭವಿಸಿ ಮಕ್ಕಳನ್ನು ಕೋಚಿಂಗ್ ಸೆಂಟರ್‌ಗಳಿಗೆ ಸೇರಿಸುತ್ತಾರೆ. ಪರೀಕ್ಷೆಯ ಒತ್ತಡ ಮತ್ತು ವೈಫಲ್ಯದಿಂದ ಪ್ರತಿವರ್ಷ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವುದು ಸಹಜ ಎನ್ನುವಂತಾಗಿದೆ. ಆದರೆ, ವಿದ್ಯಾರ್ಥಿ ಜೀವನದ ಅತ್ಯಂತ ನಿರ್ಣಾಯಕ ಪರೀಕ್ಷೆಯನ್ನು ನಡೆಸುವ ವಿಚಾರದಲ್ಲಿ ಎನ್‌ಟಿಎ, ಬೇಜವಾಬ್ದಾರಿ ತೋರುತ್ತಿದ್ದು, ಅದನ್ನು ರದ್ದು ಮಾಡಬೇಕು, ರಾಜ್ಯಗಳ ಮಟ್ಟದಲ್ಲಿಯೇ ವೈದ್ಯಕೀಯ ಪ್ರವೇಶ ಪರೀಕ್ಷೆಗಳನ್ನು ನಡೆಸಬೇಕು ಎನ್ನುವ ಒತ್ತಾಯಗಳು ಕೇಳಿಬಂದಿವೆ.

ತಮಿಳುನಾಡು ನಿರಂತರ ಹೋರಾಟ

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಪರೀಕ್ಷೆ ನಡೆಸುವುದಕ್ಕೆ ತಮಿಳುನಾಡು ಆರಂಭದಿಂದಲೂ ವಿರೋಧ ವ್ಯಕ್ತಪಡಿಸುತ್ತಾ ಬಂದಿದೆ. 2010ರಲ್ಲಿ ಕೇಂದ್ರ ಸರ್ಕಾರ 'ನೀಟ್' ನಡೆಸುವ ಪ್ರಸ್ತಾವ ಇಟ್ಟಾಗ ತಮಿಳುನಾಡು ಮುಖ್ಯಮಂತ್ರಿಯಾಗಿದ್ದ ಎಂ.ಕರುಣಾನಿಧಿ ಅವರು ಪ್ರಧಾನಿಯವರಿಗೆ ಪತ್ರ ಬರೆದು ವಿರೋಧಿಸಿದ್ದರು. 2012ರಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ನೀಟ್ ನಡೆಸುವ ನಿರ್ಧಾರ ಕೈಗೊಂಡಾಗ ತಮಿಳುನಾಡು ಮಾತ್ರವಲ್ಲ, ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳೂ ವಿರೋಧಿಸಿದ್ದವು. ಗುಜರಾತ್ ಕೂಡ ವಿರೋಧಿಸಿತ್ತು. ಶಿಕ್ಷಣ ರಾಜ್ಯಗಳ ವಿಷಯವಾಗಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಪರೀಕ್ಷೆ ನಡೆಸುವುದರಿಂದ ರಾಜ್ಯಗಳ ಹಕ್ಕು, ಸ್ವಾತಂತ್ರ್ಯವನ್ನು ಕಸಿದಂತೆ ಆಗುತ್ತದೆ. ನೀಟ್ ಸಿಬಿಎಸ್‌ಇ/ಎನ್‌ಸಿಇಆರ್‌ಟಿ ಪಠ್ಯ ಆಧಾರಿತವಾಗಿದ್ದು, ಇದರಿಂದ ರಾಜ್ಯ ಪಠ್ಯಕ್ರಮಗಳಲ್ಲಿ ಓದಿದ ಮಕ್ಕಳಿಗೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂಬುದು ರಾಜ್ಯಗಳ ವಾದವಾಗಿತ್ತು.

ಕರ್ನಾಟಕ ಸೇರಿದಂತೆ ಇತರ ರಾಜ್ಯಗಳು ಆರಂಭದಲ್ಲಿ ವಿರೋಧಿಸಿದ್ದವಾದರೂ, ನಂತರ ವ್ಯವಸ್ಥೆಗೆ ಒಗ್ಗಿಕೊಂಡಿವೆ. ಆದರೆ, ಮೊದಲಿನಿಂದಲೂ ಇದರ ವಿರುದ್ಧ ತೀವ್ರವಾಗಿ ಹೋರಾಟ ನಡೆಸುತ್ತಾ ಬಂದಿದ್ದು ತಮಿಳುನಾಡು. ಡಿಎಂಕೆ ನೇತೃತ್ವದ ಅಲ್ಲಿನ ಸರ್ಕಾರ ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಸಂಘರ್ಷ ನಡೆಸುತ್ತಲೇ ಬಂದಿತ್ತು. ರಾಜ್ಯಕ್ಕೆ ನೀಟ್‌ನಿಂದ ವಿನಾಯಿತಿ ನೀಡಬೇಕು ಎಂಬ ಮಸೂದೆಯನ್ನೂ 2021ರಲ್ಲಿ ತಮಿಳುನಾಡಿನ ವಿಧಾನಸಭೆ ಅಂಗೀಕರಿಸಿತ್ತು. ರಾಷ್ಟ್ರಪತಿಯವರು ಈ ಮಸೂದೆಯನ್ನು ತಿರಸ್ಕರಿಸಿದ್ದರು. ಈ ನಿರ್ಧಾರದ ವಿರುದ್ಧ ಅದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಅಲ್ಲದೇ ಇಡೀ ನೀಟ್ ವ್ಯವಸ್ಥೆಯನ್ನು ತೆಗೆದುಹಾಕಬೇಕು ಎಂಬ ನಿರ್ಣಯವನ್ನೂ ವಿಧಾನಸಭೆಯಲ್ಲಿ ಅಂಗೀಕರಿಸಲಾಗಿತ್ತು.

ಪರೀಕ್ಷೆ ರದ್ದತಿಗೆ ಕರ್ನಾಟಕ ಆಗ್ರಹ

ಕರ್ನಾಟಕ ಸರ್ಕಾರ ನೀಟ್ ರದ್ದತಿಯ ಪರ ನಿಲುವನ್ನು ಹೊಂದಿದೆ. ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಾತಿಗಾಗಿ ಕರ್ನಾಟಕ ರೂಪಿಸಿದ್ದ ಸಿಇಟಿ ದೇಶಕ್ಕೇ ಮಾದರಿಯಾಗಿತ್ತು. ನೀಟ್ ಬರುವವರೆಗೂ ರಾಜ್ಯದಲ್ಲಿ ಸಿಇಟಿ ಮೂಲಕ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿ ನಡೆಯುತ್ತಿತ್ತು.

2024ರಲ್ಲಿ 'ನೀಟ್' ಹಗರಣ ಚರ್ಚೆಗೆ ಬಂದಾಗ ರಾಜ್ಯ ಸರ್ಕಾರವು, ಈ ವ್ಯವಸ್ಥೆಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿತ್ತು. ಈ ಬಾರಿಯ ಪರೀಕ್ಷೆಯನ್ನು ರದ್ದುಗೊಳಿಸುವ ನಿರ್ಧಾರವನ್ನು ಎನ್‌ಟಿಎ ತೆಗೆದುಕೊಂಡ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನೀಟ್ ವ್ಯವಸ್ಥೆಯನ್ನು ರದ್ದುಪಡಿಸುವಂತೆ ಒತ್ತಾಯಿಸಿದ್ದಾರೆ.

'ಪರೀಕ್ಷೆ ರದ್ದಾಗಿರುವುದರಿಂದ ರಾಜ್ಯದ ಒಂದು ಲಕ್ಷದಷ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ನೀಟ್‌ನಿಂದಾಗಿ ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಈ ವ್ಯವಸ್ಥೆಯು ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡುವ ರಾಜ್ಯದ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದು, ಇದು ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಎಂದು 2024ರಲ್ಲಿ ನಾವು ಹೇಳಿದ್ದೆವು. ಮರು ಪರೀಕ್ಷೆ ನಡೆಸುವ ತೀರ್ಮಾನವು ನಮ್ಮ ಆತಂಕಗಳು ನಿಜ ಎಂಬುದನ್ನು ಸಾಬೀತುಪಡಿಸಿವೆ' ಎಂದು ಅವರು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ನೀಟ್ ನಡೆದು ಬಂದ ಹಾದಿ

2013
- ಭಾರತೀಯ ವೈದ್ಯಕೀಯ ಮಂಡಳಿಯು (ಎಂಸಿಐ) ದೇಶದಾದ್ಯಂತ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿಗಾಗಿ ಒಂದೇ ಪರೀಕ್ಷೆ ನಡೆಸಲು ನೀಟ್ ಜಾರಿಗೊಳಿಸಿತು. ಅದುವರೆಗೂ ಇದ್ದ ಎಐಪಿಎಂಟಿ (ಅಖಿಲ ಭಾರತ ಪೂರ್ವ ವೈದ್ಯಕೀಯ ಪರೀಕ್ಷೆ) ವ್ಯವಸ್ಥೆಯನ್ನು ಇದು ಬದಲಾಯಿಸಿತು. ಮೊದಲ ಪರೀಕ್ಷೆಯಲ್ಲಿ 6.58 ಲಕ್ಷದಷ್ಟು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು
- ನಿರ್ಧಾರ ಪ್ರಶ್ನಿಸಿ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ. ನೀಟ್ ನಡೆಸುವುದು ಅಸಾಂವಿಧಾನಿಕ ಎಂದು ತೀರ್ಪು ನೀಡಿ ಈ ವ್ಯವಸ್ಥೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು

2015
- ಎಐಪಿಎಂಟಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ ದೊಡ್ಡ ವಿವಾದವೇ ಉಂಟಾಯಿತು. ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ನ್ಯಾಯಾಲಯದ ಆದೇಶದ ಮೇಲೆ ಪರೀಕ್ಷೆಯನ್ನು ರದ್ದುಗೊಳಿಸಿ ನಂತರ ಮರುಪರೀಕ್ಷೆ ನಡೆಸಲಾಯಿತು. ಪರೀಕ್ಷೆ ಬರೆಯಲು ಕುಳಿತ ಅಭ್ಯರ್ಥಿಗಳಿಗೆ ಬ್ಲೂಟೂತ್ ಸಾಧನಗಳ ಹೊರಗಡೆಯಿಂದ ಉತ್ತರಗಳನ್ನು ಹೇಳಿ ಕೊಡಲಾಗುತ್ತಿತ್ತು ಎಂಬುದು ತನಿಖೆಯಿಂದ ತಿಳಿದು ಬಂತು

2016
- ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದ ತನ್ನ ನಿಲುವನ್ನು ಬದಲಿಸಿದ ಸುಪ್ರೀಂಕೋರ್ಟ್, ಹಿಂದಿನ ತೀರ್ಪನ್ನು ವಾಪಸ್ ಪಡೆದು ನೀಟ್‌ಗೆ ಅನುಮತಿ ನೀಡಿತು. ಎರಡು ಹಂತಗಳಲ್ಲಿ ಪರೀಕ್ಷೆ ನಡೆಸುವಂತೆ ಸೂಚಿಸಿತು. ಮೇ 1ರಂದು ಮೊದಲ ಹಂತದ ಪರೀಕ್ಷೆ ನಡೆಯಿತು

2017
- ಆರಂಭದಿಂದಲೂ ಈ ಪರೀಕ್ಷಾ ವ್ಯವಸ್ಥೆಯನ್ನು ತಮಿಳುನಾಡು ವಿರೋಧಿಸುತ್ತಾ ಬಂದಿತ್ತು. ನೀಟ್‌ನಲ್ಲಿ ಕಡಿಮೆ ಅಂಕ ಗಳಿಸಿದ್ದ ಅಲ್ಲಿನ ವೈದ್ಯಕೀಯ ಸೀಟು ಆಕಾಂಕ್ಷಿ, 17 ವರ್ಷದ ಅನಿತಾ, 2017ರ ಸೆಪ್ಟೆಂಬರ್ 1ರಂದು ಆತ್ಮಹತ್ಯೆ ಮಾಡಿಕೊಂಡಳು. ನೀಟ್ ಅನ್ನು ಪ್ರಶ್ನಿಸಿ ಆಕೆ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಳು. ಆಕೆಯ ಸಾವು ತಮಿಳುನಾಡಿನಲ್ಲಿ ವ್ಯಾಪಕ ಆಕ್ರೋಶ ಹುಟ್ಟುಹಾಕಿತು



2019
- ನೀಟ್ ನಡೆಸುವುದಕ್ಕಾಗಿ ಕೇಂದ್ರ ಸರ್ಕಾರ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಎಂಬ ಪ್ರತ್ಯೇಕ ಸಂಸ್ಥೆಯನ್ನೇ ಸ್ಥಾಪಿಸಿತು. ಈ ವರ್ಷ ಅದು ಮೊದಲ ಬಾರಿಗೆ ನೀಟ್ ನಡೆಸಿತು

2021
- ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಕೇಳಿ ಬಂದವು. ಅಭ್ಯರ್ಥಿಗಳ ಬದಲಿಗೆ ಬೇರೆಯವರು ಪರೀಕ್ಷೆ ಬರೆದಿರುವ ಬಗ್ಗೆಯೂ ದೂರುಗಳು ಬಂದವು. ನಕಲಿ ಪ್ರವೇಶ ಪತ್ರಗಳನ್ನು ಬಳಸಿದ ಬಗ್ಗೆಯೂ ಚರ್ಚೆಯಾದವು. ಆದರೆ, ಮರು ಪರೀಕ್ಷೆ ನಡೆದಿರಲಿಲ್ಲ

2024
- ನೀಟ್‌ನಲ್ಲಿ ಭಾರಿ ಅವ್ಯವಹಾರ ನಡೆದಿರುವ ಆರೋಪ ದೇಶದಾದ್ಯಂತ ಸದ್ದು ಮಾಡಿತು. ಜಾರ್ಖಂಡ್‌ನಲ್ಲಿ ಪರೀಕ್ಷೆ ಆರಂಭವಾಗುವುದಕ್ಕೂ ಮುನ್ನ ಪ್ರಶ್ನೆ ಪತ್ರಿಕೆ ಸೋರಿಕೆಯಾಯಿತು. ಹಲವು ಅಭ್ಯರ್ಥಿಗಳಿಗೆ ಗರಿಷ್ಠ ಅಂಕಗಳು ನೀಡಿರುವ ಬಗ್ಗೆ ದೂರುಗಳೂ ಬಂದವು. ಸೋರಿಕೆ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿತು. ಕರ್ನಾಟಕ, ತಮಿಳುನಾಡು ಸೇರಿದಂತೆ ನೀಟ್ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದವು. ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರೂ, ದೇಶದಾದ್ಯಂತ ಮರುಪರೀಕ್ಷೆ ನಡೆಸಲು ಒಪ್ಪಲಿಲ್ಲ

ಆಧಾರ: ಪಿಟಿಐ, ಬಿಬಿಸಿ, ಎನ್‌ಟಿಎ, ಮಾಧ್ಯಮ ವರದಿಗಳು

ರಾಷ್ಟ್ರೀಯ

ಬೆಂಗಾವಲು ವಾಹನ ಕಡಿತಗೊಳಿಸಿದ ಪ್ರಧಾನಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಬಹುಪಾಲು ಕಡಿತಗೊಳಿಸಿದ್ದಾರೆ. ಹೊಸ ಖರೀದಿ ಮಾಡದೆಯೇ ತಮ್ಮ ಬೆಂಗಾವಲು ವಾಹನಗಳ ಪೈಕಿ ವಿದ್ಯುತ್ ವಾಹನಗಳನ್ನು ಹೆಚ್ಚಿಸಬೇಕು ಎಂದೂ ಸೂಚಿಸಿದ್ದಾರೆ.

ಪಶ್ಚಿಮ ಏಷ್ಯಾ ಯುದ್ಧದ ಕಾರಣದಿಂದ ಪೆಟ್ರೋಲ್, ಡೀಸೆಲ್ ಬಳಕೆಯನ್ನು ಮಿತಗೊಳಿಸಬೇಕು ಎಂದು ಮೋದಿ ಅವರು ಇತ್ತೀಚೆಗೆ ಜನರಿಗೆ ಮನವಿ ಮಾಡಿದ್ದರು. ಎಷ್ಟು ವಾಹನಗಳನ್ನು ಕಡಿತಗೊಳಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಲಾಗಿಲ್ಲ.

'ಎಸ್‌ಪಿಜಿ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡೇ ಪ್ರಧಾನಿ ಅವರ ಬೆಂಗಾವಲು ವಾಹನಗಳನ್ನು ಕಡಿತಗೊಳಿಸಲಾಗಿದೆ. ಇತ್ತೀಚೆಗೆ ಅವರು ಗುಜರಾತ್ ಮತ್ತು ಅಸ್ಸಾಂಗೆ ತೆರಳಿದ್ದರು. ಈ ವೇಳೆಯೇ ಅವರ ಬೆಂಗಾವಲು ವಾಹನಗಳನ್ನು ಕಡಿತ ಮಾಡಲಾಗಿತ್ತು' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ನೇತೃತ್ವದಲ್ಲಿ ಬುಧವಾರ ಸಂಪುಟ ಸಭೆ ನಡೆದಿದೆ. 'ಹಣ ಮತ್ತು ಸಂಪನ್ಮೂಲಗಳ ಮಿತ ವ್ಯಯಕ್ಕೆ ಒತ್ತು ನೀಡಬೇಕು. ನಿಮ್ಮ ವಿದೇಶಿ ಪ್ರವಾಸವನ್ನು ರದ್ದು ಮಾಡಬೇಕು, ನಿಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನೂ ಕಡಿತ ಮಾಡಬೇಕು' ಎಂದು ಮೋದಿ ಅವರು ಸಚಿವರಿಗೆ ಹೇಳಿದ್ದಾರೆ. 'ಕಡಿಮೆ ಖರ್ಚು ಮಾಡಿ ಎಂದು ಪ್ರಧಾನಿ ಹೇಳಿಲ್ಲ. ಆದರೆ, ವ್ಯರ್ಥ ಖರ್ಚು ಮಾಡಬೇಡಿ ಎಂದಿದ್ದಾರೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ದೇಶದಲ್ಲಿ ಬಿಜೆಪಿ ಹಾಗೂ ಎನ್‌ಡಿಎ ಆಡಳಿತವಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಮತ್ತು ರಾಜ್ಯಪಾಲರು ಪ್ರಧಾನಿ ಮನವಿಗೆ ಅನುಗುಣವಾಗಿ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆ ಕಡಿತಗೊಳಿಸಿದ್ದಾರೆ. ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ರಾಜ್ಯಪಾಲರು ಪ್ರಧಾನಿ ಮೋದಿ ಅವರ ಸಲಹೆಯನ್ನು ಪಾಲಿಸುವುದಾಗಿ ಹೇಳಿದ್ದಾರೆ.

ಪ್ರಕರಣ ದಾಖಲು: ಪೆಟ್ರೋಲ್, ಡಿಸೇಲ್ ಕಡಿತಗೊಳಿಸಲು ಪ್ರಧಾನಿ ಅವರು ಮಾಡಿದ ಮನವಿ ಕುರಿತು ಪ್ರತಿಕ್ರಿಯಿಸಿದ್ದ ಸಮಾಜವಾದಿ ಪಕ್ಷದ ಸಂಸದ ಅಜೇಂದ್ರ ಸಿಂಗ್ ಲೋಧಿ, 'ಅವರೊಬ್ಬ ದೇಶದ್ರೋಹಿ ಪ್ರಧಾನಿ' ಎಂದಿದ್ದರು. ಜೊತೆಗೆ, ಪ್ರಧಾನಿ ಅವರ ವಿದೇಶ ಪ್ರವಾಸದ ಕುರಿತೂ ಪ್ರಶ್ನಿಸಿದ್ದರು. ಇವರ ವಿರುದ್ಧ ಪ್ರಕರಣ ದಾಖಲಾಗಿದೆ.

ಮಿತವ್ಯಯದತ್ತ ಹೆಜ್ಜೆ

ದೆಹಲಿ: ವಾರದಲ್ಲಿ ಒಂದು ದಿನ ಕಾರು ಬಳಸದಂತೆ ಸರ್ಕಾರವು ಸಾರ್ವಜನಿಕರಲ್ಲಿ ಮನವಿ ಮಾಡಿದೆ. ವಿದ್ಯುತ್ ಚಾಲಿತ ವಾಹನಗಳನ್ನು ಬಳಸಬೇಕು, ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆಗಳನ್ನು ನಡೆಸಬೇಕು, ಒಂದೇ ಸ್ಥಳಕ್ಕೆ ಹೋಗುವುದಿದ್ದರೆ ಎಲ್ಲ ಅಧಿಕಾರಿಗಳು ಒಟ್ಟಿಗೆ ಒಂದೇ ಕಾರಿನಲ್ಲಿ ಹೋಗಬೇಕು ಎಂದು ಸರ್ಕಾರವು ಅಧಿಕಾರಿಗಳಿಗೆ ಸೂಚನೆ ನೀಡದೆ. ದೆಹಲಿಯ ಎಲ್ಲ ಸಚಿವರು ತಮ್ಮ ಬೆಂಗಾವಲು ವಾಹನಗಳನ್ನು ಕಡಿತ ಮಾಡಿದ್ದು, ಕೆಲವು ಸಚಿವರು ಸಾರ್ವಜನಿಕ ಸಾರಿಗೆಯನ್ನು ಬಳಸುತ್ತಿದ್ದಾರೆ

ಬಿಹಾರ: ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ತಮ್ಮ ಬೆಂಗಾವಲು ವಾಹನಗಳನ್ನು ಕಡಿಮೆ ಮಾಡಿದ್ದಾರೆ. ಮನೆಯಿಂದಲೇ ಕೆಲಸ ಮಾಡುವುದು, ವಾರದಲ್ಲಿ ಒಂದು ದಿನ ಕಾರು ಬಳಸದಂತೆ ಮತ್ತು ಸಾರ್ವಜನಿಕ ಸಾರಿಗೆ ಬಳಸುವಂತೆ ಸಾರ್ವಜನಿಕರಿಗೆ ಕೆಲವು ಸೂಚನೆಗಳನ್ನು ನೀಡಿದ್ದಾರೆ. ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ, ಸರ್ಕಾರಿ ಕಚೇರಿಗಳಲ್ಲಿನ ಕ್ಯಾಂಟೀನ್‌ಗಳಲ್ಲಿ ತಾಳೆ ಎಣ್ಣೆ ಬಳಕೆಯನ್ನು ಮಿತಿಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ

ಅಸ್ಸಾಂ: ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಎಲ್ಲ ಸಚಿವರ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಲು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ತಮ್ಮ ಮೊದಲ ಸಂಪುಟ ಸಭೆಯಲ್ಲಿಯೇ ನಿರ್ಧಾರ ತೆಗೆದುಕೊಂಡಿದ್ದಾರೆ. ಸರ್ಕಾರಿ ಅಧಿಕಾರಿಗಳು ಮುಂದಿನ 6 ತಿಂಗಳವರೆಗೆ ವಿದೇಶ ಪ್ರವಾಸ ಕೈಗೊಳ್ಳುವಂತಿಲ್ಲ, ಸೆಮಿನಾರ್‌ಗಳು, ಖುದ್ದು ಹಾಜರಾಗುವಂಥ ಸಭೆಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ. ವಿಡಿಯೊ ಕಾನ್ಫರೆನ್ಸ್‌ಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ನಿರ್ಧರಿಸಲಾಗಿದೆ

ಒಡಿಶಾ: ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರು ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತ ಮಾಡಿದ್ದಾರೆ.

ಉತ್ತರ ಪ್ರದೇಶ: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ತಮ್ಮ ಬೆಂಗಾವಲು ವಾಹನಗಳ ಸಂಖ್ಯೆ ಕಡಿಮೆ ಮಾಡಿಕೊಂಡಿದ್ದು, ವಿಧಾನಸಭೆಯ ವಿವಿಧ ಸಮಿತಿಗಳ ಪೂರ್ವನಿಗದಿತ ಅಧ್ಯಯನ ಪ್ರವಾಸವನ್ನು ರದ್ದು ಮಾಡಿದ್ದಾರೆ

ಮಧ್ಯಪ್ರದೇಶ: ಮುಖ್ಯಮಂತ್ರಿ ಮೋಹನ್ ಯಾದವ್ ಮತ್ತು ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರು ತಮ್ಮ ಬೆಂಗಾವಲು ವಾಹನಗಳನ್ನು ಕಡಿತ ಮಾಡಿದ್ದಾರೆ. ಸಾರ್ವಜನಿಕ ಸಾರಿಗೆ ಬಳಸುವಂತೆ ಅಧಿಕಾರಿಗಳು ಮತ್ತು ಸಂಪುಟ ಸದಸ್ಯರಿಗೆ ಸೂಚನೆ ನೀಡಿದ್ದಾರೆ

ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇ 50ರಷ್ಟು ಕಡಿತ ಮಾಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಮಿಳುನಾಡಿನಲ್ಲಿ ಟಿವಿಕೆ ಪಕ್ಷ ಅಧಿಕಾರಕ್ಕೇರಿದ್ದು, ನಟ ಜೋಸೆಫ್ ವಿಜಯ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಕೆಲವರು ನಾಮಫಲಕಗಳಲ್ಲಿರುವ ಹಿಂದಿ ಹೆಸರುಗಳಿಗೆ ಮಸಿ ಬಳಿಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಟಿವಿಕೆ ಅಧಿಕಾರಕ್ಕೆ ಬಂದ ನಂತರ ಹಿಂದಿ ವಿರೋಧಿ ಪ್ರತಿಭಟನೆಗಳು ಹೆಚ್ಚಾಗಿದ್ದು, ಇದೊಂದೇ ಅವರಿಗೆ ಗೊತ್ತಿರುವುದು ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಸನ್ ನ್ಯೂಸ್ 2026ರ ಮಾರ್ಚ್ 12ರಂದು ಇಂಥದೇ ವಿಡಿಯೊ ಅನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿರುವುದು ಕಂಡಿತು. 'ಮೇ 17 ಮೂವ್‌ಮೆಂಟ್' ಸಂಘಟನೆಯ ಸದಸ್ಯರು ಹಿಂದಿ ನಾಮಫಲಕಗಳ ವಿರುದ್ಧ ಪ್ರತಿಭಟನೆ ನಡೆಸಿ, ಚೆನ್ನೈನ ವಿಮಾನ ನಿಲ್ದಾಣದಲ್ಲಿದ್ದ ನಾಮಫಲಕಗಳಿಗೆ ಮಸಿ ಬಳಿದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ವಿಜಯ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿರುವುದು 2026ರ ಮೇ 10ರಂದು. ಅಂದರೆ, ವಿಜಯ್ ಮುಖ್ಯಮಂತ್ರಿ ಆಗುವುದಕ್ಕೆ ಮುಂಚಿನ ವಿಡಿಯೊ ಇದು. ಪ್ರಧಾನಿ ನರೇಂದ್ರ ಮೋದಿ ಅವರು 2026ರ ಮಾರ್ಚ್ 11ರಂದು ತಮಿಳುನಾಡಿಗೆ ಭೇಟಿ ನೀಡಿದ್ದರು. ಈ ದಿಸೆಯಲ್ಲಿ 'ಮೇ 17 ಮೂವ್‌ಮೆಂಟ್' ಸಂಘಟನೆಯ ಸದಸ್ಯರು ಚೆನ್ನೈನಲ್ಲಿ ಹಿಂದಿ ವಿರೋಧಿ ಪ್ರತಿಭಟನೆ ನಡೆಸಿದರು ಎಂದು ಹಲವು ಮಾಧ್ಯಮಗಳಲ್ಲಿ ವರದಿಯಾಗಿರುವುದು ಕಂಡಿತು. ಹಳೆಯ ವಿಡಿಯೊ ಹಂಚಿಕೊಂಡು ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6402

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಿತ್ತಲಲ್ಲಿರುವ ತೆಳು ಸೀರೆ (3)
4. ಮನವನ್ನು ಕೊನೆಗಿಟ್ಟು ಶಾಂತಪಡಿಸುವಿಕೆ (3)
6. ಮದುವೆಯಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
7. ಶರಣ ಹಿಡಿದಿರುವ ಬಾಣ (2)
9. ನಾವಿಕನಿಗೆ ಪ್ರಾಪ್ತವಾದ ಸ್ವರ್ಗ (2)
10. ಹತೋಟಿಯನ್ನು ಹೀಗೆ ಹೇಳಿ (2)
11. ಕಲಾವಿದನ ಮನೆಬಾಗಿಲು (2)
15. ಕೈಗೂಡದ ಆಸೆಯಿದು (5)
17. ಕತ್ತರಿಸುವ ಸಾಧನ (3)
18. ದರ್ಶನವೂ ಆಗಿರುವ ಕೊಡುಗೆ (3)

ಮೇಲಿಂದ ಕೆಳಕ್ಕೆ
1. ಬೇರೆಯವರ ಅಧೀನದಲ್ಲಿರುವಿಕೆ (4)
2. ರಾಮನ ಮಗ ಹಿಡಿದಿರುವ ಉಪ್ಪು (3)
3. ಸಿಟ್ಟು ಈ ರೀತಿ ಬಂದಿದೆ (2)
4. ಬಾಣ ಬಿದ್ದಿರುವ ಸಮುದ್ರ (3)
5. ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
8. ಕೀವು ಇಲ್ಲಿ ಕಾಣಿಸುತ್ತಿದೆ (3)
9. ದೇವರನ್ನು ನಂಬದವ ನಾಕದಲ್ಲಿದ್ದಾನಲ್ಲಾ? (3)
10. ಮಂಗಳ ಗ್ರಹವಿದು (4)
12. ಬಲಾತ್ಕಾರದ ಆಡಳಿತವನ್ನು ಹೀಗೆನ್ನಿ (4)
13. ನಗರದಲ್ಲಿ ಕೇಳಿಸಿರುವ ಚರ್ಮವಾದ್ಯ (3)
14. ಉದ್ದೇಶವೇ ಉಲ್ಟಾ ಪಲ್ಟಾ ಆಗಿದೆಯಲ್ಲಾ? (3)
16. ಇದು ಮುಚ್ಚಿಡಬೇಕಾದುದು (2)



6401ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬರಗು 6.ಜನಜನಿತ 7.ವಾಕರಿಕೆ 9.ದಂತಧಾವನ 13.ನನೆಗುದಿ 15.ಶರಣಾಗತ 17.ಪುಳಕ

ಮೇಲಿಂದ ಕೆಳಕ್ಕೆ: 1.ಬನವಾಸಿ 2.ಗುಜರಿ 3.ಹುಂಜ 4.ಗಜಗಮನ 5.ಅಂತರ್ಧಾನ 8.ಕೆಡಿತ 9.ದಂಡಪ್ರಣಾಮ 10.ವರ್ಧನ 11.ಆದಿಶಕ್ತಿ 12.ಹಾದಿಹೋಕ 14.ನೆನಪು 16.ತರಿ

ಸುಡೊಕು 6785

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6		8				1	2
2							7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

6784 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಅರ್ಹತೆಯ ಅರ್ಥ

ನುಡಿ ಬೆಳಗು

ಪಿ.ಚಂದ್ರಿಕಾ

ಬರವಣಿಗೆಯಲ್ಲಿ ನಿರತರಾಗಿದ್ದ ಬರ್ಟ್ರಂಡ್ ರಸಲ್ ಅವರ ಬಳಿಗೆ ಒಬ್ಬ ತರುಣ ಬಂದ. ರಸಲ್ ಆಗಲೇ ದೊಡ್ಡ ಲೇಖಕ ಎಂದು ಹೆಸರು ಮಾಡಿದ್ದರು. ತರುಣನಿಗೆ ತಾನು ಬರೆದದ್ದನ್ನು ರಸಲ್ ಅವರು ಓದಲೇಬೇಕು ಎನ್ನುವ ಹಟ. ಅವನು ಅದಕ್ಕಾಗಿ ಒಂದು ಉಪಾಯವನ್ನೂ ಮಾಡಿದ್ದ. ತನ್ನ ಅಣ್ಣತಮ್ಮಂದಿರು, ತಮ್ಮ ಪೂರ್ವಜರ ಬಗ್ಗೆ ಹೇಳಿಕೊಳ್ಳಲು ಆರಂಭಿಸಿದ. 'ನನ್ನ ಅಣ್ಣ ಅತ್ಯದ್ಭುತವಾದ ಹಾಡುಗಾರ, ನನ್ನ ಅಜ್ಜ ದೊಡ್ಡ ಪಂಡಿತರು, ತಂದೆ ಪ್ರಖ್ಯಾತ ಚಿತ್ರಗಾರ' ಎಂದೆಲ್ಲಾ ಹೇಳಲು ಆರಂಭಿಸಿದ.

ಅವನ ಮಾತುಗಳಿಗೆ ರಸಲ್ ನಗುತ್ತಲೇ, 'ನಿನ್ನ ಮಾತುಗಳನ್ನು ನಿಲ್ಲಿಸು. ಇಲ್ಲವಾದಲ್ಲಿ ಹಿಂದಕ್ಕೆ ಹೋಗುತ್ತಾ ಮಂಗನನ್ನು ಮುಟ್ಟೀತು. ಏನಾಗಬೇಕು ಅದನ್ನು ಹೇಳು' ಎಂದರು. ಅದಕ್ಕೆ ಯುವಕ ಪೆಚ್ಚಾಗುತ್ತಾ ತನ್ನ ಪುಸ್ತಕವನ್ನು ಅವರ ಮುಂದಿಟ್ಟು, 'ಇದನ್ನು ನೀವು ಓದಬೇಕೆಂಬುದು ಕೋರಿಕೆ' ಎಂದ. 'ಆಯಿತು ಸಮಯವಾದಾಗ ಓದುವೆ' ಎಂದರು. ಯುವಕನಿಗೆ ಸಮಾಧಾನ ಆಗಲಿಲ್ಲ, 'ನೀವು ನಿಜಕ್ಕೂ ಓದುವಿರಾ' ಎಂದ. ರಸಲ್ ಅವರಿಗೆ ಕೋಪ ಬಂದರೂ ತಡೆಯುತ್ತಾ, 'ನೀನು ನಿನ್ನ ಹಿರಿಯರ ಬಗ್ಗೆ ಹೇಳಿದೆ. ನನ್ನ ಹಿರಿಯರು ಕೂಡ ನನಗೊಂದು ಮಾತು ಹೇಳಿದ್ದಾರೆ. 'ನಾಲಿಗೆ ಯಾವಾಗಲೂ ಒದ್ದೆಯಾಗಿರುವ ಜಾಗದಲ್ಲಿ ಇರುತ್ತದೆ. ಹಾಗಾಗಿ, ನಾವು ಮಾತನಾಡುವಾಗ ಅದು ಬಹುಬೇಗ ಜಾರುವ ಸಂಭವ ಇರುತ್ತದೆ. ಆದರೆ ಏನು ಮಾತನಾಡಬೇಕು, ಮಾತನಾಡಬಾರದು ಎಂಬ ವಿವೇಕ ನಿನ್ನಲ್ಲಿ ಇದ್ದರೆ ನಾಲಿಗೆ ಜಾರದ ಹಾಗೆ ನೋಡಿಕೊಳ್ಳಬಹುದು' ಎಂದು ಹೇಳಿದ್ದಾರೆ' ಎಂದು ಕಾರ್ಯಮಗ್ನರಾಗುತ್ತಾರೆ. ಇದನ್ನು ಕೇಳಿ ಯುವಕ ಅವಮಾನದಿಂದ ಎದ್ದು ಹೊರಡುತ್ತಾನೆ.

ಒಂದಿಷ್ಟು ದಿನಗಳ ನಂತರ ಅಚಾನಕ್ ಆಗಿ ಯುವಕನ ಪುಸ್ತಕವನ್ನು ಕೈಗೆತ್ತಿಕೊಂಡರು ರಸಲ್. ಆಶ್ಚರ್ಯಕರವಾಗಿ ಆ ಪುಸ್ತಕ ಚೆನ್ನಾಗಿತ್ತು. ರಸಲ್ ಯುವಕನನ್ನು ಹುಡುಕಿ ಬರುತ್ತಾರೆ. ಯುವಕನಿಗೋ ಅಚ್ಚರಿ, ಅವತ್ತು ಅಷ್ಟೆಲ್ಲಾ ಅವಮಾನಿಸಿ ಕಳಿಸಿದ ರಸಲ್ ಅವರು ಇವತ್ತು ತನ್ನನ್ನು ಹುಡುಕಿ ಬಂದಿದ್ದಾರಲ್ಲಾ ಎಂದು. ರಸಲ್ ಯುವಕನನ್ನು ತಬ್ಬಿ, 'ನಿನ್ನ ಬರವಣಿಗೆ ನಿಜಕ್ಕೂ ಚೆನ್ನಾಗಿದೆ. ಓದಿದ ಮೇಲೆ ನಿನ್ನನ್ನು ನೋಡದೆ ಇರಲು ಸಾಧ್ಯವೇ ಇಲ್ಲ ಎಂದೆನ್ನಿಸಿ ಬಂದೆ' ಎಂದರು. ಅವರ ಆ ಸರಳತೆಯನ್ನು ಗ್ರಹಿಸಿದ ಯುವಕ ತಲೆ ತಗ್ಗಿಸಿ, 'ನನ್ನನ್ನು ಕ್ಷಮಿಸಿ, ಅವತ್ತು ನಿಮ್ಮನ್ನು ತುಂಬಾ ಬೈದುಕೊಂಡೆ' ಎಂದ.

ರಸಲ್ ಅವರಿಗೆ ಅವನ ಮನಸ್ಸಿನಲ್ಲಿ ನಡೆಯುತ್ತಿದ್ದ ಯುದ್ಧದ ಅರಿವಾಗಿ, 'ನಮ್ಮ ಯೋಗ್ಯತೆಗಳು ನಮ್ಮ ಹಿರಿಯರಿಂದ ಹೆಚ್ಚುವುದಿಲ್ಲ. ನೀನವತ್ತು ಅಷ್ಟೆಲ್ಲಾ ಹೇಳುವಾಗ ನನ್ನ ಮನಸ್ಸಿನಲ್ಲಿ ನಿನಗೆ ಯಾವ ಅರ್ಹತೆಯೂ ಇಲ್ಲ. ಆದ್ದರಿಂದ ನಿನ್ನ ಹಿರಿಯರ ಬಗ್ಗೆ ಹೇಳುತ್ತಿರುವೆ ಎನ್ನಿಸಿತು. ಆದರೆ ನಿನ್ನ ಅರ್ಹತೆಯ ಬಗ್ಗೆ ನಿನಗೆ ಅರಿವಿಲ್ಲವಾದರೆ ಹೇಗೆ? ಅರ್ಹತೆ ಯಾರದೋ ಏಣಿಯ ಮೇಲೆ ಹತ್ತಿ ನಿಂತರೆ ಸಿಗುವುದಲ್ಲ. ಗಳಿಸಿಕೊಳ್ಳಲು ಇರುವ ದಾರಿಯ ಹುಡುಕಾಟ. ನೀನವತ್ತು ನನ್ನ ಹುಡುಕಿ ಬಂದು ಓದಿ ಎಂದೆ. ನಿನ್ನ ಮನಸ್ಸಿನಲ್ಲಿ ಮೆಚ್ಚುಗೆಯ ಮಾತುಗಳಾಡಲಿ ಎಂದಿತ್ತು. ನಿನ್ನ ಪುಸ್ತಕ ಚೆನ್ನಾಗಿಲ್ಲದಿದ್ದರೆ ನಾನು ಇಲ್ಲಿಯವರೆಗೆ ಬರಲಿಕ್ಕಾಗುತ್ತಿತ್ತೇ? ಆ ಅರ್ಹತೆ ನಿನ್ನೊಳಗೇ ಇದೆ ಎನ್ನುವುದನ್ನು ಮೊದಲು ಮನನ ಮಾಡಿಕೋ' ಎಂದರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

14 ಮೇ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು, ತಿಥಿ: ವೈಶಾಖ ಕೃಷ್ಣ ದ್ವಾದಶಿ ಗಂ. 11-21, ನಕ್ಷತ್ರ: ರೇವತಿ ಗಂ. 23-34, ಯೋಗ: ಪ್ರೀತಿ ಗಂ. 17-53, ಕರಣ: ತೈತಿಲ ಗಂ. 11-21, ಮೇಷ ಮಾಸದ 30ನೇ ದಿನ. ಮಳೆ ನಕ್ಷತ್ರ: ಕೃತ್ತಿಕ 1 ನೇ ಪಾದ. ರಾಹುಕಾಲ: ಮಧ್ಯಾಹ್ನ 01-30 - 03-00, ಸೂರ್ಯೋದಯ: 06-09, ಸೂರ್ಯಾಸ್ತ: 06-45. ಮುಸ್ಲಿಂ ದಿನಾಂಕ: 26 ಜುಲ್ಕಾದಾ, ಅದೃಷ್ಟ ಸಂಖ್ಯೆ: 1, 5

ಮೇಷ: ವಿದ್ಯಾರ್ಥಿಗಳು ಸರಾಗವಾಗಿ ತಮ್ಮ ಅಭ್ಯಾಸವನ್ನು ಮುಂದುವರಿಸುವುದರಿಂದ ಜಯವನ್ನು ಕಾಣುವರು. ತಂದೆಯಿಂದ ನೆರವು ಸಿಗಲಿದೆ. ವಿರೋಧಿಗಳು ನಿಮ್ಮನ್ನು ಏನೂ ಮಾಡಲಾರರು.

ವೃಷಭ: ನೃತ್ಯ ಮತ್ತು ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು ಹಾಗೂ ಹೆಸರು ಸಂಪಾದಿಸಬಹುದು. ಸಾಂಸಾರಿಕವಾಗಿ ಪತಿ- ಪತ್ನಿಯ ಅನ್ಯೋನ್ಯತೆಯ ಕನಸು ನನಸಾಗಲಿದೆ. ಹೊಸ ಬಟ್ಟೆ ಖರೀದಿಸುವ ಯೋಗ.

ಮಿಥುನ: ಅತ್ತೆ-ಸೊಸೆ ನಡುವೆ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ ಇರಲಿ. ನಿಮ್ಮ ಅರ್ಹತೆಗೆ ತಕ್ಕ ಸ್ಥಾನಮಾನ ಲಭಿಸುವವರೆಗೆ ತಾಳ್ಮೆಯಿಂದ ಇರುವುದು ಉತ್ತಮ. ವಾಣಿಜ್ಯ ವ್ಯಾಪಾರಗಳಿಂದ ಅಧಿಕ ಲಾಭ.

ಕರ್ಕಾಟಕ: ಯಶಸ್ಸಿನ ಕೆಲಸಗಳಿಗೆ ಹಿಂದಿನ ಸೋಲು ನಿಮ್ಮನ್ನು ಬಾಧಿಸುತ್ತಿವುದರ ಜೊತೆಗೆ ಇಂದಿನ ಉತ್ಸಾಹದಲ್ಲಿ ಕೊರತೆ ಎದ್ದು ಕಾಣಲಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪರಿಶ್ರಮಕ್ಕೆ ತಕ್ಕಂತೆ ಯಶಸ್ಸು ಸಾಧಿಸಲು ಕಷ್ಟವಾಗುವುದು.

ಸಿಂಹ: ಈ ದಿನ ಪ್ರಾರಂಭಿಸಿದ ಕೆಲಸವನ್ನು ಸಂಪೂರ್ಣವಾಗಿ ಮುಗಿಸುವ ಬಗ್ಗೆ ಜವಾಬ್ದಾರಿ ಇರಲಿ. ಎಲ್ಲರನ್ನೂ ನಂಬುವ ನಿಮ್ಮ ದೌರ್ಬಲ್ಯದಿಂದ ತೊಂದರೆ ಉಂಟಾಗಬಹುದು. ಈ ದಿನ ಹಂತ ಹಂತವಾಗಿ ಪ್ರಗತಿ ಪ್ರಾಪ್ತಿಯಾಗುವುದು.

ಕನ್ಯಾ: ಯಾವುದೇ ಅನಿವಾರ್ಯಗಳಿಲ್ಲದೆ ಕೇವಲ ಹಿರಿಮೆಗಾಗಿ ವಿಲಾಸಿ ವಸ್ತುಗಳನ್ನು ಖರೀದಿಸುವಿರಿ. ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಅಧಿಕ ಲಾಭ. ಸಾಲದ ಹಣ ಈ ದಿನ ಹಿಂತಿರುಗಿ ಬರುವುದು.

ತುಲಾ: ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ತೇಜೋವಧೆ ಮಾಡಿದ ವ್ಯಕ್ತಿಗಳ ಎದುರು ಇಂದು ಅವರಿಗಿಂತ ಉತ್ತಮ ಸ್ಥಿತಿಯಲ್ಲಿರುವ ನೀವು ವಿನಯವನ್ನು ಮರೆಯದಿರಿ. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ.

ವೃಶ್ಚಿಕ: ಏಕಕಾಲದಲ್ಲಿ ಹಲವು ಕೆಲಸಗಳನ್ನು ಗಮನಿಸಬೇಕಾದ ಅನಿವಾರ್ಯ ಎದುರಾಗುವುದು. ಹೊಸ ಮನೆಯ ಕೆಲಸಗಳು ಮುಕ್ತಾಯದ ಹಂತದಲ್ಲಿದ್ದು, ಮನಸ್ಸಿಗೆ ನೆಮ್ಮದಿ ಸಿಗುವುದು. ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ಸಿಗುತ್ತದೆ.

ಧನು: ನೀವು ಇರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ, ಕೂಡಲೇ ಬಗೆಹರಿಸಿಕೊಳ್ಳಿ. ಶಿಕ್ಷಣ ಕ್ಷೇತ್ರದಲ್ಲಿನ ನಿಮ್ಮ ಸೇವೆಗೆ ಸಂಘ-ಸಂಸ್ಥೆಗಳಿಂದ ಸನ್ಮಾನ ಸಿಗಲಿದೆ. ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ಮಕರ: ಉದಾಸೀನತೆಯನ್ನು ದೂರ ಮಾಡುವುದರಿಂದ ಯಶಸ್ಸನ್ನು ಪಡೆಯಬಹುದು. ನಿಮ್ಮ ಸಹಾಯದ ಮನೋಭಾವದಿಂದ ಸಂಬಂಧಗಳು ಇನ್ನಷ್ಟು ಗಟ್ಟಿಗೊಳ್ಳಲಿವೆ. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಕುಂಭ: ಇಂದು ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನವಾದ ಪ್ರಯೋಗಗಳಲ್ಲಿ ತೊಡಗಿಸಿಕೊಳ್ಳಿ. ಉದ್ಯೋಗದ ಹುಡುಕಾಟ ನಡೆಸುವವರಿಗೆ ಅಪರಿಚಿತ ವ್ಯಕ್ತಿಯಿಂದ ಸಹಾಯ ಆಗುವುದು.

ಮೀನ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಿಮ್ಮೊಳಗಿನ ನಾಯಕನನ್ನು ಜಾಗೃತಗೊಳಿಸುವಿರಿ. ಇಂದು ಪ್ರಭಾವಿ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಬೇಕಾಗುವುದು.

ಅಡಿಕೆ ಧಾರಣೆ

ಕುಮಟಾ		ಹಳೆಚಾಲಿ	47199-49298	ಶಿವಮೊಗ್ಗ	
ಚೆಟ್ಟೆ	40109-48009	ಹೊಸಚಾಲಿ	43869-48199	ಸರಕು	54000-93696
ಚಿಪ್ಪು	31569-36009	ಪುತ್ತೂರು		ಬೆಟ್ಟೆ	52172-58099
ಕೋಕ	17198-34199	ಕೋಕ	20000-34500	ರಾಶಿ	42299-54299
ಫ್ಯಾಕ್ಟರಿ	15019-29400	ಹೊಸತು	30000-47500	ಗೊರಬಲು	19000-42089

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,379
ಇಂದಿನ ಅಂತ್ಯ: 23,412
ದಿನದ ಗರಿಷ್ಠ: 23,582
33

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹590
12 ಕ್ಕೆ ₹84
ಮೈಸೂರು: 100 ಕ್ಕೆ ₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹256
ಆರ್‌ಎಸ್‌ಎಸ್-5 ₹249
ಗುಡ್ ಲಾಟ್ ₹217

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹433-670
ದ್ವಿತಳಿ (ಬಿ.ವಿ) ₹445-805

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1600 (1610)
ಸೋಯಾ (ರಿಫೈನ್ಡ್) ₹1485 (1490)
ಸೂರ್ಯಕಾಂತಿ (ರಿಫೈನ್ಡ್) ₹1635 (1640)
ಪಾಮೋಲಿನ್ ₹1470 (1475)

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹23500
ಎಸಿ ₹14000
ಆರ್‌ಪಿ ₹18250
ಆರ್‌ಸಿ ₹9900

ಅಮೂಲ್, ಮದರ್ ಡೇರಿ ಹಾಲು ಬೆಲೆ ₹2 ಹೆಚ್ಚಳ

ನವದೆಹಲಿ (ಪಿಟಿಐ): ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟವು (ಜಿಸಿಎಂಎಂಎಫ್) ಪ್ರತಿ ಲೀಟರ್ 'ಅಮೂಲ್' ಹಾಲಿನ ಮಾರಾಟ ದರವನ್ನು ₹2ರಷ್ಟು ಹೆಚ್ಚಿಸಿದೆ. ಪರಿಷ್ಕೃತ ದರವು ಗುರುವಾರದಿಂದ ಜಾರಿಗೆ ಬರಲಿದೆ.

ಕಳೆದ ವರ್ಷದ ಮೇ 1ರಂದು ಕಂಪನಿಯು ಹಾಲಿನ ಬೆಲೆ ಹೆಚ್ಚಿಸಿತ್ತು. ಮೇವು ಬೆಲೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಹಾಲಿನ ಉತ್ಪಾದನಾ ವೆಚ್ಚ ಸೇರಿದಂತೆ ಒಟ್ಟಾರೆ ಕಾರ್ಯಾಚರಣೆ ವೆಚ್ಚ ಏರಿಕೆಯಾಗಿದೆ. ಹೀಗಾಗಿ, ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಒಕ್ಕೂಟವು ತಿಳಿಸಿದೆ.

ಮದರ್ ಡೇರಿ ಕೂಡ ಲೀಟರ್ ಹಾಲಿನ ದರವನ್ನು ₹2ರಷ್ಟು ಜಾಸ್ತಿ ಮಾಡಿದೆ. ಪ್ರಾದೇಶಿಕ ಮಟ್ಟದ ಇತರ ಕೆಲವು ಹಾಲು ಒಕ್ಕೂಟಗಳು ಕೂಡ ಹಾಲಿನ ದರವನ್ನು ಜಾಸ್ತಿ ಮಾಡುವ ಸಾಧ್ಯತೆ ಇದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

IN LOVING MEMORY
S CHANDRASHEKAR
S/o Late K P Shamanna and Neelamma
Kacharakanahalli
DOD : 03-05-2026
Our guiding light and Hero has left us,
but his wisdom, kindness,
and love remain eternal.
You were our strength, our protector,
and our greatest blessing.
Forever remembered, deeply missed,
and always cherished.
Deeply mourned by: Padmavathi R, Daughters, Son-in-laws,
beloved Grandchildren & dearest family members.



SAD DEMISE

Dr.K.G.DAS
DOB : 30.07.1928 DOD : 12.05.2026
Greatest doctor, Inspiring teacher, loving husband & father
Public Darshan: 14th May 2026 from 08.00 am to 12.00 pm.
@ No.18, Muniswamappa Layout, Halasuru,
Swamy Vivekananda Road, Bengaluru 560008
Cremation after 3.00 pm at Kalpalli cemetery, Cox Town
Mrs. Rama Devi G Das, Govardhan Das, Gokul Das,
Radhika Rani & Family members, relatives & friends
Mobile No. : 9482218262 / 9880624910

14 ಬೆಳೆಗಳ ಎಂಎಸ್‌ಪಿ ಹೆಚ್ಚಳ: ಕೇಂದ್ರ

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: 2026-27ರ ಖಾರಿಫ್ ಮಾರುಕಟ್ಟೆ ಋತುವಿಗಾಗಿ 14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಭತ್ತದ ಎಂಎಸ್‌ಪಿಯನ್ನು ಕ್ವಿಂಟಲ್‌ಗೆ ₹72 ಹೆಚ್ಚಿಸಲಾಗಿದೆ. ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮತ್ತು ಹತ್ತಿ ಎಂಎಸ್‌ಪಿ ಗಣನೀಯ ಏರಿಕೆ ಆಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಎಂಎಸ್‌ಪಿಯಲ್ಲಿ ಅತ್ಯಧಿಕ ಹೆಚ್ಚಳವನ್ನು ಸೂರ್ಯಕಾಂತಿ ಬೀಜಕ್ಕೆ (ಕ್ವಿಂಟಲ್‌ಗೆ ₹622), ಹತ್ತಿ (ಕ್ವಿಂಟಲ್‌ಗೆ ₹557), ಹುಚ್ಚೆಳ್ಳು (ಕ್ವಿಂಟಲ್‌ಗೆ ₹515) ಮತ್ತು ಎಳ್ಳಿಗೆ (ಕ್ವಿಂಟಲ್‌ಗೆ ₹500) ಶಿಫಾರಸು ಮಾಡಲಾಗಿದೆ. ಬೆಳೆ ವೈವಿಧ್ಯೀಕರಣ ಉತ್ತೇಜಿಸಲು ಮತ್ತು ಆಮದು ಅವಲಂಬನೆ ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತರಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲ 14 ಬೆಳೆಗಳಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ 50 ಪ್ರತಿಶತದಷ್ಟು ಹೆಚ್ಚಿನ ಎಂಎಸ್‌ಪಿ ನಿಗದಿಪಡಿಸಲಾಗಿದೆ ಎಂದು ಅವರು ಹೇಳಿದರು.

ಎಂಎಸ್‌ಪಿ ಹೆಚ್ಚಳ (₹ಕ್ವಿಂಟಲ್‌ಗೆ)

ಬೆಳೆ	2025-26	2026-27	ಏರಿಕೆ
ಭತ್ತ	2,369	2,441	72
ಭತ್ತ ಎ ಗ್ರೇಡ್	2,389	2461	72
ಜೋಳ (ಹೈಬ್ರಿಡ್)	3,699	4,023	324
ಮಾಲ್ದಂಡಿ ಜೋಳ	3,749	4,073	324
ಸಜ್ಜೆ	2,775	2,900	125
ರಾಗಿ	4,886	5,205	319
ಮೆಕ್ಕೆಜೋಳ	2,400	2,410	10
ತೊಗರಿ	8,000	8,450	450
ಹೆಸರುಕಾಳು	8,768	8,780	12
ಉದ್ದು	7,800	8,200	400
ನೆಲಗಡಲೆ	7,263	7,517	254
ಸೂರ್ಯಕಾಂತಿ ಬೀಜ	7,721	8,343	622
ಸೋಯಾಬೀನ್ (ಹಳದಿ)	5,328	5,708	380
ಎಳ್ಳು	9,846	10,346	500
ಹುಚ್ಚೆಳ್ಳು	9,537	10,052	515
ಹತ್ತಿ (ಮಧ್ಯಮ ಎಳೆ)	7,710	8,267	557
ಹತ್ತಿ (ಉದ್ದನೆಯ ಎಳೆ)	8,110	8,667	557

ಕಲ್ಲಿದ್ದಲು ಅನಿಲೀಕರಣಕ್ಕೆ ₹37,500 ಕೋಟಿ

ಮೇಲ್ಮೈ ಕಲ್ಲಿದ್ದಲು ಮತ್ತು ಲಿಗ್ನೈಟ್ ಅನಿಲೀಕರಣ ಯೋಜನೆಗಳನ್ನು ಉತ್ತೇಜಿಸಲು ₹37,500 ಕೋಟಿಯ ಪ್ರೋತ್ಸಾಹಕ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಉಪಕ್ರಮವು ಆಮದು ಮಾಡಿಕೊಂಡ ಎಲ್‌ಎನ್‌ಜಿ, ಯೂರಿಯಾ, ಮೆಥನಾಲ್ ಮತ್ತು ಇತರ ಪ್ರಮುಖ ಉತ್ಪನ್ನಗಳ ಮೇಲಿನ ಭಾರತದ ಭಾರೀ ಅವಲಂಬನೆ ಕಡಿಮೆ ಮಾಡುವ ಮತ್ತು ದೇಶದ ಇಂಧನ ಸುರಕ್ಷತೆ ಬಲಪಡಿಸುವ ಗುರಿ ಹೊಂದಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು. ಈ ಯೋಜನೆಯು 7.5 ಕೋಟಿ ಟನ್ ಕಲ್ಲಿದ್ದಲಿನ ಅನಿಲೀಕರಣಕ್ಕೆ ಉತ್ತೇಜನ ನೀಡುತ್ತದೆ. ಸುಮಾರು ₹3 ಲಕ್ಷ ಕೋಟಿ ಹೂಡಿಕೆಗಳನ್ನು ಆಕರ್ಷಿಸುವ ನಿರೀಕ್ಷೆಯಿದೆ ಎಂದರು.

ಸ್ಥಾವರ (ಪ್ಲಾಂಟ್) ಮತ್ತು ಯಂತ್ರೋಪಕರಣಗಳ ವೆಚ್ಚದ ಗರಿಷ್ಠ ಶೇ 20 ರಷ್ಟು ಆರ್ಥಿಕ ಪ್ರೋತ್ಸಾಹ ಒದಗಿಸಲಾಗುತ್ತದೆ. ಯಾವುದೇ ಒಂದು ಯೋಜನೆಗೆ ನೀಡಲಾಗುವ ಹಣಕಾಸಿನ ಪ್ರೋತ್ಸಾಹಧನವನ್ನು ₹5,000 ಕೋಟಿಗೆ ಸೀಮಿತಗೊಳಿಸಲಾಗಿದೆ. ಯಾವುದೇ ಒಂದು ಉತ್ಪನ್ನಕ್ಕೆ (ಸಿಂಥೆಟಿಕ್ ನೈಸರ್ಗಿಕ ಅನಿಲ ಮತ್ತು ಯೂರಿಯಾ ಹೊರತುಪಡಿಸಿ) ಗರಿಷ್ಠ ₹9,000 ಕೋಟಿಗೆ ಮತ್ತು ಯಾವುದೇ ಒಂದು ಘಟಕ ಸಮೂಹಕ್ಕೆ ಗರಿಷ್ಠ ₹12,000 ಕೋಟಿ ಪ್ರೋತ್ಸಾಹಧನ ನೀಡಲಾಗುತ್ತದೆ. ಯೋಜನೆಗೆ ಅನುಗುಣವಾಗಿ ನಾಲ್ಕು ಸಮಾನ ಕಂತುಗಳಲ್ಲಿ ಪ್ರೋತ್ಸಾಹಧನದ ವಿತರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಸಂಪುಟದ ಇತರ ತೀರ್ಮಾನಗಳು

- ಗುಜರಾತ್‌ನ ಅಹಮದಾಬಾದ್ ಮತ್ತು ಧೋಲೆರಾ ನಡುವೆ ₹20,667 ಕೋಟಿ ಅಂದಾಜು ವೆಚ್ಚದಲ್ಲಿ 134 ಕಿ.ಮೀ. ಉದ್ದದ ಸೆಮಿ ಹೈ-ಸ್ಪೀಡ್ ಡಬಲ್ ರೈಲು ಮಾರ್ಗದ ನಿರ್ಮಾಣಕ್ಕೆ ಒಪ್ಪಿಗೆ. ಈ ಯೋಜನೆಯು ಸ್ವದೇಶಿ ತಂತ್ರಜ್ಞಾನದೊಂದಿಗೆ ಯೋಜಿಸಲಾದ ಭಾರತೀಯ ರೈಲ್ವೆಯ ಮೊದಲ ಸೆಮಿ ಹೈ-ಸ್ಪೀಡ್ ಕಾರಿಡಾರ್ ಆಗಿರಲಿದೆ. ಈ ಮಾರ್ಗವು 2030-31ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.
- ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಾಗ್ಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಮತ್ತು ಆಧುನೀಕರಿಸಲು ಅನುಮೋದನೆ.

ಜೂನ್ ತ್ರೈಮಾಸಿಕದಲ್ಲಿ ಕಂಪನಿಗೆ ನಷ್ಟ ಸಾಧ್ಯತೆ: ₹19 ಲಾಭಾಂಶ ಘೋಷಿಸಿದ ಕಂಪನಿ

ಎಚ್‌ಪಿಸಿಎಲ್‌ಗೆ ₹17,258 ಕೋಟಿ ಲಾಭ

ನವದೆಹಲಿ (ಪಿಟಿಐ): 2025-26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ₹4,901 ಕೋಟಿ ನಿವ್ವಳ ಲಾಭ ಗಳಿಸಿದೆ.

2024-25ರ ಇದೇ ಅವಧಿಯಲ್ಲಿ ಕಂಪನಿಯು ₹3,354 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದ ಪ್ರಮಾಣದಲ್ಲಿ ಶೇ 46ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ಷೇರುಪೇಟೆಗೆ ಬುಧವಾರ ತಿಳಿಸಿದೆ.

2025-26ರ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹17,175 ಕೋಟಿ ಲಾಭ ಗಳಿಸಿದೆ. 2024-25ರಲ್ಲಿ ಇದು ₹7,271 ಕೋಟಿಯಷ್ಟಿದ್ದು, ಲಾಭದ ಪ್ರಮಾಣ ದುಪ್ಪಟ್ಟಿಗಿಂತಲೂ ಹೆಚ್ಚಳವಾಗಿದೆ. ತೈಲೋತ್ಪನ್ನಗಳ ಮಾರಾಟವು ಆರೋಗ್ಯಕರ ಮಟ್ಟದಲ್ಲಿ ಇದ್ದಿದ್ದು ಲಾಭದ ಏರಿಕೆಗೆ ಒಂದು ಕಾರಣ ಎಂದು ತಿಳಿಸಿದೆ.

2023-24ರ ಆರ್ಥಿಕ ವರ್ಷದಲ್ಲಿ ಕಂಪನಿಯು ₹14,694 ಕೋಟಿಯಷ್ಟು ಲಾಭ ಗಳಿಸಿತ್ತು.

ಒಂದು ಬ್ಯಾರಲ್ ಕಚ್ಚಾ ತೈಲವನ್ನು ಇಂಧನವಾಗಿ ಸಂಸ್ಕರಣೆ ಮಾಡಿದಾಗ ಕಂಪನಿಗೆ ಮಾರ್ಚ್ ತ್ರೈಮಾಸಿಕದಲ್ಲಿ 8.79 ಡಾಲರ್ ಗಳಿಕೆ ಸಿಕ್ಕಿದೆ. ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹19.25 ಅಂತಿಮ ಲಾಭಾಂಶ ನೀಡಲು ಶಿಫಾರಸು ಮಾಡಿದೆ.

'ಪಶ್ಚಿಮ ಏಷ್ಯಾ ಸಂಘರ್ಷದಿಂದ ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್-ಜೂನ್ ತ್ರೈಮಾಸಿಕವು ಕಂಪನಿಗೆ ಕಷ್ಟಕರವಾಗಿದೆ ಮತ್ತು ನಷ್ಟ ಉಂಟಾಗುವ ಸಾಧ್ಯತೆ ಇದೆ' ಎಂದು ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಕೌಶಲ್ ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದ ಪೂರ್ಣ ಪರಿಣಾಮವು ಜೂನ್ ತ್ರೈಮಾಸಿಕದಲ್ಲಿ ಕಂಡು ಬರಲಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಹೊರ್ಮುಜ್ ಜಲಸಂಧಿಯಲ್ಲಿ ಸಾಗಣೆಗೆ ಅಡಚಣೆ ಉಂಟಾಯಿತು. ಇದರಿಂದ ಎಚ್‌ಪಿಸಿಎಲ್ ರಷ್ಯಾ, ಆಫ್ರಿಕಾ, ಅಮೆರಿಕ ಮತ್ತು ವೆನೆಜುವೆಲಾದಿಂದ ತೈಲ ಖರೀದಿಸುವುದನ್ನು ಆರಂಭಿಸಿತು.

ಕಂಪನಿಯು ತನ್ನ ಅಂಗ ಸಂಸ್ಥೆಗಳು ಮತ್ತು ಜಂಟಿ ಉದ್ಯಮಗಳ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲು ಹೂಡಿಕೆ ಮಾಡಿದೆ. ಹೊಸ ವ್ಯವಹಾರ ಮತ್ತು ಕಾರ್ಯಾಚರಣೆ ಸಾಮರ್ಥ್ಯವನ್ನು ಸುಧಾರಿಸುವುದು ಸೇರಿದಂತೆ ಸಂಸ್ಕರಣಾಗಾರಗಳು ಮತ್ತು ಮಾರ್ಕೆಟಿಂಗ್ ಮೂಲಸೌಕರ್ಯಗಳನ್ನು ಬಲಪಡಿಸಲು ₹15,705 ಕೋಟಿ ವೆಚ್ಚ ಮಾಡಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

13-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಪಾಮ್ ವಾರದ ಡೆಲಿವರಿ	1468 (1473)
ಸೂರ್ಯಕಾಂತಿ ಎಣ್ಣೆ ಕಚ್ಚಾ	1525 (1520)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,60,000 (1,51,000)
ಬೆಳ್ಳಿ ಕೆ.ಜಿಗೆ	2,88,000 (2,68,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಾರತಕ್ಕೆ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಇಲ್ಲ: ರಷ್ಯಾ

ಮಾಸ್ಕೊ (ಪಿಟಿಐ): 'ಭಾರತ ಮತ್ತು ರಷ್ಯಾದ ಸಂಬಂಧವು ಸ್ನೇಹದ ಆಧಾರದಲ್ಲಿ ಮೂಡಿದೆ. ಇಂಧನ ಪೂರೈಕೆ ವಿಚಾರದಲ್ಲಿ ಭಾರತದ ಅಗತ್ಯವನ್ನು ನೀಗಿಸಲಾಗುವುದು. ಬಾಹ್ಯವಾದ ಎಷ್ಟೇ ಒತ್ತಡ ಇದ್ದರೂ ಇಂಧನ ಪೂರೈಕೆಯಲ್ಲಿ ವ್ಯತ್ಯಯ ವಾಗುವುದಿಲ್ಲ' ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊ ಹೇಳಿದರು.

'ರಷ್ಯಾ ಟುಡೆ' ಸುದ್ದಿ ಸಂಸ್ಥೆಗೆ ಅವರು ಸಂದರ್ಶನ ನೀಡಿದರು. ಬ್ರಿಕ್ಸ್‌ನ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಲಾವ್ರೊ ಅವರು ಭಾರತಕ್ಕೆ ಭೇಟಿ ನೀಡಿದ್ದಾರೆ. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಸಭೆ ನಡೆಸಲಿದ್ದಾರೆ. 'ಇಂಧನ ಪೂರೈಕೆ ವಿಚಾರದಲ್ಲಿ ಭಾರತ ಮಾತ್ರವಲ್ಲ ಯಾವುದೇ ದೇಶದ ವಿಚಾರದಲ್ಲಿಯೂ ರಷ್ಯಾವು ಎಂದಿಗೂ ಸಮಸ್ಯೆ ಮಾಡಿಲ್ಲ ಎಂದು ಹೇಳಿದ್ದಾರೆ.

ಹೊಸಬಾಳೆ ಹೇಳಿಕೆ: ಆರ್‌ಎಸ್‌ಎಸ್ ನಿಲುವಿನ ಕುರಿತು ಚರ್ಚೆ

ನವದೆಹಲಿ (ಪಿಟಿಐ): 'ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಲು ಸದಾ ದಾರಿಯೊಂದನ್ನು ತೆರೆದಿಟ್ಟುಕೊಳ್ಳಬೇಕು' ಎಂದಿದ್ದ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆಯು ದೊಡ್ಡ ಮಟ್ಟದ ಚರ್ಚೆಯನ್ನು ಹುಟ್ಟು ಹಾಕಿದೆ. ಪಿಟಿಐ ಸುದ್ದಿ ಸಂಸ್ಥೆಯು ಹೊಸಬಾಳೆ ಅವರ ಸಂದರ್ಶನ ನಡೆಸಿತ್ತು.

'ಪಾಕಿಸ್ತಾನ-ಭಾರತ ಸಂಬಂಧ ಸುಧಾರಣೆ: ಜನರಿಂದ ಸಾಧ್ಯ'

ನಾವು ಒಂದೇ ದೇಶವಾಗಿದ್ದವರು. ನಮ್ಮ ಸಂಸ್ಕೃತಿಗಳಿಗೆ ಸಂಬಂಧಗಳಿವೆ. ಆದರೆ, ಮಾತುಕತೆ ಇಲ್ಲದ, ಸಂಬಂಧಗಳಲ್ಲಿ ಯಾವುದೇ ಸುಧಾರಣೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಗೆ ಎರಡೂ ದೇಶಗಳು ತಲುಪಿವೆ. ಪಾಕಿಸ್ತಾನದ ಸೇನೆ ಮತ್ತು ರಾಜಕೀಯ ನಾಯಕರ ಬಗ್ಗೆ ಭಾರತದ ಜನರು ನಂಬಿಕೆ ಕಳೆದುಕೊಂಡಿದ್ದಾರೆ. ಈ ಸ್ಥಿತಿಯಿಂದ ಹೊರಬರಲು ಇರುವ ಒಂದೇ ಭರವಸೆ ಎಂದರೆ, ಅದು ಜನರು. ಎರಡೂ ದೇಶಗಳ ಜನರ ಪರಸ್ಪರ ಸಂಪರ್ಕದಿಂದ ನಮ್ಮ ಸಂಬಂಧ ಸುಧಾರಿಸಬಹುದು. ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವ ಒಂದು ದಾರಿಯನ್ನು ನಾವು ಸದಾ ತೆರೆದಿಟ್ಟುಕೊಂಡಿರಬೇಕು

'ಪರಿಶುದ್ಧ ಪ್ರೀತಿ' ಇದ್ದರೆ ಅಂತರ ಧರ್ಮೀಯ ವಿವಾಹವೂ ಒಪ್ಪಿತ'

'ಪರಿಶುದ್ಧ ಪ್ರೀತಿ'ಯನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ. ಆ ಪ್ರೀತಿಯು ಎರಡು ಧರ್ಮಗಳ ವ್ಯಕ್ತಿಗಳ ಮಧ್ಯೆಯೇ ಆಗಿರಬಹುದು. ಆದರೆ, ಹಿಂದೂ ಹುಡುಗಿಯರನ್ನು ಪಿತೂರಿಯಿಂದ ಹೊತ್ತೊಯ್ದರೆ, ಅದನ್ನು ಸಹಿಸಲು ಸಾಧ್ಯವಿಲ್ಲ. ಆರ್‌ಎಸ್‌ಎಸ್‌ನ ಸ್ವಯಂ ಸೇವಕರೇ ಬೇರೆ ಬೇರೆ ಜಾತಿ, ಧರ್ಮದವರು, ಅಷ್ಟೇ ಏಕೆ ಬೇರೆ ಬೇರೆ ದೇಶದವರನ್ನು ಮದುವೆಯಾಗಿದ್ದಾರೆ. ಇವರ ಈ 'ಪರಿಶುದ್ಧ ಪ್ರೀತಿ'ಯನ್ನು ನಾವು ಒಪ್ಪಿಕೊಂಡಿದ್ದೇವೆ. ಇವರ ಮದುವೆಗಳಿಗೂ ಹೋಗಿದ್ದೇವೆ; ಸಂಭ್ರಮಿಸಿದ್ದೇವೆ. ಲವ್ ಜಿಹಾದ್ ಎಂದರೆ ಇದೇ ಎಂದು ಯಾರೂ ವ್ಯಾಖ್ಯಾನಿಸಿಲ್ಲ. ಮತ್ತು ಈ ಪದವನ್ನು ಬಳಕೆಗೆ ತಂದಿದ್ದು ಆರ್‌ಎಸ್‌ಎಸ್ ಕೂಡ ಅಲ್ಲ. ಯಾವುದೋ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಮೊದಲ ಬಾರಿಗೆ ಈ ಪದವನ್ನು ಬಳಸಿದ್ದರು

ದೇಶ ಯಾವಾಗಲೂ ಹಿಂದೂ ರಾಷ್ಟ್ರವೇ ಆಗಿತ್ತು

ಹಿಂದೆ ನಮ್ಮ ದೇಶದಲ್ಲಿ ಬ್ರಿಟಿಷ್ ಆಡಳಿತ ಇತ್ತು. ಆಗಲೂ ಇದು ಹಿಂದೂ ರಾಷ್ಟ್ರವೇ ಆಗಿತ್ತೆ ಹೊರತು ಬ್ರಿಟಿಷ್ ರಾಷ್ಟ್ರ ಆಗಿರಲಿಲ್ಲ.

ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

'ಇದನ್ನೇ ಬೇರೆ ಯಾರಾದರೂ ಹೇಳಿದ್ದರೆ...?'

ಹೊಸಬಾಳೆ ಅವರ ಇತ್ತೀಚಿನ ಅಮೆರಿಕದ ಪ್ರವಾಸದ ವೇಳೆ, ಅವರ ಸಹೋದ್ಯೋಗಿಯೊಬ್ಬರು ಅಮೆರಿಕ ಬಯಸಿದಂತೆ ಪ್ರಧಾನಿ ಮೋದಿ ನಡೆದುಕೊಂಡಿದ್ದಾರೆ ಎಂದು ಒಪ್ಪಿಕೊಂಡಿದ್ದರು. ಈ ಘಟನೆಯಿಂದ ಉಂಟಾದ ಪರಿಣಾಮದ ಪ್ರಭಾವವು ಹೊಸಬಾಳೆ ಅವರಿಗೂ ತಟ್ಟಿದೆಯೇ? ಹೊಸಬಾಳೆ ಅಲ್ಲದೆ ಬೇರೆ ಯಾರಾದರೂ ಇಂಥಾ ಮಾತುಗಳನ್ನು ಆಡಿದ್ದರೆ, ಭಕ್ತರ ಬ್ರಿಗೇಡ್ ಮತ್ತು ಸುದ್ದಿ ವಾಹಿನಿಗಳು ದ್ವೇಷದ ಬೆಂಕಿ ಉಗುಳುತ್ತಿದ್ದವು

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ದೊಡ್ಡ ಶಕ್ತಿ ನಿಮ್ಮಿಂದ ಹೀಗೆ ಹೇಳಿಸುತ್ತಿದೆಯೇ?'

ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಬೇಕು ಎನ್ನುವಷ್ಟು ಬದಲಾವಣೆ ಏನಾಗಿದೆ? ಎರಡೂ ದೇಶಗಳ ಜನರು ಪರಸ್ಪರ ತೊಡಗಿಕೊಳ್ಳುವುದರಿಂದ ಪಾಕಿಸ್ತಾನವು ನಮ್ಮ ದೇಶದ ವಿರುದ್ಧ ಭಯೋತ್ಪಾದನೆಯನ್ನು ಅಸ್ತ್ರವಾಗಿ ಬಳಸಿಕೊಳ್ಳುವುದನ್ನು ನಿಲ್ಲಿಸುತ್ತದೆಯೇ? ಯಾಕಾಗಿ ನಿಮಗೆ ಅವರೊಂದಿಗೆ ಮಾತುಕತೆ ನಡೆಸಬೇಕು ಎಂದು ಅನಿಸುತ್ತಿದೆ? ಪಾಕಿಸ್ತಾನದಿಂದ ಉಪಕೃತವಾಗಿರುವ ಯಾವುದೋ ದೊಡ್ಡ ಶಕ್ತಿಯು ನಿಮ್ಮಿಂದ ಹೀಗೆ ಹೇಳಿಸುತ್ತಿದೆಯೇ?

ಮನೀಶ್ ತಿವಾರಿ, ಕಾಂಗ್ರೆಸ್ ಸಂಸದ

ಸಿಇಸಿ ಪುನರ್‌ರಚಿಸಿದ ಪರಿಸರ ಸಚಿವಾಲಯ

ನವದೆಹಲಿ(ಪಿಟಿಐ): ಕೇಂದ್ರ ಪರಿಸರ ಸಚಿವಾಲಯವು ಕೇಂದ್ರ ಉನ್ನತಾಧಿಕಾರ ಸಮಿತಿಯನ್ನು(ಸಿಇಸಿ) ಪುನರ್‌ರಚಿಸಿ ಬುಧವಾರ ಅಧಿಸೂಚನೆ ಹೊರಡಿಸಿದೆ.

ಸಮಿತಿಯ ಸದಸ್ಯರಲ್ಲೊಬ್ಬರಾದ ಮಾಜಿ ಡಿಜಿಎಫ್ ಚಂದ್ರಪ್ರಕಾಶ್ ಗೋಯಲ್ ಅವರನ್ನು ಸಿಇಸಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಮಾಜಿ ಹೆಚ್ಚುವರಿ ಡಿಜಿಎಫ್ ಅಂಜನ್‌ಕುಮಾರ್ ಮೊಹಂತಿ ಹಾಗೂ ಪರಿಸರ ಸಚಿವಾಲಯದಲ್ಲಿ ವಿಜ್ಞಾನಿ ಡಾ.ಎಸ್.ಸಿ.ಗರ್ಕೋಟಿ ಅವರನ್ನು ಸಮಿತಿಯ ನೂತನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಸಮಿತಿಯ ಸದಸ್ಯ ಕಾರ್ಯದರ್ಶಿ ಹುದ್ದೆ ಸದ್ಯ ಖಾಲಿ ಇದ್ದು, ಈ ಕುರಿತು ಅಧಿಸೂಚನೆಯಲ್ಲಿ ಯಾವುದೇ ಉಲ್ಲೇಖ ಇಲ್ಲ. 2002ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಆದೇಶದ ಅನ್ವಯ ಕೇಂದ್ರ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗಿದೆ. ಪರಿಸರ ಮತ್ತು ಅರಣ್ಯಕ್ಕೆ ಸಂಬಂಧಿಸಿದ ಮೇಲ್ಮನವಿಗಳಿಗೆ ಕುರಿತು ಸುಪ್ರೀಂ ಕೋರ್ಟ್‌ಗೆ ಸಿಇಸಿ ಸಲಹೆ ನೀಡಲಿದೆ.

ದಾಳಿ: 9 ಸಾವು

ಬೈರೂತ್, ಲೆಬನಾನ್ (ಎಎಫ್‌ಪಿ): ಬೈರೂತ್‌ನ ದಕ್ಷಿಣ ಹೆದ್ದಾರಿಯಲ್ಲಿ ಕಾರುಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ ಮೂರು ದಾಳಿಗಳಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಒಂಬತ್ತು ಮಂದಿ ಮೃತಪಟ್ಟಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ.

ಸೈದಾ ದಕ್ಷಿಣ ಭಾಗದ ಹೆದ್ದಾರಿಯ ನಾಲ್ಕು ಕಡೆಗಳಲ್ಲಿ ದಾಳಿ ನಡೆದಿದೆ ಎಂದು ಸಚಿವಾಲಯವು ಹೇಳಿದೆ.

'ವೀಸಾ ವಂಚನೆ: 10,000 ವಿದ್ಯಾರ್ಥಿಗಳು ಪತ್ತೆ'

ವಾಷಿಂಗ್ಟನ್ (ಪಿಟಿಐ): ವೀಸಾ ನಿಯಮಗಳನ್ನು ದುರುಪಯೋಗ ಮಾಡಿಕೊಂಡ 10,000 ವಿದೇಶಿ ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆ ಎಂದು ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ಜಾರಿ ಸಂಸ್ಥೆಯು (ಐಸಿಇ) ತಿಳಿಸಿದೆ. ಇವರಲ್ಲಿ ಭಾರತದ ಹಲವು ವಿದ್ಯಾರ್ಥಿಗಳೂ ಇದ್ದಾರೆ ಎಂದು ಅದು ಹೇಳಿದೆ. ಈ ವಿದ್ಯಾರ್ಥಿಗಳು ತಮ್ಮ ವೀಸಾದಲ್ಲಿರುವ 'ಐಚ್ಛಿಕ ಪ್ರಾಯೋಗಿಕ ತರಬೇತಿ' (ಒಪಿಟಿ) ನಿಯಮಗಳನ್ನು ದುರುಪಯೋಗ ಮಾಡಿಕೊಂಡು ನಕಲಿ ಅಥವಾ ಸಂಶಯಾಸ್ಪದ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ಸುಳ್ಳು ದಾಖಲೆಗಳನ್ನು ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿ ವೀಸಾದ ಮೇಲೆ ಅಮೆರಿಕಕ್ಕೆ ಪ್ರವೇಶಿಸುವ ವಿದೇಶಿ ಪ್ರಜೆಗಳಿಗೆ ಒಪಿಟಿ ನಿಯಮವು 12 ತಿಂಗಳು ಅಥವಾ ಕೆಲವು ಸಂದರ್ಭಗಳಲ್ಲಿ 24 ತಿಂಗಳುಗಳ ಕಾಲ ಅಮೆರಿಕದಲ್ಲಿ ಕೆಲಸ ಮಾಡುವ ಅವಕಾಶ ನೀಡುತ್ತದೆ. ಜೊತೆಗೆ, ವಿದ್ಯಾರ್ಥಿಗಳು ಕಂಪನಿಗಳ ಪ್ರಾಯೋಜಕತ್ವದ ಮೂಲಕ ಎಚ್-1ಬಿ ಉದ್ಯೋಗ ವೀಸಾಗೆ ಬದಲಾಗಲು ಕೂಡಾ ಇದು ನೆರವಾಗುತ್ತದೆ.

'ವಿದ್ಯಾರ್ಥಿ ವೀಸಾದ ಒಪಿಟಿ ಅಂಶವು ವಂಚನೆಯ ಕೇಂದ್ರ ಬಿಂದುವಾಗಿದೆ. ಇದರ ಮೂಲಕ ಉಂಟಾಗುವ ಭದ್ರತಾ ಬೆದರಿಕೆಗಳನ್ನು ಸಹಿಸುವುದಿಲ್ಲ' ಎಂದು ಐಸಿಇಯ ಹಂಗಾಮಿ ನಿರ್ದೇಶಕ ಟಾಡ್ ಲಿಯಾನ್ಸ್ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದ ವರಿಗೂ. 20,000 / 25,000 ಕೊರಿಯರ್, 7090177446

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಕೇರ್ ಟೇಕರ್ ಪೇಷಂಟ್ಗಳನ್ನು ನೋಡಿಕೊಳ್ಳಲು ಮಹಿಳೆ ಮತ್ತು ಪುರುಷರು ಸೇವಾ ಮನೋಭಾವ ಇರುವವರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಕೊಡಲಾಗುವುದು. ಸಂಪರ್ಕಿಸಿ:7019258503 / 9945603366

ವೈಯಕ್ತಿಕ

Change of Name

I, BEENA Roy, Beena Rai, Beena Ray W/O Raghunatha Panicker born on 1/10/1954 which was wrongly printed as 02/02/1960 residing at 28/29 Unnathi, Chowdappa Layout, Doddabetahalli, Vidyaranyapura, Bangalore 560097 have changed my name to Beena Panicker vide affidavit dated 09/05/2026 at Bangalore.

ಪ್ರವಾಸ

Travel

24.5.2026 ನೈಮಿಷರಾಣ್ಯ, ಅಯೋಧ್ಯೆ, ಪ್ರಯಾಗ್‌ರಾಜ್, ಚಿತ್ರಕೂಟ, ಕಾಶಿ, ಗಯಾ 9.6.2026 ಯಮನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ 30.6.2026 ಅಮರನಾಥ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಯುದ್ಧದ ಅಂತ್ಯಕ್ಕೆ ಚೀನಾದ ನೆರವಿನ ಅಗತ್ಯವಿಲ್ಲ: ಅಮೆರಿಕ ಅಧ್ಯಕ್ಷ

ಚೀನಾಕ್ಕೆ ಡೊನಾಲ್ಡ್ ಟ್ರಂಪ್ ಭೇಟಿ

ವಾಷಿಂಗ್ಟನ್/ ದುಬೈ/ಬೀಜಿಂಗ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಮಾತುಕತೆಗಾಗಿ ಬುಧವಾರ ಚೀನಾಕ್ಕೆ ಬಂದಿಳಿದರು.

ಡೊನಾಲ್ಡ್ ಟ್ರಂಪ್

ಟ್ರಂಪ್ ಅವರು ಇರಾನ್ ಜೊತೆಗಿನ ಯುದ್ಧ, ವ್ಯಾಪಾರ ಮತ್ತಿತರ ವಿಚಾರಗಳ ಬಗ್ಗೆ ಷಿ ಜಿನ್‌ಪಿಂಗ್ ಅವರ ಜೊತೆ ಮಾತುಕತೆ ನಡೆಸುವ ಸಾಧ್ಯತೆ ಇದೆ.

'ಏರ್‌ಫೋರ್ಸ್ ಒನ್ ವಿಮಾನವು ಚೀನಾದ ರಾಜಧಾನಿಯಲ್ಲಿ ಬಂದಿಳಿಯುತ್ತಿದ್ದಂತೆಯೇ ವೈಭವೋಪೇತ ಸ್ವಾಗತವನ್ನು ನೀಡಲಾಗಿತ್ತು. ಟ್ರಂಪ್ ಅವರನ್ನು ಚೀನಾ ಉಪ ಪ್ರಧಾನಿ ಹನ್ ಝೆಂಗ್ ಮತ್ತಿತರರು ಬರಮಾಡಿಕೊಂಡರು' ಎಂದು ಶ್ವೇತಭವನ ತಿಳಿಸಿದೆ.

ವಾಷಿಂಗ್ಟನ್‌ನಿಂದ ಹೊರಡುವ ಮುನ್ನ ಮಾತನಾಡಿದ ಟ್ರಂಪ್ ಅವರು, 'ಇರಾನ್ ಜೊತೆಗಿನ ಯುದ್ಧದ ಅಂತ್ಯಕ್ಕೆ ಮತ್ತು ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಚೀನಾದ ನೆರವನ್ನು ನಿರೀಕ್ಷಿಸುತ್ತಿಲ್ಲ' ಎಂದು ಸ್ಪಷ್ಟಪಡಿಸಿದರು.

'ಚೀನಾದ ನೆರವು ಬೇಕು ಎಂದು ಅನಿಸುತ್ತಿಲ್ಲ. ಈ ಯುದ್ಧದಲ್ಲಿ ಶಾಂತಿಯುತ ಅಥವಾ ಇತರೆ ಮಾರ್ಗದ ಮೂಲಕ ನಾವು ಜಯಗಳಿಸುತ್ತೇವೆ' ಎಂದು ಅವರು ತಿಳಿಸಿದರು.

ಕಳೆದ ಒಂದು ತಿಂಗಳಿನಿಂದ ಕದನ ವಿರಾಮ ಜಾರಿಯಲ್ಲಿದ್ದು, ಯುದ್ಧದ ಅಂತ್ಯಕ್ಕೆ ಸಂಬಂಧಿಸಿದಂತೆ ಉಭಯ ದೇಶಗಳ ನಡುವಣ ಮಾತುಕತೆಯು ಪದೇ ಪದೇ ವಿಫಲಗೊಳ್ಳುತ್ತಿದೆ. ಪರಮಾಣು ಕಾರ್ಯಕ್ರಮವನ್ನು ಕೈಬಿಡುವಂತೆ ಇರಾನ್‌ಗೆ ಅಮೆರಿಕ ಕರೆ ನೀಡುತ್ತಿದೆ. ಇತ್ತ ಯುದ್ಧದಲ್ಲಿ ಉಂಟಾದ ಹಾನಿಗೆ ಪರಿಹಾರ ನೀಡುವಂತೆ ಮತ್ತು ಮಿತ್ರ ರಾಷ್ಟ್ರಗಳ ಮೇಲಿನ ಯುದ್ಧವನ್ನೂ ನಿಲ್ಲಿಸುವಂತೆ ಇರಾನ್ ಪಟ್ಟು ಹಿಡಿದಿದೆ. ಇರಾನ್ ಬೇಡಿಕೆಯನ್ನು ಅಮೆರಿಕ ಅಲ್ಲಗಳೆದಿರುವುದರಿಂದ ಮತ್ತೆ ಯುದ್ಧದ ಕಾರ್ಮೋಡ ಕವಿದಿದೆ.

ಹೊರ್ಮುಜ್ ದಾಟಿದ ಚೀನಾದ ಟ್ಯಾಂಕರ್

ಸಿಂಗಪುರ: ಇರಾಕ್‌ನಿಂದ 20 ಲಕ್ಷ ಬ್ಯಾರಲ್ ಕಚ್ಚಾತೈಲವನ್ನು ಹೊತ್ತ ಚೀನಾದ ಸೂಪರ್ ಟ್ಯಾಂಕರ್ ಹೊರ್ಮುಜ್ ಜಲಸಂಧಿಯನ್ನು ಬುಧವಾರ ದಾಟಿತು.

ಇರಾನ್-ಅಮೆರಿಕ ನಡುವಣ ಯುದ್ಧದಿಂದಾಗಿ ಎರಡು ತಿಂಗಳಿನಿಂದ ಗಲ್ಫ್ ರಾಷ್ಟ್ರದಲ್ಲಿ ಸಿಲುಕಿತ್ತು.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಕಳೆದ ವಾರ ಚೀನಾಗೆ ಭೇಟಿ ನೀಡಿದ್ದರು. ಸದ್ಯ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾಗೆ ಭೇಟಿ ನೀಡಿದ್ದಾರೆ. ಈ ಬೆಳವಣಿಗೆ ನಡುವೆಯೇ ಕಚ್ಚಾತೈಲ ಹೊತ್ತ ಚೀನಾದ ಹಡಗು 'ಯುವಾನ್ ಹುವಾ ಹು' ಹೊರ್ಮುಜ್ ಜನಸಂಧಿಯನ್ನು ದಾಟಿದೆ.

ಏರಿದ ಸುಂಕ: ಚಿನ್ನ ತುಟ್ಟಿ

ಒಂದನೇ ಪುಟದಿಂದ...

'ಬಾಹ್ಯ ಒತ್ತಡಗಳು ಹೆಚ್ಚಿರುವ ಸಂದರ್ಭದಲ್ಲಿ, ಅತ್ಯವಶ್ಯಕ ಅಲ್ಲದ ಉತ್ಪನ್ನಗಳ ಆಮದನ್ನು ಕಡಿಮೆ ಮಾಡುವುದರಿಂದ ಒಟ್ಟಾರೆಯಾಗಿ ಅರ್ಥ ವ್ಯವಸ್ಥೆಯಲ್ಲಿ ಸ್ಥಿರತೆ ಮೂಡಿಸುವುದಕ್ಕೆ ಸಾಧ್ಯ ಆಗುತ್ತದೆ' ಎಂದು ಕೇಂದ್ರದ ತೀರ್ಮಾನದ ಹಿಂದಿನ ಉದ್ದೇಶದ ಬಗ್ಗೆ ಮೂಲವೊಂದು ವಿವರ ಒದಗಿಸಿದೆ.

ಬುಧವಾರ ಜಾರಿಗೆ ತಂದ ಹೆಚ್ಚಳ ಮೂಲಕ ಕೇಂದ್ರ ಸರ್ಕಾರವು ಚಿನ್ನದ ಮೇಲಿನ ಮೂಲ ಸೀಮಾಸುಂಕವನ್ನು ದುಪ್ಪಟ್ಟುಗೊಳಿಸಿ ಶೇ 10ಕ್ಕೆ ತಂದಿದೆ. ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ (ಎಐಡಿಸಿ) ಪ್ರಮಾಣವನ್ನು ಐದು ಪಟ್ಟು ಹೆಚ್ಚಿಸಿ ಶೇ 5ಕ್ಕೆ ತರಲಾಗಿದೆ. ಈ ಕ್ರಮಗಳ ಪರಿಣಾಮವಾಗಿ ಚಿನ್ನ ಹಾಗೂ ಬೆಳ್ಳಿಯ ಆಮದು ಸುಂಕವು ಶೇ 15ಕ್ಕೆ ತಲುಪಿದೆ.

ಇದಲ್ಲದೆ ಆಮದುದಾರರು ಶೇ 3ರಷ್ಟು ಏಕೀಕೃತ ಜಿಎಸ್‌ಟಿ (ಐಜಿಎಸ್‌ಟಿ) ಪಾವತಿಸಬೇಕಾಗುತ್ತದೆ. ಇದರಿಂದಾಗಿ ಒಟ್ಟು ಸುಂಕವು ಶೇ 9.18ರಷ್ಟು ಇದ್ದಿದ್ದು ಶೇ 18.45ಕ್ಕೆ ಹೆಚ್ಚಳ ಆಗಿದೆ.

ದೇಶದ ಹೊರಗಿನ ಪರಿಸ್ಥಿತಿ ತೀರಾ ಅಸಾಮಾನ್ಯವಾಗಿರುವುದರಿಂದ ಚಿನ್ನ, ಬೆಳ್ಳಿಯ ಆಮದು ಸುಂಕ ಏರಿಕೆಯು ಮುನ್ನೆಚ್ಚರಿಕೆಯ ಕ್ರಮ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ.

'ಚಿನ್ನ, ಬೆಳ್ಳಿಯ ಆಮದಿನ ಮೇಲೆ ಮಿತಿ ಹೇರುವ ಅಥವಾ ಅದಕ್ಕಿಂತ ಹೆಚ್ಚು ತೀವ್ರವಾದ ಕ್ರಮಕ್ಕೆ ಮುಂದಾಗುವ ಬದಲು, ಬೆಲೆ ಆಧಾರಿತ ನಿರುತ್ತೇಜನಾ ಕ್ರಮವನ್ನು ಕೈಗೊಳ್ಳಲಾಗಿದೆ' ಎಂದು ಇನ್ನೊಂದು ಮೂಲ ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ದೇಶದ ಆಮದು ವೆಚ್ಚಗಳನ್ನು ಭಾರಿ ಪ್ರಮಾಣದಲ್ಲಿ ಹೆಚ್ಚು ಮಾಡುವ ಸಾಧ್ಯತೆ ಇದೆ. ವಿದೇಶಿ ವಿನಿಮಯವನ್ನು ಆರ್ಥಿಕ ಚಟುವಟಿಕೆಗೆ ಬೆಂಬಲವಾಗಿ ನಿಲ್ಲುವ ಹಾಗೂ ಆಹಾರ ಭದ್ರತೆಗೆ ನೆರವಾಗುವ ಉತ್ಪನ್ನಗಳಾದ ಕಚ್ಚಾ ತೈಲ, ರಸಗೊಬ್ಬರಗಳು, ಕೈಗಾರಿಕೆಗಳಿಗೆ ಬೇಕಿರುವ ಕಚ್ಚಾ ವಸ್ತುಗಳು ಮತ್ತು ಬಂಡವಾಳ ಸರಕುಗಳ ಆಮದಿಗೆ ಬಳಸಲು ಕೇಂದ್ರ ಬಯಸಿದೆ ಎಂದು ಮೂಲವೊಂದು ಹೇಳಿದೆ.

‘ಡಿಂಚಕ್ ಡಿಂಚಕ್’ ಎಂದ ಅಗಸ್ತ್ಯ

‘ಜೊತೆಯಾಗಿ ಹಿತವಾಗಿ’ ಎಂಬ ಸಿನಿಮಾ ಮೂಲಕ ಗುರುತಿಸಿಕೊಂಡಿರುವ ನಟ ಅಗಸ್ತ್ಯ ಅವರ ಹೊಸ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ.

ಝೆನ್-ಜಿ ಹಾಗೂ ಝೆನ್-ಆಲ್ಫಾ ಪೀಳಿಗೆಯ ಪ್ರೇಕ್ಷಕರನ್ನು ಕೇಂದ್ರೀಕರಿಸಿಕೊಂಡು ‘ಡಿಂಚಕ್ ಡಿಂಚಕ್’ ಎಂಬ ವಿಶಿಷ್ಟ ಶೀರ್ಷಿಕೆಯನ್ನಿಟ್ಟಿದೆ ಚಿತ್ರತಂಡ. ‘ಹದಿಹರೆಯದ ಮನಸ್ಸುಗಳು ಮತ್ತು ಕೌಟುಂಬಿಕ ಪ್ರೇಕ್ಷಕರನ್ನು ಗುರಿಯಾಗಿಸಿ ಕಥೆಯ ಎಳೆಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಇದೊಂದು ಕಮರ್ಷಿಯಲ್ ಚಿತ್ರವಾಗಿದ್ದು, ಶೀಘ್ರದಲ್ಲೇ ಶೂಟಿಂಗ್ ಆರಂಭವಾಗಲಿದೆ’ ಎಂದಿದೆ ಚಿತ್ರತಂಡ. ಚಿತ್ರಕ್ಕೆ ಅಗಸ್ತ್ಯ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಲಿದ್ದಾರೆ.

ಶ್ರೀರತ್ನ ಫಿಲಂ ಕಂಪನಿ ನಿರ್ಮಿಸಲಿರುವ ಈ ಚಿತ್ರಕ್ಕೆ ಆನಂದ್ ರಾಜ ವಿಕ್ರಮ ಅವರ ಸಂಗೀತವಿದೆ. ‘ಚಿತ್ರವನ್ನು ತಾಂತ್ರಿಕವಾಗಿ ಶ್ರೀಮಂತಗೊಳಿಸಲು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಕ್ಯಾಮೆರಾ ಮತ್ತಿತರ ಸಲಕರಣೆಗಳನ್ನು ಉಪಯೋಗಿಸಲಾಗುವುದು’ ಎಂದು ಶ್ರೀರತ್ನ ಫಿಲಂ ಕಂಪನಿಯ ಕ್ರಿಯೇಟಿವ್ ಹೆಡ್ ಪ್ರಶಾಂತ ಬಾಗೂರು ತಿಳಿಸಿದ್ದಾರೆ. ಕಲಾವಿದರು ಹಾಗೂ ತಾಂತ್ರಿಕ ವರ್ಗದ ಆಯ್ಕೆ ಇನ್ನಷ್ಟೇ ಆಗಬೇಕಿದೆ.

ಪ್ರಜಾವಾಣಿ ಸಿನಿ ಸಮ್ಮಾನ 4ನೇ ಆವೃತ್ತಿ ಶೀಘ್ರದಲ್ಲಿ

ಸ್ಯಾಂಡಲ್‌ವುಡ್‌ನ ಪ್ರತಿಭೆಗಳನ್ನು ಗುರುತಿಸುವ ಹಾಗೂ ಇಲ್ಲಿನ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿಯ ಸಮಾರಂಭ ಶೀಘ್ರದಲ್ಲಿ ನಡೆಯಲಿದೆ. ಈಗಾಗಲೇ ಮೂರು ಆವೃತ್ತಿಗಳು ಅದ್ದೂರಿಯಾಗಿ ನಡೆದಿವೆ. ಅಲ್ಪ ಅವಧಿಯಲ್ಲೇ ಕನ್ನಡ ಚಿತ್ರರಂಗದ ಉತ್ಕೃಷ್ಟ ಪ್ರಶಸ್ತಿಯಾಗಿ ‘ಪ್ರಜಾವಾಣಿ ಸಿನಿ ಸಮ್ಮಾನ’ ಗುರುತಿಸಿಕೊಂಡಿದೆ. ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿವೆ. ಶೀಘ್ರದಲ್ಲೇ ನಾಮನಿರ್ದೇಶನಗಳು ಪ್ರಕಟವಾಗಲಿವೆ. ಕಳೆದ ಮೂರು ಆವೃತ್ತಿಯ ಸಿನಿ ಸಮ್ಮಾನದ ಮತ್ತಷ್ಟು ಝಲಕ್‌ಗಳು...

ರಂಗು ರಂಗಿನ ವೇದಿಕೆಗೆ ಚಂದನ ಅನಂತಕೃಷ್ಣ ನೃತ್ಯದ ಮೆರುಗು

ಹಾಡಿನ ಮೂಲಕ ಸಿನಿ ಸಂಭ್ರಮದ ರಂಗೇರಿಸಿದ್ದ ಗುರುಕಿರಣ್

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಶ್ರುತಿ ಹರಿಹರನ್, ಸಿಂಧು ಲೋಕನಾಥ್, ಭಾವನಾ ಹಾಗೂ ರೂಪಿಕಾ ನೃತ್ಯವೈಭವ

ಸಿನಿ ಸಮ್ಮಾನದ ವೇದಿಕೆಯಲ್ಲಿ ಕನ್ನಡದ ಹಳೆಯ ಹಾಡುಗಳಿಗೆ ಜೀವ ತುಂಬಿದ್ದ ಶ್ರುತಿ

‘ವಿಚಾರಣೆ’ ಡಬ್ಬಿಂಗ್ ಪೂರ್ಣ

‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಮಡೆನೂರು ಮನು ನಾಯಕರಾಗಿ ನಟಿಸಿರುವ ಎರಡನೇ ಸಿನಿಮಾ ‘ವಿಚಾರಣೆ’ಯ ಡಬ್ಬಿಂಗ್ ಪೂರ್ಣಗೊಂಡಿದೆ.

ಯಶಾ ಫಿಲಂಸ್ ಬ್ಯಾನರ್ ಅಡಿಯಲ್ಲಿ ಎಸ್.ರಮೇಶ್ ಅರ್ಪಿಸಿರುವ, ಭಾಗ್ಯ ನಿರ್ಮಾಣ ಮಾಡಿರುವ ಈ ಚಿತ್ರಕ್ಕೆ ಅಕುಲ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಇದು ಅವರ ಚೊಚ್ಚಲ ಸಿನಿಮಾ. ‘ನಾಲ್ಕು ವರ್ಷಗಳ ಹಿಂದೆ ನಾನೇ ಕಂಡ ಘಟನೆಗೆ ಚಿತ್ರರೂಪ ನೀಡಿದ್ದೇನೆ. ಯುವಕನೊಬ್ಬ ಬದುಕು ಅರಸಿಕೊಂಡು ನಗರಕ್ಕೆ ಬರುತ್ತಾನೆ. ಅಲ್ಲಿ ಅವನಿಗೆ ಎದುರಾಗುವ ಸಮಸ್ಯೆಗಳು, ಅದರಿಂದ ಹೊರಬರಲು ಆತ ಯಾವ ರೀತಿ ಹೋರಾಟ ಮಾಡುತ್ತಾನೆ. ಅದರಿಂದ ಹೊರಬರುವಲ್ಲಿ ಸಫಲನಾಗುತ್ತಾನೆಯೇ ಎನ್ನುವುದನ್ನು ಕ್ರೈಂ ಥ್ರಿಲ್ಲರ್ ಮಾದರಿಯಲ್ಲಿ ತೋರಿಸಲಾಗಿದೆ’ ಎಂದರು ಅಕುಲ್.

ಫರೀನ್ ಚಿತ್ರದ ನಾಯಕಿ. ಪೋಲೀಸ್ ಅಧಿಕಾರಿಯಾಗಿ ಮಹೇಶ್ ನಟಿಸಿದ್ದು, ಬಲ ರಾಜವಾಡಿ, ಮಹೇಶ್, ನಾಗೇಂದ್ರ ಅರಸು ಮುಂತಾದವರು ತಾರಾಬಳಗದಲ್ಲಿದ್ದಾರೆ. ಮಂಜು ಮಹದೇವ ಸಂಗೀತ, ಜಿ.ವಿ.ರಮೇಶ್ ಛಾಯಾ-ಚಿತ್ರಗ್ರಹಣ, ಅನುರಂಜನ್ ಸಂಕಲನ, ವಿಕ್ರಂ ಸಾಹಸ ನಿರ್ದೇಶನ, ಪ್ರಮೋದ್ ಮರವಂತೆ, ಅನಿರುದ್ಧ್ ಶಾಸ್ತ್ರೀ, ಆನಂದ್ ಪ್ರಿಯ ಸಾಹಿತ್ಯ ಚಿತ್ರಕ್ಕಿದೆ. ಶೀಘ್ರದಲ್ಲೇ ಸಿನಿಮಾ ಸೆನ್ಸಾರ್‌ಗೆ ಒಳಪಡಲಿದೆ.

ತಮಿಳುನಾಡು: ವಿಶ್ವಾಸ ಗೆದ್ದ ‘ವಿಜಯ’

ಎಐಎಡಿಎಂಕೆ ಇಬ್ಭಾಗ: ಪಕ್ಷದ ಹುದ್ದೆಯಿಂದ ಬಂಡಾಯ ಶಾಸಕರ ವಜಾ

ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ವಿಶ್ವಾಸಮತ ಯಾಚನೆಯ ನಿರ್ಣಯವನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದರು

ಚೆನ್ನೈ/ನವದೆಹಲಿ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ವಿಧಾನಸಭೆಯಲ್ಲಿ ಬುಧವಾರ ವಿಶ್ವಾಸಮತವನ್ನು ಸಾಬೀತುಪಡಿಸಿದರು.

ಎಡ ಪಕ್ಷಗಳು, ಕಾಂಗ್ರೆಸ್, ವಿಸಿಕೆ, ಎಎಂಎಂಕೆ, ಎಸ್.ಪಿ. ವೇಲುಮಣಿ ಹಾಗೂ ಸಿ.ವಿ. ಷಣ್ಮುಗಂ ಅವರ ನೇತೃತ್ವದ ಎಐಎಡಿಎಂಕೆಯ ಒಂದು ಬಣವು ಟಿವಿಕೆಯ ಶಾಸಕರೊಂದಿಗೆ ಸರ್ಕಾರದ ಪರ ಮತಚಲಾಯಿಸಿತು.

ಎಎಂಎಂಕೆಯಿಂದ ಉಚ್ಚಾಟಿತರಾಗಿರುವ ಶಾಸಕ ಎಸ್. ಕಾಮರಾಜ್ ಅವರು ಸರ್ಕಾರದ ಪರ ಮತ ಚಲಾಯಿಸಿದರೆ, ಡಿಎಂಕೆ, ಡಿಎಂಡಿಕೆಯ 59 ಶಾಸಕರು ಸಭಾತ್ಯಾಗ ಮಾಡಿದರು.

ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ ಬಣ, ಸರ್ಕಾರದ ವಿರುದ್ಧ ಮತ ಚಲಾಯಿಸಿತು. ಏಕೈಕ ಶಾಸಕರಿರುವ ಬಿಜೆಪಿ ತಟಸ್ಥವಾಗಿತ್ತು. ನಾಲ್ವರು ಶಾಸಕರನ್ನು ಹೊಂದಿರುವ ಎನ್‌ಡಿಎ ಮೈತ್ರಿಕೂಟದ ಪಿಎಂಕೆ ಮತದಾನದಿಂದ ಹೊರಗುಳಿಯಿತು.

ಚುನಾವಣಾ ಫಲಿತಾಂಶ ಪ್ರಕಟಗೊಂಡ ಬೆನ್ನಿಗೆ ಸರಳ ಬಹುಮತ ಗಳಿಸಲು ಹರಸಾಹಸ ನಡೆಸಿದ್ದ ವಿಜಯ್, ಎಐಎಡಿಎಂಕೆಯ ಒಂದು ಬಣದ ಶಾಸಕರ ಬೆಂಬಲದೊಂದಿಗೆ ವಿಧಾನಸಭೆಯಲ್ಲಿ ವಿಶ್ವಾಸ ಮತ ಸಾಬೀತುಪಡಿಸುವಲ್ಲಿ ವಿಜಯಿ ಆಗಿದ್ದಾರೆ.

> **ನಮ್ಮ ಸರ್ಕಾರಕ್ಕೆ ಕುದುರೆಯ ವೇಗವಿದೆ. ಆದರೆ ಶಾಸಕರ ಖರೀದಿಯ ವ್ಯಾಪಾರದಲ್ಲಿ ತೊಡಗಿಸಿಕೊಳ್ಳುವುದಿಲ್ಲ**
> **ಸಿ. ಜೋಸೆಫ್ ವಿಜಯ್**
> ತಮಿಳುನಾಡು ಮುಖ್ಯಮಂತ್ರಿ

234 ಸದಸ್ಯ ಬಲದ ವಿಧಾನಸಭೆಯಲ್ಲಿ ಸರಳ ಬಹುಮತಕ್ಕೆ 118 ಶಾಸಕರ ಬೆಂಬಲ ಬೇಕಿತ್ತು. 144 ಶಾಸಕರು ವಿಶ್ವಾಸಮತ ನಿರ್ಣಯದ ಪರ ಮತ ಚಲಾಯಿಸಿದ್ದು, 22 ಶಾಸಕರು ವಿರುದ್ಧ ಮತ ಚಲಾಯಿಸಿದ್ದಾರೆ. ಐವರು ತಟಸ್ಥರಾಗಿ ಉಳಿದಿದ್ದಾರೆ ಎಂದು ಸಭಾಧ್ಯಕ್ಷ ಜೆಸಿಡಿ ಪ್ರಭಾಕರ್ ಪ್ರಕಟಿಸಿದರು.

ಎಐಎಡಿಎಂಕೆಯ 25 ಬಂಡಾಯ ಶಾಸಕರು ಟಿವಿಕೆ ನೇತೃತ್ವದ ವಿಜಯ್ ಸರ್ಕಾರದ ಪರವಾಗಿ ಮತ ಚಲಾಯಿಸಿದ್ದು, ಶಾಸಕರ ಖರೀದಿ ನಡೆದಿದೆ’ ಎಂದು ವಿರೋಧ ಪಕ್ಷಗಳು ದೂರಿವೆ.

ಪಕ್ಷದ ಹುದ್ದೆಯಿಂದ ವಜಾ: ಟಿವಿಕೆಯೊಂದಿಗೆ ಕೈಜೋಡಿಸಿದ ಮುಖಂಡರಾದ ಎಸ್.ಪಿ. ವೇಲುಮಣಿ, ಸಿ.ವಿ. ಷಣ್ಮುಗಂ ಹಾಗೂ ಸಿ. ವಿಜಯಭಾಸ್ಕರ್ ಅವರನ್ನು ಎಐಎಡಿಎಂಕೆಯ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಪಕ್ಷದ ಹುದ್ದೆಗಳಿಂದ ವಜಾಗೊಳಿಸಿದ್ದಾರೆ.

ಮುಖ್ಯಮಂತ್ರಿ ವಿಜಯ್ ಅವರನ್ನು ಬೆಂಬಲಿಸಿದ 25 ಬಂಡಾಯ ಶಾಸಕರನ್ನು ಪಕ್ಷದ ಹುದ್ದೆಯಿಂದ ವಜಾಗೊಳಿಸಿದ್ದು, ಈ ಸ್ಥಾನಗಳಿಗೆ ಹೊಸಬರನ್ನು ನೇಮಿಸಿದ್ದಾರೆ.

ಮತದಾರರ ಬೆಂಬಲವಿಲ್ಲ- ಉದಯನಿಧಿ: ‘ಶೇ 65ರಷ್ಟು ಮತದಾರರು ಟಿವಿಕೆ ವಿರುದ್ಧ ಮತ ಚಲಾಯಿಸಿದ್ದಾರೆ. ವಿಜಯ್ ನೇತೃತ್ವದ ಸರ್ಕಾರಕ್ಕೆ ಮತದಾರರ ಬೆಂಬಲವಿಲ್ಲ. ಎಐಎಡಿಎಂಕೆಯ ಒಂದು ಬಣದ ಶಾಸಕರ ಬೆಂಬಲದೊಂದಿಗೆ ಮಾತ್ರ ಅಧಿಕಾರದಲ್ಲಿ ಮುಂದುವರಿದಿದೆ’ ಎಂದು ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ವಾಗ್ದಾಳಿ ನಡೆಸಿದರು.

‘ವಿಧಾನಸಭಾ ಚುನಾವಣೆಯಲ್ಲಿ 4.93 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಇದರಲ್ಲಿ ಟಿವಿಕೆಗೆ ಮತ ಹಾಕಿದವರ ಸಂಖ್ಯೆ 1.72 ಕೋಟಿ. ಉಳಿದ 3.21 ಕೋಟಿ ಮತದಾರರು ನಿಮ್ಮ ಪಕ್ಷದ ವಿರುದ್ಧ ಮತ ಚಲಾಯಿಸಿದ್ದಾರೆ’ ಎಂದು ಮುಖ್ಯಮಂತ್ರಿ ವಿಜಯ್ ಅವರನ್ನು ಕುಟುಕಿದರು.

‘ಎಐಎಡಿಎಂಕೆಯನ್ನು ಭ್ರಷ್ಟರ ಕೂಟ ಎಂದಿದ್ದೀರಿ. ಇದೀಗ ಅಧಿಕಾರಕ್ಕಾಗಿ ಅವರೊಟ್ಟಿಗೆ ಕೈಜೋಡಿಸಿದ್ದೀರಿ. ಇದೇನಾ ನಿಮ್ಮ ಸ್ವಚ್ಛ ಆಡಳಿತದ ಮಾದರಿ. ಜನರಿಗೆ ಏನು ಹೇಳುತ್ತೀರಿ’ ಎಂದು ವಿಪಕ್ಷ ನಾಯಕ ಪ್ರಶ್ನಿಸಿದರು.

‘ಸುಪ್ರೀಂ’ ತಡೆಯಾಜ್ಞೆ: ವಿಶ್ವಾಸಮತ ನಿರ್ಣಯದ ಮತದಾನದಲ್ಲಿ ಭಾಗವಹಿಸದಂತೆ ತಿರುಪ್ಪತ್ತೂರು ವಿಧಾನಸಭಾ ಕ್ಷೇತ್ರದ ಟಿವಿಕೆ ಶಾಸಕ ಆರ್. ಸೀನಿವಾಸ ಸೇತುಪತಿ ಅವರಿಗೆ ತಡೆಯೊಡ್ಡಿದ್ದ ಮದ್ರಾಸ್ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆಯಾಜ್ಞೆ ನೀಡಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಲು ಡಿಎಂಕೆ ಮುಖಂಡ ಪೆರಿಯಕರುಪ್ಪನ್ ಅವರಿಗೆ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ, ವಿಜಯ್ ಬಿಷ್ಣೋಯಿ ಅವರಿದ್ದ ನ್ಯಾಯಪೀಠವು 15 ದಿನಗಳ ಕಾಲಾವಕಾಶ ನೀಡಿದೆ.

ಒಎಸ್‌ಡಿಯಾಗಿ ಜ್ಯೋತಿಷಿ ರಿಕಿ: ಆದೇಶ ಹಿಂಪಡೆದ ಸರ್ಕಾರ

ಜ್ಯೋತಿಷಿಯನ್ನು ಮುಖ್ಯಮಂತ್ರಿಯ ವಿಶೇಷ ಕರ್ತವ್ಯ ಅಧಿಕಾರಿಯನ್ನಾಗಿ (ಒಎಸ್‌ಡಿ–ರಾಜಕೀಯ) ನೇಮಿಸಿದ್ದ ಆದೇಶವನ್ನು 24 ತಾಸಿನೊಳಗೆ ತಮಿಳುನಾಡು ಸರ್ಕಾರ ಬುಧವಾರ ಹಿಂಪಡೆದಿದೆ.

ಮುಖ್ಯಮಂತ್ರಿ ವಿಜಯ್ ಅವರ ವಿಶೇಷ ಕರ್ತವ್ಯ ಅಧಿಕಾರಿಯನ್ನಾಗಿ ಜ್ಯೋತಿಷಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್ ಅವರನ್ನು ಮಂಗಳವಾರ ನೇಮಿಸಲಾಗಿತ್ತು.

ಜ್ಯೋತಿಷಿಯ ನೇಮಕವು ವಿಧಾನಸಭೆಯಲ್ಲೂ ಚರ್ಚೆಯಾಗಿತ್ತು. ವಿರೋಧ ಪಕ್ಷಗಳು ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದವು.

ಡಿಎಂಡಿಕೆ ಪ್ರಧಾನ ಕಾರ್ಯದರ್ಶಿ ಪ್ರೇಮಲತಾ ವಿಜಯಕಾಂತ್ ಅವರು ಜ್ಯೋತಿಷಿಯ ನೇಮಕವನ್ನು ಕಟುವಾಗಿ ಟೀಕಿಸಿದ್ದರು. ಆಡಳಿತಾರೂಢ ಟಿವಿಕೆಯ ಮಿತ್ರಪಕ್ಷಗಳಿಂದಲೂ ಆಕ್ಷೇಪ ವ್ಯಕ್ತವಾಗಿತ್ತು.

ಎಲ್ಲೆಡೆ ಕಟು ಟೀಕೆ ವ್ಯಕ್ತವಾಗಿದ್ದರಿಂದ ವಿಜಯ್ ನೇತೃತ್ವದ ಆಡಳಿತವು ನೇಮಕಾತಿಯನ್ನು ಹಿಂಪಡೆದಿದೆ.

ಕಡತದಿಂದ ತೆಗೆಯಿರಿ: ವಿಶ್ವ ಹಿಂದೂ ಪರಿಷತ್ ಆಗ್ರಹ

ಸನಾತನ ಧರ್ಮದ ಕುರಿತಂತೆ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಗಳನ್ನು ವಿಧಾನಸಭೆಯ ಕಡತದಿಂದ ತೆಗೆಯಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಬುಧವಾರ ಆಗ್ರಹಿಸಿದೆ.

ಡಿಎಂಕೆ ಮುಖಂಡ ಉದಯನಿಧಿ ಸ್ಟಾಲಿನ್ ಅವರು ತಮಿಳುನಾಡು ವಿಧಾನಸಭೆಯಲ್ಲಿ ‘ಸನಾತನ ಧರ್ಮವನ್ನು ನಾಶಗೊಳಿಸಿ’ ಎಂದು ಮಂಗಳವಾರ ಮತ್ತೆ ಹೇಳಿದ್ದರು.

‘ಬೇರೆ ಧರ್ಮದ ವಿರುದ್ಧವೂ ಇದೇ ರೀತಿಯಲ್ಲಿ ಟೀಕೆ ಮಾಡುವ ಧೈರ್ಯವನ್ನು ಅವರು ಮಾಡಬಲ್ಲರೇ’ ಎಂದು ಆರ್‌ಎಸ್‌ಎಸ್‌ನ ಅಂಗಸಂಸ್ಥೆಯು ಪ್ರಶ್ನಿಸಿದೆ.

‘ಹಿಂದೂ ಧರ್ಮ ಹಾಗೂ ಅದರ ನಂಬಿಕೆಗಳನ್ನು ಪದೇ ಪದೇ ಅವಮಾನಿಸುವುದು ಪ್ರಜಾಪ್ರಭುತ್ವದ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿದೆ’ ಎಂದು ವಿಎಚ್‌ಪಿ ಅಂತರರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಹೇಳಿದ್ದಾರೆ.

ಪಶ್ಚಿಮ ಬಂಗಾಳ: ವಿಪಕ್ಷಗಳ ಆರೋಪಕ್ಕೆ ಬಿಜೆಪಿ ತಿರುಗೇಟು

ವಿಧಾನಸಭೆಯಲ್ಲಿ ಮೀನೂಟ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ನಡೆದ ನೂತನ ಶಾಸಕರ ಪ್ರಮಾಣವಚನ ಸ್ವೀಕಾರ ಸಮಾರಂಭವು ಹಿಂದೆಂದೂ ಕಂಡಿರದ ಸನ್ನಿವೇಶಗಳಿಗೆ ಬುಧವಾರ ಸಾಕ್ಷಿಯಾಗಿತ್ತು.

ವಿಧಾನಸಭೆಯಲ್ಲಿ ಪೂಜೆ ನೆರವೇರಿಸಲಾಗಿತ್ತು. ಬಳಿಕ ಶಾಸಕರಿಗಾಗಿ ರಾಜ್ಯ ಸರ್ಕಾರಿ ಪ್ರಾಯೋಜಿತ ಮೀನು ಊಟವನ್ನು ಆಯೋಜಿಸಲಾಗಿತ್ತು.

ಚುನಾವಣೆಗೂ ಮುನ್ನ ವಿರೋಧ ಪಕ್ಷಗಳು, ‘ಬಿಜೆಪಿ ಅಧಿಕಾರಕ್ಕೆ ಬಂದರೆ ಜನರ ಮಾಂಸಾಹಾರ ಅಭ್ಯಾಸಕ್ಕೆ ಅಡ್ಡಿಪಡಿಸಲಿದೆ’ ಎಂದು ಆರೋಪ ಮಾಡಿದ್ದವು. ಮೀನಿನ ಖಾದ್ಯಗಳ ಸೇವನೆ ನಿರ್ಬಂಧಿಸಬಹುದು ಎಂಬ ಅನುಮಾನವನ್ನೂ ವ್ಯಕ್ತಪಡಿಸಿದ್ದವು. ವಿಧಾನಸಭೆಯಲ್ಲಿಯೇ ಮೀನು ಊಟ ಹಾಕಿಸುವ ಮೂಲಕ ವಿಪಕ್ಷಗಳ ಈ ಆರೋಪಕ್ಕೆ ಬಿಜೆಪಿ ತಿರುಗೇಟು ನೀಡಿದೆ.

144 ಶಾಸಕರಿಂದ ಪ್ರಮಾಣ ಸ್ವೀಕಾರ

ಪಶ್ಚಿಮ ಬಂಗಾಳದ 294 ಶಾಸಕರ ಪೈಕಿ 144 ಮಂದಿ ಶಾಸಕರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು. ಹಂಗಾಮಿ ಸ್ಪೀಕರ್ ತಪಸ್ ರಾಯ್ ಪ್ರಮಾಣ ಬೋಧಿಸಿದರು.

ಉಳಿದ ಶಾಸಕರು ಮೇ 14ರಂದು ಪ್ರಮಾಣ ಸ್ವೀಕರಿಸಲಿದ್ದಾರೆ ಎಂದು ತಪಸ್ ರಾಯ್ ತಿಳಿಸಿದರು.

ಸುವೇಂದು ಅಧಿಕಾರಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ನಮಿಸಿದರು. ಬಳಿಕ ವಿಧಾನಸಭೆ ಪ್ರವೇಶಕ್ಕೂ ಮುನ್ನ ಕಟ್ಟಡದ ಮೆಟ್ಟಿಲುಗಳಿಗೆ ತಲೆಬಾಗಿ ನಮಸ್ಕರಿಸಿದರು.

ಬಳಿಕ ಅವರು ತಾವೇ ಗಂಟೆ ಬಾರಿಸುತ್ತಾ ತಮ್ಮ ಕೊಠಡಿಗೆ ಪೂಜೆ ಸಲ್ಲಿಸಿದರು. ಶಂಖದ ನಾದ ಇಡೀ ವಿಧಾನಸಭೆಯಲ್ಲಿ ಮೊಳಗಿತ್ತು. ರಾಜ್ಯ ಶಾಸಕಾಂಗದ ಇತಿಹಾಸದಲ್ಲಿ ಮುಖ್ಯಮಂತ್ರಿಯೊಬ್ಬರು ತಮ್ಮ ಕೊಠಡಿಗೆ ತಾವೇ ಪೂಜೆ ಸಲ್ಲಿಸಿದ್ದು ಇದೇ ಮೊದಲು.

ಬಳಿಕ ಮಾತನಾಡಿದ ಸುವೇಂದು ಅಧಿಕಾರಿ ಅವರು, ‘ವಿಧಾನಸಭೆಯು ಪ್ರಜಾಪ್ರಭುತ್ವದ ದೇಗುಲ. ಇಲ್ಲಿ ನಾವು ಜನರಿಗಾಗಿ ಪಾರದರ್ಶಕವಾಗಿ ಕೆಲಸ ಮಾಡುತ್ತೇವೆ’ ಎಂದು ಹೇಳಿದರು.

ದಿನದ ಅರ್ಧ ಕಲಾಪವು ಮುಗಿಯುತ್ತಿದ್ದಂತೆಯೇ ಹಂಗಾಮಿ ಸ್ಪೀಕರ್ ತಪಸ್ ರಾಯ್ ಅವರು ಎದ್ದುನಿಂತು, ‘ನೂತನ ಶಾಸಕರಿಗೆ ಮೀನೂಟ ಕಾಯುತ್ತಿದೆ’ ಎಂದು ಘೋಷಿಸಿದರು.

ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸಮಾಲೋಚನೆ

ಕೇರಳಂ ಸಿ.ಎಂ: ಇಂದು ಘೋಷಣೆ

ನವದೆಹಲಿ(ಪಿಟಿಐ): ಕೇರಳಂನ ನೂತನ ಮುಖ್ಯಮಂತ್ರಿ ಅಭ್ಯರ್ಥಿ ಹೆಸರನ್ನು ಮೇ 14ರಂದು ಘೋಷಿಸುವುದಾಗಿ ಕಾಂಗ್ರೆಸ್ ಪಕ್ಷ ಬುಧವಾರ ಹೇಳಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ತೆರಳಿ, ಮಾತುಕತೆ ನಡೆಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕೇರಳಂ ವಿಧಾನಸಭೆ ಚುನಾವಣೆಯ ಮತ ಎಣಿಕೆ ಮುಗಿದು, ಫಲಿತಾಂಶ ಘೋಷಣೆಯಾಗಿ 10 ದಿನಗಳು ಕಳೆದಿವೆ. ಯುಡಿಎಫ್ ಪ್ರಚಂಡ ಗೆಲುವು ಸಾಧಿಸಿದೆ. ಆದರೆ, ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆ ಕುರಿತಂತೆ ಹಲವು ಸುತ್ತಿನ ಚರ್ಚೆಗಳು ನಡೆದಿದ್ದರೂ ನಿರ್ಧಾರ ಕೈಗೊಳ್ಳುವುದು ಕಾಂಗ್ರೆಸ್ ನಾಯಕತ್ವಕ್ಕೆ ಸಾಧ್ಯವಾಗಿರಲಿಲ್ಲ. ಈಗ, ಈ ಕುರಿತ ಅನಿಶ್ಚಿತತೆಗೆ ತೆರೆ ಬೀಳಲಿದೆ.

ರಾಹುಲ್, ಮಲ್ಲಿಕಾರ್ಜುನ ಖರ್ಗೆ

‘ರಾಹುಲ್ ಗಾಂಧಿ ಹಾಗೂ ಖರ್ಗೆ ಅವರು 40 ನಿಮಿಷಗಳಷ್ಟು ಚರ್ಚೆ ನಡೆಸಿದ್ದಾರೆ. ಕೇರಳಂನ ಮುಂದಿನ ಮುಖ್ಯಮಂತ್ರಿ ಕುರಿತು ಗುರುವಾರ ಘೋಷಿಸಲಾಗುವುದು’ ಎಂದು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ಈ ಘೋಷಣೆಯನ್ನು ದೆಹಲಿಯಲ್ಲಿ ಮಾಡಲಾಗುವುದೋ ಅಥವಾ ಕೇರಳಂನಲ್ಲಿಯೋ’ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಕೇರಳಂನ ಮುಂದಿನ ಮುಖ್ಯಮಂತ್ರಿ ಕುರಿತಂತೆ ನಾಳೆ ಘೋಷಣೆ ಮಾಡಲಾಗುವುದು’ ಎಂದಷ್ಟೇ ಅವರು ಉತ್ತರಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕೇರಳಂ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ವಿ.ಡಿ. ಸತೀಶನ್ ಹಾಗೂ ಪಕ್ಷದ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರು ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ.

ನೂತನ ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಪಕ್ಷದ ವರಿಷ್ಠರು ಹಲವು ಸುತ್ತಿನ ಮಾತುಕತೆ ನಡೆಸಿದ್ದರೂ ಒಮ್ಮತಕ್ಕೆ ಬರಲು ಆಗಿರಲಿಲ್ಲ. ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷರು ಹಾಗೂ ಸ್ಥಳೀಯ ಮುಖಂಡರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದ್ದರು.

ಪುದುಚೆರಿ: ರಂಗಸ್ವಾಮಿ ಪ್ರಮಾಣ ಸ್ವೀಕಾರ

ಚೆನ್ನೈ (ಪಿಟಿಐ): ಎಐಎನ್‌ಆರ್‌ಸಿ ಸಂಸ್ಥಾಪಕ ಎನ್.ರಂಗಸ್ವಾಮಿ ಅವರು ಐದನೇ ಬಾರಿಗೆ ಪುದುಚೆರಿಯ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣವಚನ ಸ್ವೀಕರಿಸಿದರು.

ಮಲ್ಲಾಡಿ ಕೃಷ್ಣರಾವ್, ಎ.ನಮಶಿವಾಯಂ ಅವರೂ ಎಐಎನ್‌ಆರ್‌ಸಿ–ಎನ್‌ಡಿಎ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಲೆಫ್ಟಿನೆಂಟ್ ಗವರ್ನರ್ ಕೆ.ಕೈಲಾಶ್‌ನಾಥನ್ ಅವರು ಮುಖ್ಯಮಂತ್ರಿ ಮತ್ತು ಸಂಪುಟದ ಇತರ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಂಗಸ್ವಾಮಿ ಅವರು ದೇವರ ಹೆಸರಿನಲ್ಲಿ ತೆಲುಗು ಭಾಷೆಯಲ್ಲಿ ಪ್ರಮಾಣ ಸ್ವೀಕರಿಸಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಮತ್ತು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಭಾಗಿಯಾಗಿದ್ದರು.

ಅಸ್ಸಾಂ: ಯುಸಿಸಿ ಅನುಷ್ಠಾನಕ್ಕೆ ಸಚಿವ ಸಂಪುಟ ಒಪ್ಪಿಗೆ

ಗುವಾಹಟಿ (ಪಿಟಿಐ): ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅನುಷ್ಠಾನಗೊಳಿಸಲು ಅಸ್ಸಾಂ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

‘ಬುಡಕಟ್ಟು ಸಮುದಾಯವನ್ನು ಯುಸಿಸಿ ವ್ಯಾಪ್ತಿಯಿಂದ ಹೊರಗಿಡಲಾಗುವುದು’ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದರು.

ಹಿಮಂತ ಬಿಸ್ವ ಶರ್ಮಾ

‘ಮೊದಲ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಪ್ರಮುಖ ನಿರ್ಧಾರ ಇದಾಗಿದೆ. ಯುಸಿಸಿ ಮಸೂದೆಯನ್ನು ಮೇ 26ರಂದು ವಿಧಾನಸಭೆಯಲ್ಲಿ ಮಂಡಿಸಲಾಗುವುದು’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉತ್ತರಾಖಂಡ, ಗೋವಾ ಮತ್ತು ಗುಜರಾತ್‌ನಲ್ಲಿ ಈಗಾಗಲೇ ಅನುಷ್ಠಾನ ಮಾಡಲಾಗಿದೆ. ಅಸ್ಸಾಂನಲ್ಲಿ ಅಗತ್ಯಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳಲಾಗುವುದು ಎಂದರು.

ರಾಯಪುರ: ವಿರಾಟ್ ಶತಕದ ಅಬ್ಬರ

ಆರ್‌ಸಿಬಿ ಜಯಭೇರಿ • ಪ್ಲೇ ಆಫ್ ಹೊಸ್ತಿಲಿಗೆ ರಜತ್ ಪಡೆ • ಪಡಿಕ್ಕಲ್ ಮಿಂಚು

ರಾಯಪುರ: ಸತತ ಎರಡು ಪಂದ್ಯಗಳಲ್ಲಿ ಸೊನ್ನೆ ಸುತ್ತಿದ್ದ ವಿರಾಟ್ ಕೊಹ್ಲಿ ಬುಧವಾರ ಶತಕ ಗಳಿಸಿ ತಮ್ಮ ಅಭಿಮಾನಿಗಳ ಮನಕ್ಕೆ ಮುದ ನೀಡಿದರು.

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ನಡೆದ ಪಂದ್ಯದಲ್ಲಿ 193 ರನ್‌ಗಳ ಗುರಿ ಬೆನ್ನಟ್ಟಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 6 ವಿಕೆಟ್‌ಗಳಿಂದ ಗೆದ್ದಿತು. ವಿರಾಟ್ 60 ಎಸೆತಗಳಲ್ಲಿ 105 ರನ್ ಗಳಿಸಿದರು. ಅದರಲ್ಲಿ 11 ಬೌಂಡರಿಮತ್ತು 3 ಸಿಕ್ಸರ್ ಇದ್ದವು. 'ಚೇಸ್ ಮಾಸ್ಟರ್' ವಿರಾಟ್ ಮತ್ತು ಕನ್ನಡಿಗ ದೇವದತ್ತ ಪಡಿಕ್ಕಲ್ (37; 27ಎ) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದ್ದರಿಂದ ಗೆಲುವಿನ ಹಾದಿ ಸರಾಗವಾಯಿತು.

ಅಷ್ಟೇ ಅಲ್ಲ. 16 ಅಂಕ ಗಳಿಸಿದ ತಂಡವು ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು. ಗುಜರಾತ್ ಟೈಟನ್ಸ್ ಕೂಡ 16 ಪಾಯಿಂಟ್ ಹೊಂದಿದೆ. ಆದರೆ ಆರ್‌ಸಿಬಿಯ ನಿವ್ವಳ ರನ್ ರೇಟ್ ಗುಜರಾತ್‌ಗಿಂತ ಚೆನ್ನಾಗಿದೆ. ಇದರೊಂದಿಗೆ ಪ್ಲೇಆಫ್ ಹೊಸ್ತಿಲಿಗೂ ಬಂದು ನಿಂತಿತು.

ವಿರಾಟ್ ಅವರು ಐಪಿಎಲ್‌ನಲ್ಲಿ ಅತಿ ಹೆಚ್ಚು ಪಂದ್ಯಗಳನ್ನು (279) ಆಡಿದ ದಾಖಲೆ ಮಾಡಿದರು. ಈ ಹಾದಿಯಲ್ಲಿ ಮಹೇಂದ್ರಸಿಂಗ್ ಧೋನಿ (278) ಅವರನ್ನು ಹಿಂದಿಕ್ಕಿದರು. 2008ರಿಂದ ಟೂರ್ನಿಯಲ್ಲಿ ಆಡುತ್ತಿರುವ ಅವರು 9ನೇ ಶತಕ ದಾಖಲಿಸಿದರು. ಈ ಸಾಧನೆ ಮಾಡಿದ ಟೂರ್ನಿಯ ಮೊದಲ ಬ್ಯಾಟರ್ ಕೂಡ ಅವರಾದರು.

ತನ್ನ ಎರಡನೇ ತವರು ರಾಯಪುರದಲ್ಲಿ ಆಡಿದ ಎರಡೂ ಪಂದ್ಯಗಳನ್ನೂ ಆರ್‌ಸಿಬಿ ಗೆದ್ದಿತ್ತು.

ಮಳೆ–ರಘುವಂಶಿ ಆಟ: ಮಳೆಯಿಂದಾಗಿ ವಿಳಂಬವಾಗಿ ಆರಂಭವಾದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಅಂಗಕ್ರಿಷ್ ರಘುವಂಶಿ ಚೆಂದದ ಅರ್ಧಶತಕ ಗಳಿಸಿದರು.

ರಘುವಂಶಿ (71; 46ಎ, 4x7, 6x3) ಅವರ ಆಟದ ಬಲದಿಂದ ಕೋಲ್ಕತ್ತ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು 20 ಓವರ್‌ಗಳ ಅಂತ್ಯಕ್ಕೆ 4 ವಿಕೆಟ್‌ಗಳಿಗೆ 192 ರನ್ ಗಳಿಸಿತು. ರಘುವಂಶಿ ಅವರೊಂದಿಗೆ ರಿಂಕು ಸಿಂಗ್ (ಔಟಾಗದೇ 49; 29ಎ, 4x3, 6x2) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 76 (46ಎ) ರನ್ ಕಲೆಹಾಕಿದರು.

ಸಂಜೆ ಮಳೆ ಸುರಿದ ಕಾರಣ ಕ್ರೀಡಾಂಗಣದ ಔಟ್‌ಫೀಲ್ಡ್ ಒದ್ದೆಯಾಗಿತ್ತು. ಆದ್ದರಿಂದ ಪಂದ್ಯವು ಸುಮಾರು ಒಂದು ಗಂಟೆ ವಿಳಂಬವಾಗಿ ಆರಂಭವಾಯಿತು. ಆದರೂ, ಓವರ್ ಕಡಿತವಾಗಲಿಲ್ಲ. ಟಾಸ್ ಗೆದ್ದ ಆರ್‌ಸಿಬಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ವೇಗಿ ಭುವನೇಶ್ವರ್ ಕುಮಾರ್ ಪ್ರಯೋಗಿಸಿದ ಲೆಂಗ್ತ್ ಎಸೆತವನ್ನು ನೇರವಾಗಿ ಆಡಲು ಯತ್ನಿಸಿದ ಫಿನ್ ಅಲೆನ್ (18; 8ಎ, 4X3, 6X1) ಯೋಜನೆ ವಿಫಲವಾಯಿತು. ಬ್ಯಾಟ್ ಅಂಚು ಸವರಿದ್ದ ಚೆಂಡು ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರ ಕೈಗವಸುಗಳಲ್ಲಿ ಬಂಧಿಯಾಯಿತು. ಕಳೆದ ಪಂದ್ಯದಲ್ಲಿ ಫಿನ್ ಅವರು ಶತಕ ಬಾರಿಸಿದ್ದರು. ಅವರ ವಿಕೆಟ್ ಪಡೆಯುವ ಮೂಲಕ ಭುವಿ ತಾವು ಪವರ್‌ಪ್ಲೇನಲ್ಲಿ ಪ್ರಭಾವಿ ಎಂಬುದನ್ನು ಮತ್ತೊಮ್ಮೆ ತೋರಿಸಿದರು.

ಜೋಶ್ ಹೇಜ್ಲ್‌ವುಡ್ ತಮ್ಮದೇ ಎಸೆತದಲ್ಲಿ ನಾಯಕ ಅಜಿಂಕ್ಯ ರಹಾನೆ (19; 13) ಅವರ ಕ್ಯಾಚ್ ಪಡೆದರು.

ಈ ಹಂತದಲ್ಲಿ ರಘುವಂಶಿ ಅವರೊಂದಿಗೆ ಜೊತೆಗೂಡಿದ ಕ್ಯಾಮರಾನ್ ಗ್ರೀನ್ (32; 24ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 68 (46ಎಸೆತ) ರನ್ ಗಳಿಸಿದರು. 13ನೇ ಓವರ್‌ನಲ್ಲಿ ಈ ಜೊತೆಯಾಟಕ್ಕೆ ರಸಿಕ್ ಸಲಾಮ್ ದಾರ್ ಅವರು ತಡೆಯೊಡ್ಡಿದರು. ಗ್ರೀನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ರಸಿಕ್ ಯಶಸ್ವಿಯಾದರು. ಕೊನೆಯಲ್ಲಿ ರಘುವಂಶಿ ಮತ್ತು ರಿಂಕು ಸಿಂಗ್ ಉತ್ತಮ ಜೊತೆಯಾಟ ಬೆಳೆಸಿದರು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ರನ್ ಗಳಿಸುವ ಯತ್ನದಲ್ಲಿ ರಘುವಂಶಿ ರನ್‌ಔಟ್ ಆದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 192 (ಕ್ಯಾಮರಾನ್ ಗ್ರೀನ್ 32, ಅಂಗಕ್ರಿಷ್ ರಘುವಂಶಿ 71, ರಿಂಕು ಸಿಂಗ್ ಔಟಾಗದೇ 49, ಭುವನೇಶ್ವರ್ ಕುಮಾರ್ 12ಕ್ಕೆ1, ಜೋಶ್ ಹೇಜ್ಲ್‌ವುಡ್ 25ಕ್ಕೆ1, ರಸಿಕ್ ಸಲಾಮ್ 28ಕ್ಕೆ1). ರಾಯಲ್ ಚಾಲೆಂಜರ್ಸ್ ಬೆಂಗಳೂರು: 19.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 194 (ವಿರಾಟ್ ಕೊಹ್ಲಿ ಅಜೇಯ 105, ದೇವದತ್ತ ಪಡಿಕ್ಕಲ್ 39, ರಜತ್ ಪಾಟೀದಾರ್ 11, ಕಾರ್ತಿಕ್ ತ್ಯಾಗಿ 32ಕ್ಕೆ3, ಸುನಿಲ್ ನಾರಾಯಣ್ 31ಕ್ಕೆ1) **ಪಂದ್ಯದ ಆಟಗಾರ:** ವಿರಾಟ್ ಕೊಹ್ಲಿ.

ವಿರಾಟ್ ಕೊಹ್ಲಿ	
105*	ರನ್
60	ಎಸೆತ
11	ಬೌಂಡರಿ
3	ಸಿಕ್ಸರ್

ಎಎಫ್‌ಪಿ ಚಿತ್ರ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	12	8	4	0	16	1.053
ಜಿ ಟಿ	12	8	4	0	16	0.551
ಎಸ್‌ಆರ್‌ಎಚ್	12	7	5	0	14	0.331
ಪಿಬಿಕೆಎಸ್	11	6	4	1	13	0.428
ಸಿಎಸ್‌ಕೆ	11	6	5	0	12	0.185
ಆರ್ ಆರ್	11	6	5	0	12	0.082
ಡಿ ಸಿ	12	5	7	0	10	- 0.993
ಕೆಕೆಆರ್	11	4	6	1	9	- 0.198
ಎಂ ಐ	11	3	8	0	6	- 0.585
ಎಲ್‌ಎಸ್‌ಜಿ	11	3	8	0	6	- 0.907

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (508 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (22 ವಿಕೆಟ್)

9 ವಿರಾಟ್ ಕೊಹ್ಲಿ ಅವರು ಐಪಿಎಲ್‌ನಲ್ಲಿ 9ನೇ ಶತಕ ಸಿಡಿಸಿದರು. ಜೋಸ್ ಬಟ್ಲರ್ 7 ಶತಕ ಗಳಿಸಿದ್ದರೆ, ಕ್ರಿಸ್ ಗೇಲ್ ಹಾಗೂ ಕೆ.ಎಲ್. ರಾಹುಲ್ ತಲಾ 6 ಪಂದ್ಯಗಳಲ್ಲಿ 100ರ ಗಡಿ ದಾಟಿದ್ದಾರೆ

12 ವಿರಾಟ್ ಕೊಹ್ಲಿ ಅವರು 12 ಆವೃತ್ತಿಗಳಲ್ಲಿ 400ಕ್ಕೂ ಅಧಿಕ ರನ್ ಸಂಪಾದಿಸಿದರು. ಡೇವಿಡ್ ವಾರ್ನರ್, ಸುರೇಶ್ ರೈನಾ, ಶಿಖರ್ ಧವನ್ ಹಾಗೂ ರೋಹಿತ್ ಶರ್ಮಾ ತಲಾ ಒಂಬತ್ತು ಆವೃತ್ತಿಗಳಲ್ಲಿ 400ರ ಗಡಿ ದಾಟಿದ್ದಾರೆ

14,000 ವಿರಾಟ್ ಕೊಹ್ಲಿ ಅವರು ಟಿ20 ಮಾದರಿಯಲ್ಲಿ ಕೇವಲ 409 ಇನಿಂಗ್ಸ್‌ಗಳಿಂದ 14 ಸಾವಿರ ರನ್ ಪೂರೈಸಿದರು. ಎರಡನೇ ಸ್ಥಾನದಲ್ಲಿ ಕ್ರಿಸ್ ಗೇಲ್ (423 ಇನಿಂಗ್ಸ್) ಇದ್ದಾರೆ

6,000 ವಿರಾಟ್ ಕೊಹ್ಲಿ ಅವರು ಟಿ20 ಮಾದರಿಯಲ್ಲಿ ಆರಂಭಿಕ ಆಟಗಾರನಾಗಿ 6 ಸಾವಿರ ರನ್ ಮೈಲಿಗಲ್ಲು ದಾಟಿದರು

279 ಐಪಿಎಲ್‌ನಲ್ಲಿ ಅತಿ ಹೆಚ್ಚು ಪಂದ್ಯಗಳಲ್ಲಿ ಆಡಿದ ಆಟಗಾರ ಎಂಬ ಗೌರವಕ್ಕೆ ವಿರಾಟ್ ಭಾಜನರಾದರು. ಎಂ.ಎಸ್.ಧೋನಿ ಹಾಗೂ ರೋಹಿತ್ ಶರ್ಮಾ ಅವರು ತಲಾ 278 ಪಂದ್ಯಗಳಲ್ಲಿ ಆಡಿದ್ದಾರೆ

ಪ್ಲೇ ಆಫ್ ಹಾದಿ: ಶ್ರೇಯಸ್ ಬಳಗಕ್ಕೆ ಗೆಲುವು ಅಗತ್ಯ

ಪಂಜಾಬ್‌ಗೆ ಪುಟಿದೇಳುವ ಒತ್ತಡ

ಧರ್ಮಶಾಲಾ (ಪಿಟಿಐ): ಮೊದಲ ಏಳೂ ಪಂದ್ಯಗಳಲ್ಲಿ ಅಜೇಯವಾಗಿ ಉಳಿದಿದ್ದ ಪಂಜಾಬ್ ಕಿಂಗ್ಸ್ ನಂತರ ಸತತ ನಾಲ್ಕು ಹಣಾಹಣಿಗಳಲ್ಲಿ ಮುಗ್ಗರಿಸಿದೆ. ಅಲ್ಲದೇ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಈ ಸೋಲುಗಳಲ್ಲಿ ತಂಡದ ಫೀಲ್ಡಿಂಗ್ ಲೋಪಗಳ ಪಾತ್ರವೇ ದೊಡ್ಡದು.

ಆದ್ದರಿಂದ ಗುರುವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ತಂಡವು ಮುಂಬೈ ಇಂಡಿಯನ್ಸ್ ಎದುರು ತನ್ನ ಫೀಲ್ಡಿಂಗ್ ವಿಭಾಗದಲ್ಲಿ ಸುಧಾರಣೆಗಳನ್ನು ಮಾಡಿಕೊಂಡು ಕಣಕ್ಕಿಳಿಯುವ ಒತ್ತಡದಲ್ಲಿದೆ. ಈ ಹಂತದಲ್ಲಿಯೇ ಸೋಲಿನ ಸರಪಳಿ ಕಳಚಿಕೊಳ್ಳದಿದ್ದರೆ 'ಹಾಲಿ ರನ್ನರ್ಸ್ ಅಪ್' ಪಂಜಾಬ್‌ಗೆ ಪ್ಲೇಆಫ್ ಹಾದಿ ಕಡುಕಠಿಣವಾಗಬಹುದು.

ಶ್ರೇಯಸ್ ಅಯ್ಯರ್ ನಾಯಕತ್ವದ ತಂಡದಲ್ಲಿ ಬ್ಯಾಟಿಂಗ್ ಸರದಿ ಉತ್ತಮವಾಗಿದೆ. ಆದರೆ ಬೌಲಿಂಗ್ ವಿಭಾಗದಲ್ಲಿ ಅಸ್ಥಿರತೆ ಇದೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರ ಅತಿ ಹೆಚ್ಚು ರನ್ ಕೊಟ್ಟಿರುವ ಬೌಲರ್ ಆಗಿದ್ದಾರೆ. ಟೂರ್ನಿಯ ಮೊದಲಾರ್ಧದಲ್ಲಿ ಅರ್ಷದೀಪ್ ಮತ್ತು ಝೇವಿಯರ್ ಬಾರ್ಟ್‌ಲೆಟ್ ಅವರು ಉತ್ತಮ ಆರಂಭ ನೀಡಿದ್ದರು. ಆದರೆ ಇತ್ತೀಚಿನ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸುತ್ತಿದ್ದಾರೆ. ಕಳೆದ ಪಂದ್ಯದಲ್ಲಿ ಮೂರನೇ ಎಡಗೈ ವೇಗಿಯಾಗಿ ಬೆನ್ ದ್ವಾರಶಿಯಸ್ ಆಡಿದ್ದರು. ಅವರೂ ದುಬಾರಿಯಾದರು. ಅರ್ಷದೀಪ್ ಅವರು ಕಳೆದ 11 ಪಂದ್ಯಗಳಲ್ಲಿ ಓವರ್‌ಗೆ 10 ರನ್ ಸರಾಸರಿಯಲ್ಲಿ ರನ್ ಕೊಟ್ಟಿದ್ದಾರೆ. ಅನುಭವಿ ಸ್ಪಿನ್ನರ್ ಯಜುವೇಂದ್ರ ಚಾಹಲ್ ತಂಡದಲ್ಲಿದ್ದರೆ.


ಶ್ರೇಯಸ್ ಅಯ್ಯರ್

ಬ್ಯಾಟಿಂಗ್ ವಿಭಾಗದಲ್ಲಿ ಪ್ರಭಸಿಮ್ರನ್ ಸಿಂಗ್, ಪ್ರಿಯಾಂಶ್ ಆರ್ಯ, ಕೂಪರ್ ಕೊನೊಲಿ, ಶ್ರೇಯಸ್ ಮತ್ತು ಮಾರ್ಕಸ್ ಸ್ಟೊಯಿನಿಸ್ ಅವರು ತಮ್ಮ ಬೀಸಾಟವನ್ನು ಮುಂದುವರಿಸಿದರೆ ದೊಡ್ಡ ಮೊತ್ತ ಗಳಿಸಲು ತಂಡಕ್ಕೆ ಸಾಧ್ಯವಾಗಲಿದೆ.

ಏಕೆಂದರೆ; ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿರುವ ಮುಂಬೈ ಇಂಡಿಯನ್ಸ್ ತಂಡಕ್ಕೆ ಕಳೆದುಕೊಳ್ಳುವಂತಹದ್ದು ಏನೂ ಇಲ್ಲ. ಕಳೆದೆರಡೂ ಪಂದ್ಯಗಳಲ್ಲಿ ಹಾರ್ದಿಕ್ ಪಾಂಡ್ಯ ಅವರು ತಮ್ಮ ಗಾಯದ ಸಮಸ್ಯೆಯಿಂದಾಗಿ ಆಡಿರಲಿಲ್ಲ. ಇಲ್ಲಿಯೂ ಕಣಕ್ಕಿಳಿಯುವುದು ಅನುಮಾನ. ರಿಯಾನ್ ರಿಕೆಲ್ಟನ್ ಮತ್ತು ರೋಹಿತ್ ಶರ್ಮಾ ಅವರು ಉತ್ತಮ ಆರಂಭ ನೀಡಬಲ್ಲರು. ಆದರೆ ಸೂರ್ಯಕುಮಾರ್ ಯಾದವ್ ಅವರು ಲಯದಲ್ಲಿ ಇಲ್ಲದಿರುವುದು ತಂಡಕ್ಕೆ ಚಿಂತೆಯ ವಿಷಯ. ತಿಲಕ್ ವರ್ಮಾ, ವಿಲ್ ಜ್ಯಾಕ್ಸ್ ಮತ್ತು ನಮನ್ ಧೀರ್ ಅವರು ಭರವಸೆಯ ಆಟಗಾರರು. ಮಧ್ಯಮ ಕ್ರಮಾಂಕಕ್ಕೆ ಶಕ್ತಿ ತುಂಬುವ ಸಮರ್ಥರೂ ಹೌದು.

ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ, ಅಲ್ಲಾ ಘಜನ್‌ಫರ್ ಮತ್ತು ಕಾರ್ಬಿನ್ ಬಾಷ್ ಮಾತ್ರ ಪಂದ್ಯ ಜಯಿಸಿಕೊಡಬಲ್ಲ ಸಮರ್ಥರು. ಆದರೆ, ಅಂಗದ್ ರಾಜ್ ಬಾವಾ, ವಿಲ್ ಜ್ಯಾಕ್ಸ್ ಅವರೂ ಪರಿಣಾಮಕಾರಿ ದಾಳಿ ನಡೆಸಿದರೆ ಪಂಜಾಬ್ ತಂಡಕ್ಕೆ ಕಠಿಣ ಸವಾಲು ಎದುರಾಗುವುದು ಖಚಿತ.

ಮುಂಬೈ ಇಂಡಿಯನ್ಸ್ ತಂಡದ ಶಾರ್ದೂಲ್ ಠಾಕೂರ್, ರೋಹಿತ್ ಶರ್ಮಾ ಹಾಗೂ ಪಂಜಾಬ್ ಕಿಂಗ್ಸ್ ತಂಡದ ಯಜುವೇಂದ್ರ ಚಾಹಲ್ ಅವರು ಬುಧವಾರ ಅಭ್ಯಾಸದ ವೇಳೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್ V/s ಮುಂಬೈ ಇಂಡಿಯನ್ಸ್

ತಾಣ: ಧರ್ಮಶಾಲಾ,
ಆರಂಭ: ರಾತ್ರಿ 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ಬಲಾಬಲ

ಒಟ್ಟು ಪಂದ್ಯ 35
ಕಿಂಗ್ಸ್ ಗೆಲುವು 18
ಎಂಐ ಜಯ 17

ಟೆಸ್ಟ್ ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ಬೂಮ್ರಾ

ದುಬೈ (ಪಿಟಿಐ): ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ.

ಬುಧವಾರ ಪ್ರಕಟವಾಗಿರುವ ಪಟ್ಟಿಯಲ್ಲಿ ಭಾರತದಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಅವರು ಬ್ಯಾಟರ್‌ಗಳ ವಿಭಾಗದಲ್ಲಿ ಕ್ರಮವಾಗಿ 8 ಹಾಗೂ 9ನೇ ಸ್ಥಾನದಲ್ಲಿದ್ದರೆ.

ಇಂಗ್ಲೆಂಡ್‌ನ ಬ್ಯಾಟರ್ ಜೋ ರೂಟ್ ಅವರು 880 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ ಎರಡನೇ ಸ್ಥಾನದಲ್ಲಿದ್ದಾರೆ. ನಂತರದ ಸ್ಥಾನಗಳಲ್ಲಿ ಟ್ರಾವಿಸ್ ಹೆಡ್ ಮತ್ತು ಸ್ಟೀವ್ ಸ್ಮಿತ್ ಇದ್ದಾರೆ.

ಭಾರತ ಹೋದ ನವೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಟೆಸ್ಟ್ ಆಡಿತ್ತು. 2026ರಲ್ಲಿ ಇದುವರೆಗೆ ಒಂದೂ ಟೆಸ್ಟ್ ಆಡಿಲ್ಲ. ಆದರೂ ಬೂಮ್ರಾ ಅವರು 879 ಅಂಕಗಳೊಂದಿಗೆ ಮೊದಲ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ವೇಗಿ ಮೊಹಮ್ಮದ್ ಸಿರಾಜ್ 12ನೇ ಸ್ಥಾನದಲ್ಲಿದ್ದಾರೆ. ಸ್ಪಿನ್ನರ್ ರವೀಂದ್ರ ಜಡೇಜ ಹಾಗೂ ಕುಲದೀಪ್ ಯಾದವ್ ಕ್ರಮವಾಗಿ 14 ಹಾಗೂ 15ನೇ ಸ್ಥಾನಗಳಲ್ಲಿದ್ದಾರೆ.

ಸಿಎಸ್‌ಕೆ ತಂಡಕ್ಕೆ ನರೋನಾ



ಚೆನ್ನೈ (ಪಿಟಿಐ): ಕರ್ನಾಟಕದ ಆಲ್‌ರೌಂಡರ್ ಮೆಕ್ನೀಲ್ ನರೋನಾ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯು ಐಪಿಎಲ್‌ನಲ್ಲಿ ಆಡುವ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ. ಗಾಯಾಳಾಗಿರುವ ಆಲ್‌ರೌಂಡರ್ ರಾಮಕೃಷ್ಣ ಘೋಷ್ ಸ್ಥಾನದಲ್ಲಿ ಮೆಕ್ನಿಲ್ ಸೇರ್ಪಡೆಯಾಗಿದ್ದಾರೆ.

ಮೇ 3ರಂದು ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದ ವೇಳೆ ಘೋಷ್ ಅವರು ಪಾದದ ನೋವಿಗೆ ಒಳಗಾಗಿದ್ದರು. ಅವರ ಸ್ಥಾನಕ್ಕೆ ಮೆಕ್ನೀಲ್ ಅವರು ₹30 ಲಕ್ಷ ಮೊತ್ತಕ್ಕೆ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೇರ್ಪಡೆಯಾಗಿದ್ದಾರೆ ಎಂದು ಐಪಿಎಲ್ ಮಾಧ್ಯಮ ಪ್ರಕಟಣೆ ಬುಧವಾರ ತಿಳಿಸಿದೆ.

ಸಿ.ಕೆ.ನಾಯ್ಡು ಟ್ರೋಫಿಯಲ್ಲಿ ಅತ್ಯಧಿಕ ರನ್ ಗಳಿಕೆಗಾಗಿ ಮೆಕ್ನಿಲ್ ಅವರಿಗೆ ಬಿಸಿಸಿಐನ ನಮನ್ ಪ್ರಶಸ್ತಿ ಸಮಾರಂಭದಲ್ಲಿ ಎಂ.ಎ.ಚಿದಂಬರಮ್ ಟ್ರೋಫಿ ಪ್ರದಾನ ಮಾಡಲಾಗಿತ್ತು.

ಕಳೆದ ಋತುವಿನಲ್ಲಿ ಉತ್ತಮ ಸಾಧನೆಗಾಗಿ, 24 ವರ್ಷ ವಯಸ್ಸಿನ ಆಲ್‌ರೌಂಡರ್, ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಆಡುವ ತಂಡಕ್ಕೂ ಆಯ್ಕೆಯಾಗಿದ್ದರು. ಅಲ್ಲಿ ಮೂರು ಪಂದ್ಯಗಳನ್ನು ಆಡಿದ್ದರು.

ದರ್ಶನ್, ತನಿಶಿ ಚಾಂಪಿಯನ್ • ಕೊನೆಯ ದಿನ ಏಳು ಕೂಟದಾಖಲೆ

ರಾಜ್ಯ ಈಜು: ಬಿಎಸಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬಸವನಗುಡಿ ಈಜು ಕೇಂದ್ರವು (ಬಿಎಸಿ) ಬುಧವಾರ ಮುಕ್ತಾಯಗೊಂಡ ಎನ್‌ಆರ್‌ಜೆ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ತನಿಶಿ ಗುಪ್ತಾ ಅವರಿದ್ದ ಡಾಲ್ಫಿನ್ ಈಜು ಕೇಂದ್ರವು ರನ್ನರ್ಸ್‌ಅಪ್ ಆಯಿತು.

ಕರ್ನಾಟಕ ಈಜು ಸಂಸ್ಥೆ (ಕೆಎಸ್‌ಎ) ಆಯೋಜಿಸಿದ್ದ ಈ ಕೂಟದ ಮೂರನೇ ದಿನವೂ ಒಟ್ಟು ಏಳು ದಾಖಲೆಗಳು ನಿರ್ಮಾಣವಾದವು. ಈ ಬಾರಿ ಒಟ್ಟು 17 ಕೂಟ ದಾಖಲೆಗಳು ಮೂಡಿಬಂದವು. ಬಿಎಸಿ ತಂಡವು ಒಟ್ಟು 545 ಅಂಕ ಕಲೆಹಾಕಿದರೆ, ಡಾಲ್ಫಿನ್ ತಂಡಕ್ಕೆ 285 ಅಂಕಗಳು ದೊರೆತವು.

ಕೂಟದುದ್ದಕ್ಕೂ ಅಮೋಘ ಪ್ರದರ್ಶನ ನೀಡಿ, ಎರಡು ದಾಖಲೆ ನಿರ್ಮಿಸಿದ ಬಿಎಸಿಯ ದರ್ಶನ್ ಎಸ್. (43 ಅಂಕ) ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದರೆ, ಮಹಿಳೆಯರ ವಿಭಾಗದಲ್ಲಿ ತನಿಷಿ (53 ಅಂಕ) ಅವರು ಈ ಗೌರವಕ್ಕೆ ಪಾತ್ರರಾದರು. ತನಿಶಿ ಅವರು ಕೂಟದಲ್ಲಿ ಒಟ್ಟು ಮೂರು ದಾಖಲೆ ಸ್ಥಾಪಿಸಿದರು.

ಬಿಎಸಿಯ ಎಸ್. ಲಕ್ಷ್ಯಾ ಅವರು ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯನ್ನು 2 ನಿಮಿಷ 40.86 ಸೆಕೆಂಡುಗಳಲ್ಲಿ ಗುರಿ ತಲುಪಿ, ಕೂಟ ದಾಖಲೆಯೊಂದಿಗೆ ಚಿನ್ನಕ್ಕೆ ಕೊರಳೊಡ್ಡಿದರು. ಇದೇ ತಂಡದ ಮಣಿಕಂಠ ಎಲ್. ಅವರು ಪುರುಷರ ವಿಭಾಗದ ಇದೇ ಸ್ಪರ್ಧೆಯಲ್ಲಿ ದಾಖಲೆಯೊಡನೆ (2ನಿ., 21.10ಸೆ.) ಚಿನ್ನಗೆದ್ದರು.

ಅಮೋಘ ಲಯದಲ್ಲಿರುವ ತನಿಶಿ ಅವರು ಮಹಿಳೆಯರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕೂಟ ದಾಖಲೆ (27.92 ಸೆ.) ನಿರ್ಮಿಸಿದರು. ಪುರುಷರ ವಿಭಾಗದಲ್ಲಿ ವಿದಿತ್ ಎಸ್. ಶಂಕರ್ (28.58 ಸೆ.) ಅವರು ಲಿಖಿತ್ ಎಸ್.ಪಿ. (28.69 ಸೆ.) ಅವರ ಹೆಸರಿನಲ್ಲಿದ್ದ ಆರು ವರ್ಷಗಳ ಹಳೆಯ ದಾಖಲೆಯನ್ನು ಮುಳುಗಿಸಿದರು. ದರ್ಶನ್ 200 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 2 ನಿಮಿಷ 02.57 ಸೆಕೆಂಡುಗಳಲ್ಲಿ ಪೂರ್ಣಗೊಳಿಸಿ, ಚಿನ್ನದ ಪದಕದೊಂದಿಗೆ ಕೂಟ ದಾಖಲೆಗೂ ಪಾತ್ರರಾದರು.

ತೀಸ್ತಾ ಸೋನಾರ್, ಅಧಿತಿ ವಿ.ಆರ್., ವಿಹಿತಾ ನಯನ ಹಾಗೂ ಶಿರಿನ್ ಅವರನ್ನೊಳಗೊಂಡ ಬಿಎಸಿ ಎ ತಂಡವು ಮಹಿಳೆಯರ 4x200 ಮೀ. ಫ್ರೀಸ್ಟೈಲ್ ರಿಲೇ ಸ್ಪರ್ಧೆಯಲ್ಲಿ ದಾಖಲೆ (8ನಿ., 57.08 ಸೆ.) ಸ್ಥಾಪಿಸಿತು. ಸುವಾನಾ ಸಿ. ಭಾಸ್ಕರ್, ಲಿನೇಶಾ ಎ.ಕೆ., ತನಿಶಿ ಗುಪ್ತ ಹಾಗೂ ದಿನಿಧಿ ದೇಸಿಂಗು ಅವರಿದ್ದ ಡಾಲ್ಫಿನ್ಸ್ ಎ ತಂಡವು ಮಹಿಳೆಯರ 4x100 ಮೀ. ಮೆಡ್ಲೆ ರಿಲೇಯಲ್ಲಿ ಕೂಟ ದಾಖಲೆಯೊಂದಿಗೆ (4 ನಿ., 25.06 ಸೆ.) ಸ್ವರ್ಣಕ್ಕೆ ಮುತ್ತಿಟ್ಟಿತು.

ಫಲಿತಾಂಶಗಳು: ಪುರುಷರು: 50 ಮೀ. ಬಟರ್‌ಫ್ಲೈ: ಚಿಂತನ್ ಎಸ್.ಶೆಟ್ಟಿ (ಎಲ್‌ಎಎಸ್) (ಕಾಲ: 25.64ಸೆ.)-1, ಪೃಥ್ವಿ ಎಂ. (ಬಿಎಸಿ)-2, ಹರಿಕಾರ್ತಿಕ್ ವೇಲು (ಜಿ.ಎಫ್)-3; 200 ಮೀ. ಬ್ರೆಸ್ಟ್‌ಸ್ಟ್ರೋಕ್: ಮಣಿಕಂಠ ಎಲ್. (ಕಾಲ: 2ನಿ., 21.10ಸೆ.)-1, ಸೂರ್ಯ ಜೋಯಪ್ಪ-2, ಡೇನಿಯಲ್ ಪೌಲ್-3 (ಮೂವರೂ ಬಿಎಸಿ); 800 ಮೀ. ಫ್ರೀಸ್ಟೈಲ್: ದರ್ಶನ್ ಎಸ್. (ಕಾಲ: 8ನಿ., 25.18ಸೆ.)-1, ದಕ್ಷಣ್ ಎಸ್.-2, ಶಿವಾಂಕ್ ವಿಶ್ವನಾಥ್-3 (ಮೂವರೂ ಬಿಎಸಿ); 4x100 ಮೀ. ಫ್ರೀಸ್ಟೈಲ್ ರಿಲೇ: ಬಿಎಸಿ 'ಎ' (ಕಾಲ: 3ನಿ., 42.48ಸೆ)-1, ಬಿಎಸಿ 'ಬಿ'-2, ಡಾಲ್ಫಿನ್ಸ್ 'ಎ'-3; 50 ಮೀ. ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಾಲ್ಫಿನ್) (ಕಾಲ: 28.58 ಸೆ.)-1, ಸೂರ್ಯ ಜೋಯಪ್ಪ-2, ಪೃಥ್ವಿಕ್ ಡಿ.ಎಸ್. (ಇಬ್ಬರೂ ಬಿಎಸಿ)-3; 200 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಕಾಲ: 2ನಿ., 04.62ಸೆ.)-1, ವೇದಾಂತ ವಿ.ಎಂ.-2 (ಇಬ್ಬರೂ ಬಿಎಸಿ), ಅಮನ್ ಅಭಿಜಿತ್ (ಡಾಲ್ಫಿನ್)-3; 200 ಮೀ. ಬಟರ್‌ಫ್ಲೈ: ದರ್ಶನ್ (ಕಾಲ: 2 ನಿ. 02.57 ಸೆ.)-1, ಶಿವಾಂಕ್ ವಿಶ್ವನಾಥ್-2, ಅನೀಶ್ ಅನಿರುದ್ಧ ಕೋರೆ-3 (ಮೂವರೂ ಬಿಎಸಿ).

ಮಹಿಳೆಯರು: 50 ಮೀ. ಫ್ರೀಸ್ಟೈಲ್: ಚರಿತಾ ಪಿ. (ಇಎಸ್‌ಎ) (ಕಾಲ: 26.78ಸೆ.)-1, ರುಜುಲಾ-2, ನೀನಾ ವೆಂಕಟೇಶ್-3 (ಇಬ್ಬರೂ ಡಾಲ್ಫಿನ್); 200 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್.ಲಕ್ಷ್ಯಾ (ಬಿಎಸಿ) (ಕಾಲ: 2 ನಿ., 40.86 ಸೆ.)-1, ತಾನ್ಯಾ ಎಸ್. (ಜಿಐಆರ್‌ಎಸ್)-2, ಲಿನೇಶಾ ಎ.ಕೆ. (ಡಾಲ್ಫಿನ್)-3; 50 ಮೀ. ಬಟರ್‌ಫ್ಲೈ: ತನಿಶಿ ಗುಪ್ತಾ (ಕಾಲ: 27.92ಸೆ.)-1, ನೀನಾ ವೆಂಕಟೇಶ್-2 (ಇಬ್ಬರೂ ಡಾಲ್ಫಿನ್), ಚರಿತಾ ಪಿ. (ಇಎಸ್‌ಎ)-3; 800 ಮೀ. ಫ್ರೀಸ್ಟೈಲ್: ಶ್ರೀ ಚರಣಿ ಟಿ. (ಜಿಐಆರ್‌ಎಸ್) (ಕಾಲ: 9ನಿ., 26.23ಸೆ)-1, ದಿನಿಧಿ ದೇಸಿಂಗು (ಡಾಲ್ಫಿನ್)-2, ಅದಿತಿ ಎನ್.ಎಂ. (ಬಿಎಸಿ)-3; 4x100 ಮೀ. ಮೆಡ್ಲೆ ರಿಲೇ: ಡಾಲ್ಫಿನ್ 'ಎ' (ಕಾಲ: 4ನಿ.25.06ಸೆ.)-1, ಬಿಎಸಿ 'ಎ'-2, ಡಾಲ್ಫಿನ್ 'ಬಿ'-3.

ಬೆಂಗಳೂರಿನಲ್ಲಿ ಬುಧವಾರ ಮುಕ್ತಾಯಗೊಂಡ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದ ಬಸವನಗುಡಿ ಈಜು ಕೇಂದ್ರ ತಂಡ ಚಿತ್ರ: ಪುಷ್ಕರ್ ವಿ.

ತನಿಶಿ ಗುಪ್ತಾ

ದರ್ಶನ್ ಎಸ್.

ಸಿಂಧು, ಶ್ರೀಕಾಂತ್ ಮುನ್ನಡೆ

ಬ್ಯಾಂಕಾಕ್ (ಪಿಟಿಐ): ಅನುಭವಿ ಷಟ್ಲರ್‌ಗಳಾದ ಪಿ.ವಿ.ಸಿಂಧು, ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಅವರು ತಮ್ಮ ಎದುರಾಳಿಗಳನ್ನು ನೇರ ಸೆಟ್‌ಗಳಿಂದ ಸೋಲಿಸಿ ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತನ್ನು ತಲುಪಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ 21-14, 21-15 ರಿಂದ ವಿಶ್ವದ ಎಂಟನೇ ಕ್ರಮಾಂಕದ ಲೊಹ್ ಕೀನ್ ಯೆ (ಸಿಂಗಪುರ) ಅವರನ್ನು ಸೋಲಿಸಿದ್ದು ಗಮನಸೆಳೆಯಿತು. 30 ನಿಮಿಷಗಳಲ್ಲಿ ಗೆದ್ದ ಶ್ರೀಕಾಂತ್ ಅವರು 16ರ ಸುತ್ತಿನಲ್ಲಿ ಚೀನಾ ತೈಪೆಯ ಸು ಲಿ ಯಾಂಗ್ ಎದುರು ಆಡಲಿದ್ದಾರೆ.

ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ರನ್ನರ್ ಅಪ್, ಏಳನೇ ಶ್ರೇಯಾಂಕದ ಲಕ್ಷ್ಯ ಸೇನ್ 21-16, 21-17 ರಿಂದ ಸಿಂಗಪುರದ ಜಿಯಾ ಹೆಂಗ್ ಜೇಸನ್ ಟೇ ಅವರನ್ನು ಸೋಲಿಸಿದರು.

ಸಿಂಧು ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ 21-12, 21-9 ರಿಂದ ಚೀನಾ ತೈಪೆಯ ಟುಂಗ್ ಸಿಯಾವು-ಟೊಂಗ್ ಅವರನ್ನು ಹಿಮ್ಮೆಟ್ಟಿಸಿದರು. ಸಿಂಧು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಅಮೇಲಿ ಶುಲ್ಝ್ ಅವರನ್ನು ಎದುರಿಸಲಿದ್ದಾರೆ.

ಉದಯೋನ್ಮುಖ ಆಟಗಾರ್ತಿ ದೇವಿಕಾ ಸಿಹಾಗ್ ಕೂಡ ಉತ್ತಮ ಪ್ರದರ್ಶನ ನೀಡಿ, ವಿಶ್ವ ಕ್ರಮಾಂಕದಲ್ಲಿ 26ನೇ ಸ್ಥಾನದಲ್ಲಿರುವ ನಟ್ಸುಕಿ ನಿದೈರಾ (ಜಪಾನ್) ಅವರನ್ನು 21-19, 13-21, 21-15 ರಿಂದ ಸೋಲಿಸಿದರು. ಈ ಪಂದ್ಯ 71 ನಿಮಿಷಗಳವರೆಗೆ ನಡೆಯಿತು.

ಯುವ ಆಟಗಾರ್ತಿ ಮಾಳವಿಕಾ ಬನ್ಸೋಡ್ 13-21, 26-24, 21-13 ರಿಂದ ಚೀನಾದ ವೆನ್ ಯು ಝಾಂಗ್ ವಿರುದ್ಧ ಜಯಗಳಿಸಿದರು.

ಹಾಕಿ ಇಂಡಿಯಾ ವಿರುದ್ಧ ಶ್ರೀಜೇಶ್ ಕಿಡಿ

ನವದೆಹಲಿ (ಪಿಟಿಐ): ಭಾರತ 21 ವರ್ಷದೊಳಗಿನವರ ತಂಡಕ್ಕೆ ಕೋಚ್ ಆಗಿದ್ದ ಪಿ.ಆರ್.ಶ್ರೀಜೇಶ್ ಅವರ ಒಪ್ಪಂದವನ್ನು ಹಾಕಿ ಇಂಡಿಯಾ ಮುಂದುವರಿಸಿಲ್ಲ. ಇದರಿಂದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಆಟಗಾರ ಅಸಮಾಧಾನಗೊಂಡಿದ್ದಾರೆ.

ತಮ್ಮ ಅವಧಿಯಲ್ಲಿ ತಂಡ ಯಶಸ್ಸು ಗಳಿಸಿದ್ದರೂ ಹಾಕಿ ಇಂಡಿಯಾವು ವಿದೇಶಿ ಕೋಚ್ ನೇಮಕಕ್ಕೆ ಮುಂದಾಗಿದೆ ಎಂದು ಅವರು ಆರೋಪಿಸಿದ್ದಾರೆ. ವಿದೇಶಿ ಕೋಚ್‌ಗಳಿಗೆ ಮಣೆಹಾಕುವ ಹಾಕಿ ಇಂಡಿಯಾ ನಿರ್ಧಾರವನ್ನು ಅವರು 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.

'ನನ್ನ ಕೋಚಿಂಗ್ ವೃತ್ತಿ ಒಂದೂವರೆ ವರ್ಷದಲ್ಲಿ ಮುಗಿಯುವಂತೆ ಕಾಣುತ್ತಿದೆ. ಈ ಅವಧಿಯಲ್ಲಿ ನಾವು ಐದು ಟೂರ್ನಿಗಳಲ್ಲಿ ಆಡಿದ್ದೆವು. ಐದರಲ್ಲೂ ಮೊದಲ ಮೂರರಲ್ಲಿ ಸ್ಥಾನ ಗಳಿಸಿದ್ದೆವು' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಕಳಪೆ ಪ್ರದರ್ಶನ ನೀಡಿದ ಕೋಚ್‌ಗಳನ್ನು ಕಿತ್ತುಹಾಕುವುದನ್ನು ಕೇಳಿದ್ದೆ. ಆದರೆ ವಿದೇಶಿ ಕೋಚ್ ನೇಮಕಕ್ಕಾಗಿ ನನ್ನನ್ನು ತೆಗೆದುಹಾಕುತ್ತಿದ್ದಾರೆಂಬ ಭಾವನೆ ಮೂಡಿದೆ' ಎಂದು ಶ್ರೀಜೇಶ್ ಹೇಳಿದ್ದಾರೆ.

2020ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ತಂಡದಲ್ಲಿ ಅವರು ಗೋಲ್ ಕೀಪರ್ ಆಗಿದ್ದರು. ವೃತ್ತಿ ಬದುಕಿಗೆ ನಿವೃತ್ತಿ ಹೇಳಿದ್ದ ಅವರನ್ನು ಭಾರತ ಜೂನಿಯರ್ ತಂಡಕ್ಕೆ ಕೋಚ್ ಆಗಿ ನೇಮಕ ಮಾಡಲಾಗಿತ್ತು.

ಶ್ರೀಜೇಶ್ ಅವರ ಕೋಚಿಂಗ್ ಅವಧಿಯಲ್ಲಿ ಭಾರತ 21 ವರ್ಷದೊಳಗಿನವರ ತಂಡವು, ಸುಲ್ತಾನ್ ಜೋಹರ್ ಕಪ್ ಫೈನಲ್ ತಲುಪಿತ್ತು. ಜೂನಿಯರ್ ವಿಶ್ವಕಪ್‌ನಲ್ಲಿ ಕಂಚಿನ ಪದಕ ಮತ್ತು ಮಸ್ಕತ್‌ನಲ್ಲಿ ನಡೆದ ಜೂನಿಯರ್ ಏಷ್ಯಾ ಕಪ್‌ನಲ್ಲಿ ಚಿನ್ನದ ಪದಕ ತನ್ನದಾಗಿಸಿಕೊಂಡಿತ್ತು.

ಹಾಕಿ ಇಂಡಿಯಾ ಸ್ಪಷ್ಟನೆ: ಈ ಬಗ್ಗೆ ಪ್ರತಿಕ್ರಿಯಿಸಿರುವ ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕೆ ಅವರು, 'ಶ್ರೀಜೇಶ್ ಅವರನ್ನು ಕೋಚಿಂಗ್ ಹುದ್ದೆಯಿಂದ ಕಿತ್ತುಹಾಕಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಅವರ ಒಪ್ಪಂದದ ಅವಧಿ 2025ರ ಡಿಸೆಂಬರ್‌ನಲ್ಲಿ ಮುಗಿದಿದ್ದು, ಆಯ್ಕೆ ಪ್ರಕ್ರಿಯೆ ಮೂಲಕ ಅರ್ಹತೆ ಆಧರಿಸಿ ಹೊಸ ನೇಮಕ ಮಾಡಲಾಗುವುದು ಎಂದು ಹಾಕಿ ಇಂಡಿಯಾ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಟರ ಘಟ್ಟಕ್ಕೆ ಕ್ರಿಶ್, ಮನೀಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿರುವ ಬೆಂಗಳೂರಿನ ಕ್ರಿಶ್ ತ್ಯಾಗಿ ನಿರಾಯಾಸ ಗೆಲುವು ಸಾಧಿಸುವಂತೆ ಕಂಡಾಗ ಒಂದಷ್ಟು ತಪ್ಪುಗಳನ್ನು ಎಸಗಿದರು. ಆದರೆ ಅವು ದುಬಾರಿಯಾಗದೇ ಅವರು 6-4, 6-4 ರಿಂದ ಜಪಾನ್‌ನ ಯೂತಾ ಕವಾಹಾಶಿ ಅವರನ್ನು ಸೋಲಿಸಿ ಕರ್ನಾಟಕ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಕ್ವಾರ್ಟರ್ ಫೈನಲ್ ತಲುಪಿದರು.

ಕಬ್ಬನ್‌ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ, 19 ವರ್ಷ ವಯಸ್ಸಿನ ಕ್ರಿಶ್ ಮೊದಲ ಸೆಟ್ ಗೆದ್ದ ನಂತರ ಎರಡನೇ ಸೆಟ್‌ನಲ್ಲಿ 4-1 ಮುನ್ನಡೆ ಸಾಧಿಸಿದ್ದರು.

ಭರ್ಜರಿ ಸರ್ವ್, ಶಕ್ತಿಶಾಲಿ ಹೊಡೆತಗಳನ್ನು ಆಡಿದ ಅವರು ಎರಡನೇ ಸೆಟ್‌ನಲ್ಲಿ ಒಂದು ಸರ್ವ್ ಕಳೆದುಕೊಂಡಿದ್ದರೂ ಸುಲಭ ಗೆಲುವಿನ ಹಾದಿಯಲ್ಲಿದ್ದರು. ಆದರೆ ಈ ಹಂತದಲ್ಲಿ ತಪ್ಪುಗಳಾದವು. ಮೊದಲ ಸರ್ವ್‌ಗಳಲ್ಲಿ 'ಫಾಲ್ಟ್'ಗಳಾದವು. ಅವರ ಹೊಡೆತಗಳು ಅಂಕಣದಾಚೆ ಹೋದವು. ಜಪಾನ್‌ನ ಆಟಗಾರ ಇದರಿಂದ ಅಂತರವನ್ನು 3-4ಕ್ಕೆ ಇಳಿಸಿದರು. ಆದರೆ ಸಂಯಮ ಕಳೆದುಕೊಳ್ಳದೇ ಆಡಿದ ಅವರು ಮೊದಲಿನ ಲಯಕ್ಕೆ ಮರಳಿ ಪಂದ್ಯ ಗೆದ್ದರು.

ಕ್ರಿಶ್ ಜೊತೆ, ಚೆನ್ನೈನ 26 ವರ್ಷ ವಯಸ್ಸಿನ ಮನೀಶ್ ಸುರೇಶ್ ಕುಮಾರ್ ಅವರು ಕಣದಲ್ಲಿ ಉಳಿದಿರುವ ಭಾರತದ ಇನ್ನೊಬ್ಬ ಆಟಗಾರ ಎನಿಸಿದ್ದಾರೆ. ಇಬ್ಬರೂ ಇದೇ ಮೊದಲ ಬಾರಿ ಎಟಿಪಿ ಚಾಲೆಂಜರ್ ಮಟ್ಟದ ಟೂರ್ನಿಯಲ್ಲಿ ಎಂಟರ ಘಟ್ಟ ತಲುಪಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 829ನೇ ಸ್ಥಾನದಲ್ಲಿರುವ ಮನೀಶ್ 6-4, 3-2 ರಿಂದ ಮುಂದಿದ್ದಾಗ ಅವರ ಎದುರಾಳಿ ಬ್ರಿಟನ್‌ನ ಅಲಿಸ್ಟರ್ ಗ್ರೇ ಪಂದ್ಯ ಬಿಟ್ಟುಕೊಟ್ಟರು.

ಆದರೆ ಮುಕುಂದ್ ಶಶಿಕುಮಾರ್ ಹೊರಬಿದ್ದರು. ಬ್ರಿಟನ್‌ನ ಆಟಗಾರ, ಎರಡನೇ ಶ್ರೇಯಾಂಕದ ಹಮಿಶ್ ಸ್ಟುವರ್ಟ್ (ವಿಶ್ವ ಕ್ರಮಾಂಕದಲ್ಲಿ 292ನೇ ಸ್ಥಾನ) 6-4, 6-4 ರಿಂದ ಮುಕುಂದ್ ಅವರನ್ನು ಸೋಲಿಸಿದರು.

ಅಗ್ರ ಶ್ರೇಯಾಂಕದ ಕೀಗನ್ ಸ್ಮಿತ್ (ಅಮೆರಿಕ) 4-6, 6-3, 6-4 ರಿಂದ ಝೆಕ್ ರಿಪಬ್ಲಿಕ್‌ನ ಡೊಮಿನಿಕ್ ಪಾಲನ್ ಅವರನ್ನು, ನಾಲ್ಕನೇ ಶ್ರೇಯಾಂಕದ ಫಿಲಿಪ್ ಸೆಕುಲಿಕ್ (ಆಸ್ಟ್ರೇಲಿಯಾ) ಅವರು 6-2, 6-3 ರಿಂದ ಕ್ರಿಸ್ಟೋಫರ್ ಪಾಪಾ ಅವರನ್ನು, ಐದನೇ ಶ್ರೇಯಾಂಕದ ಒ.ಮಿಲಿಕ್ (ಸರ್ಬಿಯಾ) 3-6, 6-4, 6-3 ರಿಂದ ಜೋಶುವಾ ಚಾರ್ಲ್‌ಟನ್ (ಆಸ್ಟ್ರೇಲಿಯಾ) ಅವರನ್ನು, ಇಲ್ಯಾ ಇವಾಶ್ಕ (ಬೆಲರೂಸ್) 6-1, 6-2 ರಿಂದ ಕೊಕೊರೊ ಇಸೊಮುರಾ (ಜಪಾನ್) ಅವರನ್ನು, ಏಳನೇ ಶ್ರೇಯಾಂಕದ ಮಿತ್ ವೇಲ್ಸ್ (ಇಸ್ರೇನ್) ಅವರನ್ನು ಸೋಲಿಸಿದರು.

ಕ್ರಿಶ್ ತ್ಯಾಗಿ ಪ್ರಜಾವಾಣಿ ಚಿತ್ರ